ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸೆಪ್ಟಂಬರ್ 14-20, 1998 ರೂ. 2.00

ಸೆಪ್ಟಂಬರ್ 16
ದಿಲ್ಲಿ ಚಲೋ!

ಅಭೂತಪೂರ್ವ ಬೆಲೆಯೇರಿಕೆಯ ವಿರುದ್ಧ
ಜನರ ಬದುಕಿನ ಮೇಲೆ ಧಾಳಿಗಳ ವಿರುದ್ಧ
ದೇಶದ ಆರ್ಥಿಕವನ್ನು ಒತ್ತೆಯಿಡುವುದರ ವಿರುದ್ಧ
ದೇಶದ ಐಕ್ಯತೆಗೆ ಕೋಮುವಾದದ ಬೆದರಿಕೆಯ ವಿರುದ್ಧ

ಬಿಜೆಪಿ ಸರ್ಕಾರದ ಪ್ರಾಮಾಣಿಕತೆಯೇ ಈಗ ಪ್ರಶ್ನಾರ್ಹ

ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದ ಬೇಜ್‌ಬರುವಾ ವರ್ಗ ರದ್ದು

ದೇಶದ ಆಡಳಿತದ ಒಂದು ಪ್ರಮುಖ ಅಂಗವಾದ ಜ್ಯಾರಿ ನಿರ್ದೇಶನಾಲಯದ ನಿರ್ದೇಶಕರ ವರ್ಗಾವಣೆ ದೇಶದ ಸರ್ವೋಚ್ಚ ನ್ಯಾಯಲಯದ ಮಧ್ಯ ಪ್ರವೇಶದಿಂದ ರದ್ದಾದ ಒಂದು ಅಭೂತಪೂರ್ವ ಘಟನೆ ಈ ವಾರ ನಡೆದಿದೆ. ಇದು ಕೇವಲ ಸಾಮಾನ್ಯ ವರ್ಗಾವರ್ಗಿಯ ಭಾಗ, ಇದರ ಹಿಂದೆ ದುರುದ್ದೇಶವೇನೂ ಇರಲಿಲ್ಲ ಎಂದು ವಾಜಪೇಯಿ ಸರಕಾರದ ಮುಖಂಡರು ಕಳೆದ ಒಂದು ತಿಂಗಳಿಂದ ಹಾಡುತ್ತಿದ್ದ ರಾಗವನ್ನು ದೇಶದ ಬಹುಪಾಲು ಜನ ನಂಬಿರಲಿಲ್ಲ. ಈಗ ದೇಶದ ಸರ್ವೋಚ್ಚ ನ್ಯಾಯಾಲಯವೂ ಅದನ್ನು ಒಪ್ಪಲು ಸಿದ್ಧವಾಗದೆ ಶ್ರೀ ಮಾನಸ್ ಕುಮಾರ್ ಬೇಜ್‌ಬರುವಾರವರ ವರ್ಗಾವಣೆಯನ್ನು ರದ್ದುಗೊಳಿಸಲು ಆದೇಶ ನೀಡಿ, ಅದು ರದ್ದಾಗಿರುವುದು ವಾಜಪೇಯಿ ಸರಕಾರಕ್ಕಾಗಿರುವ ದೊಡ್ಡ ಮುಖಭಂಗ. ಬಿಜೆಪಿ ವಕ್ತಾರರು ಏನೇ ಹೇಳಲಿ, ಇಡೀ ಪ್ರಕರಣದ ಬಗ್ಗೆ ಪ್ರಧಾನ ಮಂತ್ರಿಗಳು ತನಿಖೆಗೆ ಆದೇಶ ನೀಡಿರುವುದು ಇದೊಂದು ತನಗಾದ ಮುಖಭಂಗ ಎಂದು ಬಿಜೆಪಿ ಕೂಡಾ ಒಪ್ಪಿಕೊಂಡಿದೆ ಎಂಬುದಕ್ಕೆ ಸಾಕ್ಷಿ.

ಈ ರೀತಿ ತನಿಖೆಗೆ ಆದೇಶಿಸಿರುವುದು ಒಂದೆಡೆ ಈ ಸರಕಾರದ ಅಸಮರ್ಥತೆಯನ್ನು ತೋರಿಸಿದರೆ, ಅದಕ್ಕಿಂತ ಹೆಚ್ಚಾಗಿ ಈ ಸರಕಾರದ ಮುಖಂಡರ ಸೋಗಲಾಡಿತನವನ್ನು ಮತ್ತೊಮ್ಮೆ ಎತ್ತಿ ತೋರಿದೆ. ಏಕೆಂದರೆ ಆಗಸ್ಟ್ 11 ರಿಂದ ಆರಂಭವಾದ ಘಟನಾವಳಿಯ ಆರಂಭದಲ್ಲೇ ಬೇಜ್‌ಬರುವಾರ ವರ್ಗಾವಣೆಯ ಹಿಂದೆ ಕಂಡ ತರಾತುರಿ ಬಹಳಷ್ಟು ಸಂದೇಹಗಳನ್ನೆಬ್ಬಿಸಿತ್ತು.

ಪ್ರಾಮಾಣಿಕ, ನಿಷ್ಠುರ ಅಧಿಕಾರಿಯೆಂದು ಹೆಸರಾಗಿದ್ದ ಬೇಜ್‌ಬರುವಾ ಹವಾಲಾಕಾಂಡ, ಚಂದ್ರಸ್ವಾಮಿ, ಪತ್ರಿಕಾ ದೊರೆ ಅಶೋಕ್ ಜೈನ್ ಮತ್ತಿತರ ಹಲವು ದೊಡ್ಡ-ದೊಡ್ಡ ತಲೆಗಳ ಮೇಲಿದ್ದ ವಿದೇಶಿ ವಿನಿಮಯ ಉಲ್ಲಂಘನೆಗಳ ಆಪಾದನೆಗಳ ತನಿಖೆ ನಡೆಸುತ್ತಿದ್ದುದರಿಂದ ಅವರ ವರ್ಗಾವಣೆಗೆ ಬಹಳ ಸಮಯದಿಂದ ಪ್ರಯತ್ನ ನಡೆಯುತ್ತಿತ್ತು. ಬಿಜೆಪಿ ಸರಕಾರದ ಆಡಳಿತದಲ್ಲಿ ಅದು ಫಲಿಸಿತು.


- ಆಗಸ್ಟ್ 11 ರಂದು ದಿಲ್ಲಿ ರಾಜ್ಯದ ಮುಖ್ಯಮಂತ್ರಿ ಸಾಹಿಬ್ ಸಿಂಗ್ ವರ್ಮಾ ದಿಲ್ಲಿ ಸಾರಿಗೆ ವಿಭಾಗದ ನಿರ್ವಹಣೆಗೆ ಒಬ್ಬ ನಿಷ್ಠುರ, ಪ್ರಾಮಾಣಿಕ ಅಧಿಕಾರಿ ಬೇಕು, ಎಂದು ಕೇಂದ್ರ ಸರಕಾರವನ್ನು ಕೇಳಿದರಂತೆ. ಅದೇ ದಿನ ಗೃಹಮಂತ್ರಿ ಅಡ್ವಾಣಿ ಈ "ಕೇಳಿಕೆಗೆ ಓಗೊಟ್ಟು" ಬೇಜ್‌ಬರುವಾರನ್ನು ಜ್ಯಾರಿ ನಿರ್ದೇಶನಾಲಯದಿಂದ ದಿಲ್ಲಿ ಆಡಳಿತಕ್ಕೆ ವಾಪಸು ಕಳಿಸುವ ಆದೇಶಕ್ಕೆ ಸಹಿಹಾಕಿದರು.
- ಆಗಸ್ಟ್ 12 ರಂದು ಅದು ಹಣಕಾಸು ಮಂತ್ರಿಗಳ ಬಳಿ ಹೋಯಿತು. ಮಧ್ಯಾಹ್ನವೇ ಅಲ್ಲಿಯೂ ಅನುಮೋದನೆ ಪಡೆದು ಸಿಬ್ಬಂದಿ ಮಂತ್ರಿಯ ಬಳಿ ಬಂತು. ಸಂಬಂಧಪಟ್ಟ ಎಐಎಡಿಎಂಕೆ ಮಂತ್ರಿ ದಿಲ್ಲಿಯಲ್ಲಿರಲಿಲ್ಲ. ಪ್ರಧಾನ ಮಂತ್ರಿಗಳ ಕಚೇರಿಗೆ ಈ ಫೈಲು ಅಷ್ಟೇ ವೇಗದಲ್ಲಿ ಬರಲು ಇದರಿಂದ ಅಡ್ಡಿಯಾದಾಗ ಗೃಹಮಂತ್ರಾಲಯ ಮತ್ತು ಹಣಕಾಸು ಮಂತ್ರಾಲಯದಲ್ಲಿ ಇದ್ದ ಆದೇಶಗಳ ನಕಲುಗಳನ್ನು ಸಂಗ್ರಹಿಸಿ ಫೈಲನ್ನು ಪುನರ್ರಚಿಸಿ ಅದೇ ರಾತ್ರಿ ಪ್ರಧಾನಮಂತ್ರಿಗಳ ಕಚೇರಿಗೆ ತಲುಪಿಸಲಾಯಿತು.
- ಆಗಸ್ಟ್ 13 - ಪ್ರಧಾನಮಂತ್ರಿಗಳು ವರ್ಗಾವಣೆ ಆದೇಶಕ್ಕೆ ಸಹಿ ಮಾಡಿದರು. ಮಧ್ಯಾಹ್ನದ ವೇಳೆಗೆ ಆದೇಶ ಬೇಜ್‌ಬರುವಾರನ್ನು ತಲುಪಿತು. ಅದರಲ್ಲಿ ತಕ್ಷಣ ಅಧಿಕಾರವನ್ನು ಎಂ.ಸಿ.ಜೋಶಿ ಎಂಬುವರಿಗೆ ವಹಿಸಿ ಕೊಡಬೇಕೆಂದಿತ್ತು. ಆದರೆ ಅವರನ್ನು ದಿಲ್ಲಿ ಸರಕಾರದ ಸಾರಿಗೆ ಕಮಿಶನರಾಗಿ ನೇಮಿಸುವ ಆದೇಶವಿರಲಿಲ್ಲ.
- ಮರುದಿನದಿಂದ ಈ ವರ್ಗಾವಣೆಗೆ ಜಯಲಲಿತಾರ ಒತ್ತಡ ಕಾರಣ ಎಂಬ ವದಂತಿಗಳು ಹಬ್ಬಿದವು. ಕುಪಿತರಾದ ಜಯಲಲಿತಾ ಪ್ರಧಾನಿಗಳಿಗೆ ನಿಕಟರಾಗಿರುವ ವ್ಯಕ್ತಿಯೊಬ್ಬರಿಗೆ ಪತ್ರಿಕಾ ದೊರೆಯೊಬ್ಬರು 'ಭಾರಿ ಲಂಚ' ನೀಡಿ ಈ ವರ್ಗಾವಣೆ ನಡೆಸಿದ್ದಾರೆಂದು ಪ್ರತ್ಯಾರೋಪ ಮಾಡಿದರು. ಅವರ ವರ್ಗಾವಣೆಯನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿದರು.
- ಆಗಸ್ಟ್ 18 ರಂದು ಇಂಡಿಯನ್ ಬ್ಯಾಂಕ್ ಕೇಸಿನ ವಿಚಾರಣೆಯ ವೇಳೆಗೆ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ನ್ಯಾಯಪೀಠ ಬೇಜ್‌ಬರುವಾರ ವರ್ಗಾವಣೆಯ ಬಗ್ಗೆ ತೀವ್ರ ಖೇದ ವ್ಯಕ್ತಪಡಿಸುತ್ತಾ ಸೆಪ್ಟೆಂಬರ್ 8 ರಂದು ಆದೇಶ ನೀಡುವವರೆಗೆ ಬೇಜ್‌ಬರುವಾರ ವರ್ಗಾವಣೆ ಸುಪ್ರೀಂ ಕೋರ್ಟಿನ ಆದೇಶಕ್ಕೆ ಒಳಗಾಗಿರುತ್ತದೆ ಎಂದಿತು. ಸಿಬ್ಬಂದಿ ಮಂತ್ರಿಯವರು ಕೂಡಾ ಅಧಿಕಾರ ವಹಿಸಿಕೊಳ್ಳಬೇಡಿ ಎಂದು ಬೇಜ್‌ಬರುವಾರಿಗೆ ಮೌಖಿಕವಾಗಿ ತಿಳಿಸಿದರಂತೆ.
- ಸೆಪ್ಟಂಬರ್ 8 ರಂದು ಸರಕಾರ ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳಲು ಸಲ್ಲಿಸಿದ ಅಫಿಡವಿಟ್ ಕಳೆದ ಡಿಸೆಂಬರ್ 18 ರಂದು ಸುಪ್ರೀಂಕೋರ್ಟ್ ಜೈನ್ ಹವಾಲಾ ಕೇಸಿನಲ್ಲಿ ನೀಡಿದ ತೀರ್ಪಿನ ಆಸರೆ ಪಡೆದಿರುವುದು 'ತಪ್ಪು ದಾರಿಗೆಳೆಯುವಂತದ್ದು' ಎಂದು ತೀಕ್ಷ್ಣವಾಗಿ ಟೀಕಿಸಿತು. ಆ ತೀರ್ಪನ್ನು ತಪ್ಪಾಗಿ ಅರ್ಥೈಸಲು ಪ್ರಯತ್ನಿಸಿದೆ ಎಂದೂ ಅದು ಸರಕಾರವನ್ನು ತರಾಟೆಗೆ ತೆಗೆದುಕೊಂಡಿತು.
- ಸೆಪ್ಟೆಂಬರ್ 9 ರಂದು ಸರಕಾರ ನ್ಯಾಯಾಲಯದ ಎದುರು ಹೊಸದಾಗಿ ಲಿಖಿತ ಹೇಳಿಕೆ ಸಲ್ಲಿಸಿತು. ಅದರ ಮೊದಲ ನಾಲ್ಕು ಪರಿಚ್ಛೇದಗಳಲ್ಲಿ ವರ್ಗಾವಣೆಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡುತ್ತಾ ಐದನೇ ಪರಿಚ್ಛೇದದಲ್ಲಿ ಈ ವರ್ಗಾವಣೆ ದುರುದ್ದೇಶದಿಂದ ಕೂಡಿದ್ದಲ್ಲ ಎಂದು ಪ್ರಮಾಣೀಕರಿಸಲು ಈ ವರ್ಗಾವಣೆ ಆದೇಶವನ್ನು ಕೇಂದ್ರ ಸರ್ಕಾರ ರದ್ದು ಮಾಡುತ್ತದೆ ಎನ್ನಲಾಗಿತ್ತು.

ಸುಪ್ರೀಂ ಕೋರ್ಟ್ ಇದನ್ನು ಗಮನಿಸಿ ಈ ಅಂಶವನ್ನು ತಕ್ಷಣ ಜಾರಿಗೊಳಿಸಬೇಕು ಎಂದರೆ ವರ್ಗಾವಣೆಯನ್ನು ರದ್ದು ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತು. "ಇದರರ್ಥ ಉಳಿದ ನಾಲ್ಕು ಪರಿಚ್ಛೇದಗಳಲ್ಲಿ ಸರಕಾರ ಸಮರ್ಥಿಸಿಕೊಂಡದ್ದನ್ನು ಸರಿ ಎಂದು ನ್ಯಾಯಾಲಯ ಒಪ್ಪಿಕೊಂಡಿದೆಯೆಂದೇನೂ ಅಲ್ಲ" ಎಂದೂ ಜತೆಗೆ ನ್ಯಾಯಪೀಠ ಸ್ಪಷ್ಟಪಡಿಸಿತು. ಅಂದರೆ ಇದು ಸಾಮಾನ್ಯ ವರ್ಗಾವಣೆ ಎಂಬ ಸರಕಾರದ ಸಮರ್ಥನೆಯನ್ನು ಒಪ್ಪಿಕೊಳ್ಳುವುದಿಲ್ಲ ಎಂಬ ಸೂಚನೆಯೊಂದಿಗೆ ವಾಜಪೇಯಿ ಸರಕಾರಕ್ಕೆ ಕಪಾಳಮೋಕ್ಷವಾದಂತಾಯಿತು. ಅಂತೂ ಸುಪ್ರೀಂ ಕೋರ್ಟ್‌ನ ಆದೇಶ ತಪ್ಪೊಂದನ್ನು ಸರಿಪಡಿಸಿತು.

ಇಲ್ಲಿ ಗಮನಿಸಬೇಕಾದ ಇನ್ನೂ ಎರಡು ಅಂಶಗಳಿವೆ - ಒಂದು, ದಿಲ್ಲಿ ರಾಜ್ಯದ ಈಗಿನ ಮುಖ್ಯಮಂತ್ರಿಗಳು ಈ ಹಿಂದೆ ಅಲ್ಲಿ ಶಿಕ್ಷಣ ಮಂತ್ರಿಯಾಗಿದ್ದಾಗ ದಿಲ್ಲಿ ಆಡಳಿತದಲ್ಲಿ ಶಿಕ್ಷಣ ಕಾರ್ಯದರ್ಶಿಗಳಾಗಿದ್ದ ಇದೇ ಬೇಜ್‌ಬರುವಾರೊಂದಿಗೆ ತಿಕ್ಕಾಟ ನಡೆದು ವರ್ಮಾರ ಲಿಖಿತ ಕೋರಿಕೆಯ ಮೇರೆಗೆ ಅವರನ್ನು ವರ್ಗ ಮಾಡಲಾಗಿತ್ತು. ಎರಡು, ಕೇಂದ್ರ ಸಿಬ್ಬಂದಿ ಮಂತ್ರಿಗಳು ತನಗೆ ಈ ಬಗ್ಗೆ ತಿಳಿಸಲಿಲ್ಲ ಎಂದಾಗ ಹಾಗೆ ಎಲ್ಲ ಸಂದರ್ಭಗಳಲ್ಲೂ ಸಿಬ್ಬಂದಿ ಮಂತ್ರಿಗಳಿಗೆ ತಿಳಿಸಬೇಕಾಗಿಲ್ಲ ಎಂದು ಇದೇ ಪ್ರಧಾನಿಗಳು ಈ ವರ್ಗಾವಣೆಯನ್ನು ಸಮರ್ಥಿಸಿಕೊಂಡಿದ್ದರು. ಈಗ ತನಿಖೆಗೆ ಆದೇಶ ಏನನ್ನು ಸಮರ್ಥಿಸಲು ಅಥವಾ ಮುಚ್ಚಿಕೊಳ್ಳಲು? ಈ ವರ್ಗಾವಣೆಯ ಹಿಂದೆ ಅತ್ಯಂತ ಅನುಚಿತ ಕಾರಣವಿದೆಯೆಂಬುದಂತೂ ಸ್ಪಷ್ಟ. ಏತಕ್ಕಾಗಿ, ಯಾವ ಪ್ರಭಾವದಿಂದ, ಎಷ್ಟು ಪ್ರಮಾಣದ 'ಭಾರಿ ಲಂಚ' ದಿಂದ ಇದು ನಡೆಯಿತು ಎಂಬುದನ್ನು ಈ ತನಿಖೆ ತಿಳಿಸಬಲ್ಲುದೇ ಎಂದು ದೇಶದ ಪ್ರಜಾಪ್ರಭುತ್ವಾದಿಗಳು ಆತುರದಿಂದ ಕೇಳುತ್ತಿದ್ದಾರೆ.

ಕಾಂ|| ಚಡಯನ್ ಗೋವಿಂದನ್ ನಿಧನ

ಅತ್ಯುತ್ತಮ ಕಮ್ಯುನಿಸ್ಟ್ ಕ್ರಾಂತಿಕಾರಿ-ಪಿ.ಬಿ. ಶ್ರದ್ಧಾಂಜಲಿ



ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯ ಸದಸ್ಯರೂ, ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿಗಳೂ ಆದ ಕಾಮ್ರೇಡ್ ಚಡಯನ್ ಗೋವಿಂದನ್ ಸೆಪ್ಟಂಬರ್ 9, 1998 ರಂದು ನಿಧನರಾದರು. ಅವರಿಗೆ 69 ವರ್ಷ ವಯಸ್ಸಾಗಿತ್ತು. ಅವರು ಸುಮಾರು ಒಂದು ವರ್ಷದಿಂದ ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದರು. ಕಾಂ|| ಚಡಯನ್ ಗೋವಿಂದನ್ ಒಬ್ಬ ಅತ್ಯುತ್ತಮ ಕಮ್ಯುನಿಸ್ಟ್ ಕ್ರಾಂತಿಕಾರಿ ಎಂದು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ತನ್ನ ಶ್ರದ್ಧಾಂಜಲಿ ನಿರ್ಣಯದಲ್ಲಿ ಹೇಳಿದೆ.

ಒಂದು ಕೈಮಗ್ಗ ಕಾರ್ಮಿಕರ ಕುಟುಂಬದಲ್ಲಿ ಹುಟ್ಟಿದ ಗೋವಿಂದನ್ ಸಣ್ಣ ವಯಸ್ಸಿನಲ್ಲೇ ಹೊಟ್ಟೆಪಾಡಿಗೆ ನೇಯ್ಗೆ ಕೆಲಸ ಮಾಡಲಾರಂಭಿಸಿದರು. ಎರಡನೇ ಮಹಾಯುದ್ಧದ ವೇಳೆಗೆ ಅವರು ಕಮ್ಯುನಿಸ್ಟ್ ಆಂದೋಲನದತ್ತ ಆಕರ್ಷಿತರಾದರು. ಯುದ್ಧಾನಂತರ ಭುಗಿಲೆದ್ದ ಉತ್ಕ್ರಾಂತಿಯ ವೇಳೆಯಲ್ಲಿ ಅವರೊಂದು ಸಮರಧೀರ ಕಾರ್ಯಕರ್ತರಾಗಿ ಹೊರಹೊಮ್ಮಿದರು. ದುಡಿಯುವ ಜನಗಳ ಹಲವಾರು ಹೋರಾಟಗಳಿಗೆ ನೇತೃತ್ವ ನೀಡಿದರು. 1948ರ ಪೋಲೀಸ್ ದಮನಕ್ಕೆ ಕಂಡುಬಂದ ಪ್ರತಿರೋಧದಲ್ಲಿ ಅವರು ಮುಂಚೂಣಿಯಲ್ಲಿದ್ದರು. ಈ ಅವಧಿಯಲ್ಲಿ 20 ತಿಂಗಳುಗಳ ಕಾಲ ಅವರು ವಿವಿಧೆಡೆ ಜೈಲುವಾಸ ಅನುಭವಿಸಬೇಕಾಗಿ ಬಂತು. 1950ರ ಪಡಿಕುಣ್ಣು ಘಟನೆಯ ನಂತರ ಅವರು ತೀವ್ರ ಪೋಲೀಸ್ ಚಿತ್ರಹಿಂಸೆ ಎದುರಿಸಬೇಕಾಗಿ ಬಂತು.

ಕಣ್ಣೂರು ಜಿಲ್ಲೆಯಲ್ಲಿ ಕೈಮಗ್ಗ ಕಾರ್ಮಿಕರನ್ನು ಸಂಘಟಿಸುವುದರೊಂದಿಗೆ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದ ಕಾಮ್ರೇಡ್ ಚಡಯನ್ ಗೋವಿಂದನ್ ಕಮ್ಯುನಿಸ್ಟ್ ಪಕ್ಷಕ್ಕೆ ತನ್ನ ದೃಢ ಬದ್ಧತೆ ಹಾಗೂ ಅಪರೂಪದ ಸಂಘಟನಾ ಕೌಶಲ್ಯದಿಂದಾಗಿ ಸಿ.ಪಿ.ಐ.(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿಯ ಸ್ಥಾನವನ್ನೇರಿದರು. 1962ರಲ್ಲಿ ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾಗಿ ಕಣ್ಣೂರು ಜಿಲ್ಲೆಯಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ ನಂತರ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾದರು. 1977ರಲ್ಲಿ ಅವರು ಕೇರಳ ರಾಜ್ಯಸಮಿತಿಗೆ ಚುನಾಯಿಸಲ್ಪಟ್ಟರು. 1986ರಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದರು. 1995ರಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದರು. 1996ರಲ್ಲಿ ಅವರು ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿ ಸ್ಥಾನವನ್ನು ವಹಿಸಿಕೊಂಡರು.

ಕಾಮ್ರೇಡ್ ಚಡಯನ್ ಗೋವಿಂದನ್ ಕಮ್ಯುನಿಸ್ಟ್ ನೀತಿಗಳಿಗೆ ದೃಢ ಬದ್ಧತೆ ಹೊಂದಿದ ಮುಖಂಡ ಎಂದು ಪ್ರಖ್ಯಾತರಾಗಿದ್ದರು. ತನ್ನ ವಿಶಿಷ್ಟ ಸಂಘಟನಾ ಕೌಶಲ್ಯದಿಂದಾಗಿ ಅವರು ರಾಜ್ಯದಲ್ಲಿ ಪಕ್ಷದ ಮತ್ತು ಕಮ್ಯುನಿಸ್ಟ್ ಆಂದೋಲನದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದರು. ಅವರು ಸದಾ ನೀತಿಬದ್ಧ ನಿಲುವುಗಳ ಆಧಾರದಲ್ಲಿ ಪಕ್ಷದ ಐಕ್ಯತೆಗಾಗಿ ಶ್ರಮಿಸಿದರು. ಪಕ್ಷದ ಹಿತದೃಷ್ಟಿಯಿಂದ ತಮ್ಮ ಅಭಿಪ್ರಾಯಗಳನ್ನು ನೇರವಾಗಿ ಅಭಿವ್ಯಕ್ತ ಮಾಡುತ್ತಿದ್ದರು. ಸರಳ ಜೀವಿಯಾದ ಅವರು ಅತ್ಯುತ್ತಮ ಶ್ರಮಿಕ ವರ್ಗದ ಮೌಲ್ಯಗಳ ಪ್ರತಿನಿಧಿಯಾಗಿದ್ದರು. ಮುಂಬರುವ ಕಮ್ಯುನಿಸ್ಟರ ಹಲವಾರು ಪೀಳಿಗೆಗೆ ಅವರ ಜೀವನ ಸ್ಫೂರ್ತಿ ನೀಡುತ್ತದೆ. ತನ್ನ ಕೊನೆಯ ದಿನಗಳಲ್ಲಿ ಒಂದು ಗಂಭೀರ ಕಾಯಿಲೆಯ ಸಂಕಷ್ಟವನ್ನು ಅವರು ದೃಢತೆಯಿಂದ ಎದುರಿಸಿ, ಕೊನೆಗಳಿಗೆಯವರೆಗೂ ತನ್ನ ಜವಾಬ್ದಾರಿಗಳನ್ನು ಧೀರತನದಿಂದ ನಿಭಾಯಿಸಿದರು ಎಂದು ಶ್ರದ್ಧಾಂಜಲಿ ವ್ಯಕ್ತಪಡಿಸಿರುವ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಅವರ ಪತ್ನಿ, ನಾಲ್ಕು ಮಕ್ಕಳು ಹಾಗೂ ಕುಟುಂಬದ ಇತರ ಸದಸ್ಯರಿಗೆ ತನ್ನ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದೆ.

ಸಾಗರದ ತಡಿಯಲ್ಲಿ ಕಾಂ|| ಚಡಯನ್‌ರಿಗೆ ಲಾಲ್ ಸಲಾಂ

ಜನಸಾಗರದ ಮಧ್ಯದಿಂದ ಮೇಲೆದ್ದು ಬಂದ ಕಾರ್ಮಿಕ ವರ್ಗದ ನಾಯಕ, ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ|| ಚಡಯನ್ ಗೋವಿಂದನ್ ಅವರ ಪಾರ್ಥಿವ ಶರೀರವನ್ನು ಕಣ್ಣೂರಿನ ಅರಬ್ಬಿ ಸಾಗರದ ತಡಿಯಲ್ಲಿ ದಹನ ಮಾಡಲಾಯಿತು. ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ|| ಹರ್ಕಿಷನ್ ಸಿಂಗ್ ಸುರ್ಜಿತ್,

ಪುಟ 3 ನೋಡಿ

ದೂರಸಂಪರ್ಕ ವಿಸ್ತರಣೆಗೆ ಅಡ್ಡಿಯಾಗಲಿರುವ ದೂರವಾಣಿ ದರ ಏರಿಕೆಯ ಕ್ರಮ


ಸಿ.ಪಿ.ಐ.(ಎಂ) ವಿರೋಧ

ಭಾರತ ದೂರ ಸಂಪರ್ಕ ಹತೋಟಿ ಪ್ರಾಧಿಕಾರ ಅಥವಾ ಟಿ.ಆರ್.ಎ.ಐ. ದೂರವಾಣಿ ಬಾಡಿಗೆ ದರಗಳನ್ನು ಹಾಗೂ ಸ್ಥಳೀಯ ದರಗಳನ್ನು ವಿಪರೀತ ಹೆಚ್ಚಿಸುವ ಶಿಫಾರಸು ಮಾಡಿದೆ. ಇದನ್ನು ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಈ ಶಿಫಾರಸುಗಳು ದೂರವಾಣಿ ಜಾಲ ಜನತೆಯ ಸಾರ್ವಜನಿಕ ಉಪಯೋಗದ ಸಾಧನವಾಗಿ ವಿಸ್ತರಣೆಗೊಳ್ಳುವುದನ್ನು ತಡೆಯುತ್ತದೆ ಎಂದು ಅದು ಹೇಳಿದೆ.

ಇನ್ನೊಂದೆಡೆ ಟಿ.ಆರ್.ಎ.ಐ. ಸೆಲ್ಯುಲಾರ್ ಫೋನ್‌ಗಳ, ದೂರದ ಅಂತರ ರಾಷ್ಟ್ರೀಯ ಕರೆಗಳ ದರಗಳನ್ನು ಇಳಿಸುವ ಪ್ರಸ್ತಾಪವಿಟ್ಟಿದೆ. ಇದು ಶ್ರೀಮಂತ ವಿಭಾಗಗಳಿಗೆ ಸೀಮಿತವಾದ ಸಾಧನಗಳು. ಸಾಮಾನ್ಯ ಬಳಕೆದಾರರಿಗೆ ಕನಿಷ್ಟ ದರಗಳನ್ನು ಹೆಚ್ಚಿಸುವ ಧೋರಣೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಗರಿಷ್ಟ ವಿಸ್ತರಣೆಗೆ ಅನುವು ಮಾಡಿಕೊಡುವ ಟೆಲಿಕಾಂ ನೀತಿಗೆ ತದ್ವಿರುದ್ಧವಾದದ್ದು. ಆದ್ದರಿಂದ ಈ ಪ್ರತಿಗಾಮಿ ಪ್ರಸ್ತಾಪಗಳನ್ನು ಸರಕಾರ ಸ್ವೀಕರಿಸಬಾರದು ಎಂದು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಈ ಕುರಿತು ಹೇಳಿಕೆ ನೀಡಿ ಅಂಚೆ ದರ, ರೈಲು ದರ, ಪೆಟ್ರೋಲ್ ದರಗಳ ಏರಿಕೆಯೊಂದಿಗೆ ಈ ಏರಿಕೆ ಗಾಯದ ಮೇಲೆ ಬರೆಯಾಗಿದೆ ಎಂದು ಟೀಕಿಸಿದೆ. ಇಂತಹ ಜನ-ವಿರೋಧಿ ಶಿಫಾರಸುಗಳನ್ನು ಸರಕಾರ ಒಪ್ಪಿಕೊಂಡರೆ ರಾಜ್ಯಾದ್ಯಂತ ಹೋರಾಟ ನಡೆಸುವುದಾಗಿ ಅದು ಎಚ್ಚರಿಸಿದೆ.





ಇ.ಎಂ.ಎಸ್. ಅಕಾಡೆಮಿಗೆ ಮೂರೇ ದಿನಗಳಲ್ಲಿ ನಾಲ್ಕು ಕೋಟಿ ರೂ. ಸಂಗ್ರಹ

ಇ.ಎಂ.ಎಸ್. ನಂಬೂದರಿಪ್ಪಾಡ್ ಬಗ್ಗೆ ಕೇರಳದ ಜನತೆ ಎಂತಹ ಅಗಾಧ ಗೌರವ ಹೊಂದಿದ್ದಾರೆ, ಸಿಪಿಐ(ಎಂ) ಆ ರಾಜ್ಯದಲ್ಲಿ ಎಷ್ಟು ಚೈತನ್ಯಶಾಲಿಯಾಗಿ ಬೇರುಬಿಟ್ಟಿದೆ ಎಂಬುದು ಮತ್ತೊಮ್ಮೆ ಪ್ರದರ್ಶನಗೊಂಡಿತು.

ಸಿಪಿಐ(ಎಂ)ನ ಕೇರಳ ರಾಜ್ಯ ಸಮಿತಿ ಇ.ಎಂ.ಎಸ್. ರವರ ಹೆಸರಿನಲ್ಲಿ ಒಂದು ಸಂಶೋಧನಾ ಸಂಸ್ಥೆ - ಇ.ಎಂ.ಎಸ್. ಅಕಾಡೆಮಿ-ಆರಂಭಿಸಲು ನಿರ್ಧರಿಸಿ ಇದಕ್ಕೆ ಮೊದಲ ಸುತ್ತಿನ ಹಣ ಸಂಗ್ರಹಣಕ್ಕೆ ಕರೆ ನೀಡಿತು. ಆಗಸ್ಟ್ 22 ರಿಂದ 24 ರವರೆಗೆ 1.1 ಕೋಟಿ ರೂ. ಸಂಗ್ರಹಿಸುವ ಗುರಿಯಿಟ್ಟುಕೊಂಡಿತು. ಆದರೆ ಈ ಮೂರು ದಿನಗಳಲ್ಲಿ ಸಂಗ್ರಹವಾದದ್ದು 4 ಕೋಟಿ 2 ಲಕ್ಷ ರೂಪಾಯಿ! ಪ್ರತಿಯೊಂದು ಜಿಲ್ಲೆ ತನಗೆ ಕೊಟ್ಟ ಕೋಟಾದ ಕನಿಷ್ಠ ಎರಡರಷ್ಟು ಸಂಗ್ರಹಿಸಿತು.

ಹಣ ಸಂಗ್ರಹದ ಭಾಗವಾಗಿ ಪಕ್ಷದ ಸದಸ್ಯರು ಚಿಕ್ಕ ತಂಡಗಳಾಗಿ ಎಲ್ಲಾ ಮನೆ, ಅಂಗಡಿ, ಮಾರುಕಟ್ಟೆ, ಕಾರ್ಖಾನೆ, ಶಾಲೆ-ಕಾಲೇಜು ಇತ್ಯಾದಿಗಳಿಗೆ ಹೋದರು. ಹಣ ಸಂಗ್ರಹದ ಪ್ರಮುಖ ಭಾಗ ಬಂದಿರುವುದು ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ಮಧ್ಯಮ ವರ್ಗದ ನೌಕರರು, ವಿದ್ಯಾರ್ಥಿಗಳು ಮತ್ತು ಯುವಜನರಿಂದ. ತಿಂಗಳ ಮೂರನೇ ವಾರವಾದರೂ ಜನ ತಮ್ಮಲ್ಲೇನಿದೆಯೋ ಅದನ್ನೇ ಕೊಟ್ಟರು. ಕೆಲವರು ಜಮೀನು ಕೊಟ್ಟರು, ಆಭರಣ ಕೊಟ್ಟರು, ಏನೂ ಇಲ್ಲದ ಬಡ ರೈತರು ಆಡು, ಕುರಿ, ಕರು ತಮ್ಮಲ್ಲಿ ಏನಿದೆಯೋ ಅವನ್ನೇ ಕಾಣಿಕೆಯಾಗಿ ಕೊಟ್ಟರು. ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿವೇತನ, ಬಹುಮಾನಗಳನ್ನು ಕೊಟ್ಟರು.

ಕೇರಳ ಪಕ್ಷದ ಘಟಕದ ಸಂಘಟನಾ ಪ್ರಶ್ನೆ ಕುರಿತಂತೆ ಕೇಂದ್ರ ಸಮಿತಿ ಮತ್ತು ರಾಜ್ಯ ಸಮಿತಿಯ ಚರ್ಚೆ ನಡೆದ ಬೆನ್ನ ಹಿಂದೆಯೇ ಈ ಕಾರ್ಯಕ್ರಮ ನಡೆಯಿತು. ಪಕ್ಷ ವಿಭಜನೆಗೊಂಡಿದೆ, ಒಂದು ಸಮರಸಪೂರ್ಣ ಘಟಕವಾಗಿ ಅದಕ್ಕೆ ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಬೂರ್ಜ್ವಾ ಪತ್ರಿಕೆಗಳು ಪುಟಗಟ್ಟಲೆ ವರದಿಗಳನ್ನು ಬರೆದವು. ಇವೆಲ್ಲಾ ಕೇವಲ ಕಂತೆ ಪುರಾಣಗಳು ಎಂದು ಈ ಕಾರ್ಯಕ್ರಮ ಎಲ್ಲರಿಗೂ ಮನದಟ್ಟು ಮಾಡಿತು.

ಇಎಂಎಸ್ ಅಕಾಡೆಮಿ ನಮ್ಮ ಸಮಾಜದ ಕ್ರಾಂತಿಕಾರಿ ಪರಿವರ್ತನೆಗೆ ಇ.ಎಂ.ಎಸ್. ರ ಆಜೀವನ ಬದ್ಧತೆಯನ್ನು ನೆನಪಿಸುವ ಒಂದು ಸ್ಮಾರಕವಾಗಲಿದೆ, ಮುಂಬರುವ ವರ್ಷಗಳಲ್ಲಿ ಪ್ರಜಾಪ್ರಭುತ್ವ ಆಂದೋಲನದ ಸೈದ್ಧಾಂತಿಕ ಅಗತ್ಯಗಳನ್ನು ಪೂರೈಸುವ ಸಂಸ್ಥೆಯಾಗಲಿದೆ. ಅದು ಅಧ್ಯಯನ, ಸಂಶೋಧನೆ, ಪಾಂಡಿತ್ಯ, ಶಿಕ್ಷಣ ಹಾಗೂ ತರಬೇತಿಯ ಕೇಂದ್ರ ವಾಗಲಿದೆ. ಅತ್ಯಾಧುನಿಕ ಸಾಧನಗಳನ್ನು ಬಳಸಿ ಸಾಮಾಜಿಕ ಸುಧಾರಣೆ ಮತ್ತು ಕ್ರಾಂತಿಕಾರಿ ಹೋರಾಟಗಳಿಗೆ ಒಂದು ಸಂಪನ್ಮೂಲ ವಾಗಲಿದೆ.

ಸಿಪಿಐ(ಎಂ)ನ ಕೇರಳ ರಾಜ್ಯ ಸಮಿತಿ ಇ.ಎಂ.ಎಸ್. ಅಕಾಡೆಮಿಯ ದೈನಂದಿನ ಕೆಲಸ ಕಾರ್ಯಗಳ ನಿರ್ವಹಣೆಗೆ ಒಂದು ನಿರ್ದೇಶಕ ಮಂಡಳಿ ರಚಿಸಿದೆ. ಕಾಂ|| ವಿ.ಎಸ್.ಅಚ್ಯುತಾನಂದನ್ ಅಧ್ಯಕ್ಷತೆಯ ಈ ಮಂಡಳಿಯ ಇತರ ಸದಸ್ಯರೆಂದರೆ ಪಲೋಳಿ ಮಹಮ್ಮದ್ ಕುಟ್ಟಿ, ಸುಶೀಲಾ ಗೋಪಾಲನ್, ಎಂ.ಎ.ಬೇಬಿ, ಇ.ಎಂ. ಶ್ರೀಧರನ್, ಪಿ.ಗೋವಿಂದಪಿಳ್ಳೈ, ಟಿ.ಎಂ.ಥಾಮಸ್ ಐಸಾಕ್, ಸಿ.ಪಿ.ನಾರಾಯಣನ್ ಮತ್ತು ಡಾ|| ಕೆ.ಎನ್.ಪಣಿಕ್ಕರ್.

ಒಂದು ಸಲಹಾ ಮಂಡಳಿಯನ್ನೂ ರಚಿಸಲಾಗಿದೆ. ಕಾಂ|| ಇ.ಕೆ.ನಾಯನಾರ್ ಅಧ್ಯಕ್ಷರಾಗಿರುವ ಈ ಮಂಡಳಿಯ ಇತರ ಸದಸ್ಯರೆಂದರೆ ಎಸ್.ರಾಮಚಂದ್ರನ್ ಪಿಳ್ಳೈ, ಇ.ಬಾಲಾನಂದನ್, ಚಡಯನ್ ಗೋವಿಂದನ್, ಟಿ.ಕೆ.ರಾಮಕೃಷ್ಣನ್, ಪಿನರಾಯಿ ವಿಜಯನ್, ಪಿ.ಕೆ.ಕನಕನ್, ಕೋಡಿಯೇರಿ ಬಾಲಕೃಷ್ಣನ್, ಟಿ.ಶಿವದಾಸ ಮೆನನ್, ಪಿ.ಕೆ.ಗುರುದಾಸನ್, ಎಸ್.ಶರ್ಮ, ಸಿ.ಕಣ್ಣನ್, ಎಂ.ಸತ್ಯದೇವನ್, ಪಿ.ಕೆ.ಶ್ರೀಮತಿ, ಪ್ರೊ. ಇರ್ಫಾನ್ ಹಬೀಬ್, ಡಾ|| ಉತ್ಸಾ ಪಟ್ನಾಯಕ್, ಎನ್.ರಾಂ, ಪ್ರೊ.ಸುಕುಮಾರ್ ಅಝಿಕೋಡ್, ಪ್ರೊ.ಐ.ಎನ್.ಗುಲಾಟಿ, ಪ್ರೊ. ಒ.ಎನ್.ವಿ.ಕುರುಪ್, ಡಾ|| ಜಿ.ಬಾಲಮೋಹನ್ ಥಂಪಿ, ಡಾ|| ಕೆ.ಕೆ.ಎನ್.ಕುರುಪ್ ಮತ್ತು ಪ್ರೊ. ಎನ್.ವಿ.ಪಿ.ಉನ್ನಿತಿರಿ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ವಿಶ್ವಸ್ಥ ಮಂಡಳಿ(ಬೋರ್ಡ್ ಆಫ್ ಟ್ರಸ್ಟಿ) ಯಾಗಿ ಕೆಲಸ ಮಾಡುತ್ತದೆ

(ಐಎನ್ಎನ್)



ಬೆಲೆಗಳು ಬೇಗ ಕೆಳಗಿಳಿಯುತ್ತವೆ!



ನಮ್ಮ ಕೇಂದ್ರ ಹಣಕಾಸು ಸಚಿವರು ಇಂತಹ ಅಪ್ಪಣೆ ನೀಡಿದ್ದಾರೆ. ಬಹುಶ ಅಪ್ಪಣೆಗಳಿಂದ ಬೆಲೆಗಳನ್ನು ಕೆಳಗಿಳಿಸ ಬಹುದಾಗಿದ್ದರೆ ಎಲ್ಲ ಹಣಕಾಸು ಮಂತ್ರಿಗಳೂ ಅಪ್ಪಣೆ ಮಂತ್ರಿಗಳಾಗಿ ಬಿಡುತ್ತಿದ್ದರು. ಹಾಗೂ ಬೆಲೆ ಯೇರಿಕೆ ಎಂಬುದು ಸಮಸ್ಯೆಯಾಗುಳಿವ ಪ್ರಶ್ನೆಯೇ ಇರುತ್ತಿರಲಿಲ್ಲ.

ಬೆಲೆಗಳಿಗೂ ಸರ್ಕಾರದ ನೀತಿಗಳಿಗೂ ಸಂಬಂಧವೇ ಇಲ್ಲವೆಂದು ಶ್ರೀ ಸಿನ್ಹಾ ಹೇಳಿ ಹೊಸ ಅರ್ಥಶಾಸ್ತ್ರಕ್ಕೆ ಅಡಿಗಲ್ಲು ಹಾಕಿ ಕೊಟ್ಟಿದ್ದಾರೆ. ಬೆಳೆಗಳಿಂದಾಗಿ ಬೆಲೆಗಳು ಏರಿಳಿಯುವುದರಿಂದ ಮುಂದಿನ ನಾಲ್ಕರಿಂದ ಆರು ವಾರಗಳೊಳಗೆ ಖಾರಿಫ್ ಬೆಳೆ ಕಟಾವು ಆಗಿ ಮಾರುಕಟ್ಟೆಗೆ ಬರುವುದರಿಂದ ಬೆಲೆಗಳು ತಂತಾನೆ ಕೆಳಗಿಳಿಯುತ್ತವೆ ಎಂಬ ಭರವಸೆ ಅವರದು. ಹೀಗೆ ತಂತಾನೆ ಎಲ್ಲ ಆಗುತ್ತಿದ್ದರೆ ಕೇಂದ್ರದಲ್ಲಿ ಹಣಕಾಸು ಮಂತ್ರಿಗಳ ಹುದ್ದೆಯೊಂದು ಯಾಕಿರಬೇಕು ಎಂದು ಕೇಳ ಬೇಡಿ. ಬಹುಶ ಇಂತಹ ಪ್ರಶ್ನೆ ಅಟಲ ಬಿಹಾರಿ ವಾಜಪೇಯಿಯವರ ನಿರ್ಧಾರವನ್ನು ಪ್ರಶ್ನಿಸಿದಂತಾಗಬಹುದು.

ಇಡೀ ಆರ್ಥಿಕಕ್ಕೆ ಪ್ರಚೋದನೆ ನೀಡಿ ಅದನ್ನು ಪುನರುಜ್ಜೀವನಗೊಳಿಸುವ ವಿಚಾರವನ್ನು ಅವರು ಹೊಂದಿದ್ದಾರೆ. ಸ್ಥಗಿತತೆ ಉಂಟಾಗುವ ಎಲ್ಲ ವಲಯಗಳಿಗೂ ಪ್ರಚೋದನೆ ನೀಡುತ್ತಾರಂತೆ ಅವರು.

ಇಡೀ ಆರ್ಥಿಕ ಸುಧಾರಿಸಿಕೊಳ್ಳಲು ನಿರ್ದಿಷ್ಟ ಗಡುವನ್ನೇನಾದರೂ ಹಾಕಿಕೊಂಡಿದ್ದೀರೇ ಎಂಬ ಪ್ರಶ್ನೆಗೆ ಅವರು ಅಂತಹ ಸಮಯ ಮಿತಿ ಹಾಕಿಕೊಳ್ಳುವ ಅಭ್ಯಾಸ ತನಗಿಲ್ಲ ಎಂದರಂತೆ. ಅಂದರೆ ಬೆಲೆಗಳು ಕೆಳಗಿಳಿಯಲು ಸಮಯ ಮಿತಿ ಏನಿಲ್ಲ. ಅವು ಯಾವಾಗ ಇಳಿದರೂ ಆದೀತು ಅಲ್ಲವೆ? ಎಂತಹ ಉತ್ತಮ ನೀತಿ!

ಭಾರತ ಬಾಂಡಿನ ಕತೆ

ಪೋಖ್ರಾನ್‌ನಲ್ಲಿ ಅಣ್ವಸ್ತ್ರ ಪರೀಕ್ಷಣೆ ನಡೆಸಿದ ನಂತರ ಅಮೇರಿಕ ಮುಂತಾದ ಸಾಮ್ರಾಜ್ಯಶಾಹಿ ದೇಶಗಳು ಭಾರತದ ಮೇಲೆ ಆರ್ಥಿಕ ದಿಗ್ಬಂಧನ ಹೇರಿದವು. ಈ ನಿರ್ಬಂಧಗಳೆಂದರೆ ವಿದೇಶಗಳಿಂದ ಹೂಡಿಕೆಗಳಿಗೆ ತಡೆ ಬೀಳುತ್ತದೆ ಎಂದರ್ಥ. ಹಾಗೆ ತಡೆ ಬಿದ್ದರೆ ತೊಂದರೆ ಎಂದು ಸರ್ಕಾರ ತನ್ನ ಬಜೆಟ್ಟಿನಲ್ಲೇ ಭಾರತ ರಿಸರ್ಜೆಂಟ್‌ಬಾಂಡ್ ಎಂಬ ಬಾಂಡನ್ನು ವಿತರಿಸುವ ಯೋಜನೆ ಪ್ರಕಟಿಸಿತು.

ಬಾಂಡೆಂದರೆ ಸರ್ಕಾರವೊ ಖ್ಯಾತ ಕಂಪನಿಯೋ ನೀಡುವ ಸಾಲ ಪತ್ರ. ನಿಗದಿತ ಅವಧಿಗೆ ನಿಗಧಿತ ಬಡ್ಡಿಯನ್ನು ನೀಡಲಾಗುತ್ತದೆ. ರಿಸರ್ಜೆಂಟ್ ಬಾಂಡ್ ಅನ್ನು ಅಮೇರಿಕದ ಡಾಲರು, ಬ್ರಿಟನ್ನಿನ ಸ್ಟರ್ಲಿಂಗ್ ಪೌಂಡ್ ಮತ್ತು ಜರ್ಮನಿಯ ಡಾಯಿಷ್ ಮಾರ್ಕ್‌ಗಳಲ್ಲಿ ನೀಡಲಾಯಿತು. ಅಮೇರಿಕದ ಡಾಲರ್ ಬಾಂಡಿಗೆ ಶೇ 7.75 ರಷ್ಟು ಬಡ್ಡಿಯಾದರೆ ಪೌಂಡಿಗೆ ಶೇ. 8 ಮತ್ತು ಡಾಯಿಷ್ ಮಾರ್ಕಿಗೆ ಶೇ. 6-25 ರಷ್ಟು ಬಡ್ಡಿದರ.

ಈಗ ಅಮೇರಿಕ ಬ್ರಿಟನ್, ಮತ್ತು ಜರ್ಮನಿಗಳ ಬಾಂಡ್ ಮಾರುಕಟ್ಟೆಯನ್ನು ನೋಡುವುದಾದರೆ ಅಲ್ಲಿ ಪ್ರಚಲಿತ ಗರಿಷ್ಠ ಬಾಂಡು ಬಡ್ಡಿ ದರ ಅನುಕ್ರಮವಾಗಿ ಶೇ. 5.45, 5.9 ಮತ್ತು 4.62 ಇದೆ. ಅಂದರೆ ರಿಸರ್ಜೆಂಟ್ ಬಾಂಡ್ ನೀಡಿದ ಬಡ್ಡಿ ದರ ಬಹಳ ಹೆಚ್ಚಿನದು ಎಂಬುದಕ್ಕೆ ಯಾವುದೇ ಸಂದೇಹ ಇಲ್ಲ. ಇರಲಿ. ಇಷ್ಟು ಹೆಚ್ಚಿನ ಬಡ್ಡಿ ದರ ನೀಡಿದರೂ ಬಾಂಡನ್ನು ವಿದೇಶೀಯರು ಕೊಳ್ಳಲಿಲ್ಲ. ಭಾರತೀಯ ಸ್ಟೇಟ್ ಬ್ಯಾಂಕ್ ವಿದೇಶಗಳಲ್ಲಿನ ಮಾರುಕಟ್ಟೆ ಪ್ರಚಾರಕರನ್ನು ಬಳಸಿಕೊಂಡು ಪ್ರಚಾರ ಮಾಡಿ ಹೂಡಿಕೆದಾರರನ್ನು ಈ ಬಾಂಡಿನೆಡೆಗೆ ಆಕರ್ಷಿಸಲು ಬಯಸಿತು. ಆದರೆ ಮೊದಲೇ ಘೋಷಿಸಿದ ಸಮಯ ಮಿತಿಯೊಳಗೆ ಬಾಂಡಿನ ವಿತರಣೆ ಆಗಲಿಲ್ಲ. ಸಮಯ ಮಿತಿಯನ್ನೇ ಹೆಚ್ಚಿಸಲಾಯಿತು. ಇಷ್ಟೆಲ್ಲ ಮಾಡಿದ ಮೇಲೆ ಗುರಿಯಾದ 4 ಶತಕೋಟಿ ಡಾಲರುಗಳಿಗಿಂತ ಸ್ವಲ್ಪ ಹೆಚ್ಚೇ ಹಣ ಸಂಗ್ರಹವಾಯಿತು.

ಇದು ದೊಡ್ಡ ಸಾಧನೆ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ ನಿಜದಲ್ಲಿ ಇದು ಅಂತಹ ಸಾಧನೆಯೇನೂ ಅಲ್ಲ. ಅಷ್ಟು ಹೆಚ್ಚಿನ ಬಡ್ಡಿ ತೆತ್ತು ಪಡೆದ ಸಾಲವನ್ನು ಲಾಭದಾಯಕವಾಗಿ ಹೂಡಿ ಪ್ರತಿಫಲ ಪಡೆವ ತಲೆನೋವು ಭಾರತೀಯ ಸ್ಟೇಟ್ ಬ್ಯಾಂಕಿಗಿದೆ.

ಬ್ಯಾಂಕು ಸಂಗ್ರಹಿತ ಹಣದಲ್ಲಿ ಶೇ.25 ರಷ್ಟನ್ನು ವಿದೇಶಗಳಲ್ಲೇ ಉಳಿಸಿಕೊಳ್ಳುತ್ತದಂತೆ. ಉಳಿದ ಶೇ 75 ಭಾಗದಲ್ಲಿ ಶೇ 36 ರಷ್ಟು ನಿಯಮಾನುಸಾರ ಭಾರತೀಯ ರಿಸರ್ವ್ ಬ್ಯಾಂಕಿಗೆ ಹೋಗುತ್ತದೆ (ಎಸ್.ಎಲ್.ಆರ್ ಮತ್ತು ಸಿಆರ್‌ಆರ್) ಶೇ. 40 ರಷ್ಟನ್ನು ಸಂಗ್ರಹಿಸಿದ ಬ್ಯಾಂಕುಗಳಿಗೆ ವಿತರಿಸಬೇಕಾಗುತ್ತದೆ. ಹೀಗೆ ಭಾರತೀಯ ಸ್ಟೇಟ್ ಬ್ಯಾಂಕಿಗೆ ಬರೀ ಶೇ.9 -10ರಷ್ಟು ಸಂಗ್ರಹಿತ ಹಣ ಉಳಿಯುತ್ತದಂತೆ ಈ ಹಣವನ್ನು ಹೂಡಿ ಲಾಭಗಳಿಸಲು ಬ್ಯಾಂಕು ಶೇ 19-5 ರಷ್ಟು ಪ್ರತಿಫಲ ಬರುವಂತೆ ತೊಡಗಿಸ ಬೇಕಾಗುತ್ತದೆ.

ಈ ಬಾಂಡಿನಿಂದಾಗಿ ಭಾರತೀಯ ಸ್ಟೇಟ್ ಬ್ಯಾಂಕಿನ ಲಾಭದಾಯಕತೆಗೆ ತೀವ್ರ ಹೊಡೆತ ಬೀಳುತ್ತದೆ ಎಂದು ಹಲವು ತಜ್ಞರು ಹೇಳುತ್ತಿದ್ದಾರೆ

ಈ ಬಾಂಡಿನಿಂದಾಗಿ ಇನ್ನೊಂದು ನಂಬಿಕೆಗೂ ಹೊಡೆತ ಬಿದ್ದಿದೆ. ವಿದೇಶೀ ಹೂಡಿಕೆ ಎಂದರೆ ಅಮೇರಿಕದಿಂದ ಬರುವ ಪ್ರಮಾಣವೇ ಅತಿ ದೊಡ್ಡದು ಎಂಬ ನಂಬಿಕೆಗೆ ಈ ಬಾಂಡು ಹೊಡೆತ ಕೊಟ್ಟಿದೆ. ಶೇ 65 ಕ್ಕೂ ಹೆಚ್ಚು ಬಾಂಡ್ ಹಣ ಪಶ್ಚಿಮ ಏಶಿಯಾ ಮತ್ತು ಆಗ್ನೇಯ ಏಶಿಯಾ ದೇಶಗಳಿಂದಲೇ ಬಂದಿದೆಯಂತೆ.

ಇವೆಲ್ಲವುಗಳಿಗಿಂತಲೂ ಬಹು ಆತಂಕಕಾರಿ ವಿಷಯ ಇನ್ನೊಂದಿದೆ. ಈ ಬಾಂಡಿನ ಹೆಸರಿನಲ್ಲಿ ದೇಶೀ ಕಾಳ ಸಂತೆ ಕೋರರೇ ಕಪ್ಪು ಹಣವನ್ನು ಬಿಳಿ ಮಾಡಿಕೊಂಡಿರಬಹುದೆಂಬುದೇ ಅದು. ಕಪ್ಪು ಹಣವಿರುವವರು ಹವಾಲಾ ಮಾರ್ಗದ ಮೂಲಕ ಹಣವನ್ನು ವಿದೇಶಗಳಿಗೆ ಸಾಗಿಸಿ ರಿಸರ್ಜೆಂಟ್ ಬಾಂಡುಗಳಲ್ಲಿ ತೊಡಗಿಸಿರಬಹುದೆಂಬ ಸಂದೇಹ ಈಗ ದಟ್ಟವಾಗಿದೆ. ಈ ಬಾಂಡುಗಳಿಂದ ಬರುವ ಆದಾಯದ ಮೇಲೆ ತೆರಿಗೆಯೂ ಇಲ್ಲ. ಅಂದರೆ ಎರಡುತರಹದ ಲಾಭ ಈ ಕಪ್ಪು ಹಣದ ಖದೀಮರಿಗೆ !!

ನಿಜಕ್ಕೂ ಭಾರತವನ್ನು ಪುನರುಜ್ಜೀವನಗೊಳಿಸುವ ಬಾಂಡಲ್ಲವೆ ಇದು?

ರೋಗಿಗಳಿಗೇಕೆ ಆರೈಕೆ: ಬರೀ ದುಡ್ಡುದಂಡ

ಹೀಗೆ ಹೇಳಿದ್ದು ಬೇರೆ ಯಾರೂ ಅಲ್ಲ ಕೇಂದ್ರ ಸಚಿವ ಸಂಪುಟದ ಆರ್ಥಿಕ ವಿಷಯಗಳ ಮೇಲಿನ ಸಮಿತಿ ಹೀಗೆ ಹೇಳಿದ್ದು. ಯಾವುದರ ಬಗೆಗೆ ಎಂದು ಕೇಳಿದಿರಾ? ರೋಗಗ್ರಸ್ತ ಕಂಪನಿಗಳ ಬಗ್ಗೆ ರೋಗಗ್ರಸ್ತ ಕಂಪನಿಗಳ ಪುನರುಜ್ಜೀವನ ಕ್ಕಾಗಿ 517 ಕೋಟಿ ರೂಪಾಯಿಗಳನ್ನು ನೀಡುವ ಪ್ರಸ್ತಾಪದ ಮೇಲೆ ನಿರ್ಧಾರ ಕೈಗೊಳ್ಳಲು ಈ ಸಮಿತಿ ವಿಫಲವಾಯಿತಂತೆ. ಬಿಐಎಫ್‌ಆರ್ ಈ ಕಂಪನಿಗಳನ್ನು ರೋಗಗ್ರಸ್ತ ಎಂದು ಆಗಲೇ ಘೋಷಿಸಿ ಆಗಿದೆಯಂತಂತೆ.

ಇತ್ತೀಚಿಗೆ ಕೈಗಾರಿಕಾ ಮಂತ್ರಾಲಯ ಈ ರೋಗಗ್ರಸ್ತ ಕಂಪನಿಗಳ ಉದ್ಯೋಗಿ ಗಳಿಗೆ 517 ಕೋಟಿ ರೂಪಾಯಿಗಳನ್ನು ವಿತರಿಸುವ ಪ್ರಸ್ತಾಪವನ್ನು ಮುಂದಿಟ್ಟಿತ್ತಂತೆ.

ಈ ಕಂಪನಿಗಳು ಮುಚ್ಚಿಹೋಗಿರುವುದರಿಂದ ಮತ್ತು ಸರ್ಕಾರಕ್ಕೆ ಬರಬೇಕಾದ ಬಾಕಿಗಳು ಉಳಿದಿರುವುದರಿಂದ ಅವುಗಳನ್ನು ತೀರಿಸಲೇ ಹಣ ನೀಡುವುದು ಒಳಿತು ಎಂಬ ಅಭಿಪ್ರಾಯವು ಬಂದಿತಂತೆ.

ಈ ಭಿನ್ನಾಭಿಪ್ರಾಯಕ್ಕೆ ರಾಜಕೀಯ ಕಾರಣವು ಇದೆ ಎಂದು ಒಳಗಿನವರೇ ಹೇಳಿದ್ದಾರಂತೆ.

ಹೀಗೆ ರೋಗಗ್ರಸ್ತವೆಂದು ಘೋಷಿಸಲ್ಪಟ್ಟಿರುವ ಉದ್ದಿಮೆಗಳೆಂದರೆ ನ್ಯಾಷನಲ್ ಬೈಸಿಕಲ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್, ಟ್ಯಾನರಿ ಆ್ಯಂಡ್ ಫುಟ್‌ವೇರ್ ಕಾರ್ಪೊರೇಷನ್ ಆಫ್ ಇಂಡಿಯಾ, ಭಾರತ್ ಆಫ್ತಾಲ್ಮಿಕ್ ಗ್ಲಾಸ್ ಲಿಮಿಟೆಡ್, ವೆಬರ್ಡ್ ಇಂಡಿಯಾ ಲಿಮಿಟೆಡ್, ಭಾರತ್ ಪ್ರೊಸೆಸ್ ಆ್ಯಂಡ್ ಮೆಕ್ಯಾನಿಕಲ್ ಎಂಜಿನೀಯರ್ಸ್ ಲಿಮಿಟೆಡ್. ಇವೆಲ್ಲವೂ ಸಾರ್ವಜನಿಕ ವಲಯದ ಉದ್ದಿಮೆಗಳು.

ಉದ್ದಿಮೆಗಳ ರೋಗಗ್ರಸ್ತತೆ ಬಗ್ಗೆ ಮತ್ತು ಅವುಗಳ ಪುನರುಜೀವನದ ಬಗ್ಗೆ ಅವುಗಳ ಉದ್ಯೋಗಿಗಳ ಬಗ್ಗೆ ಸರ್ಕಾರ ಎಂತಹ ನಿಲುವು ಹೊಂದಿದೆ ಎಂಬುದಕ್ಕೆ ಇದು ಕೈಗನ್ನಡಿ. ಸ್ವದೇಶಿ ಬೊಂಬಡಾ ಬಜಾಯಿಸುವ ಧೀರರ ರೀತಿ ಇದು.

ಮೈಸೂರು ಲ್ಯಾಂಪ್‌ನವರ ಮನೆ ದೀಪವಾರಿಸಿ

ಇದು ಬಿಐಎಫ್‌ಆರ್ ನೀಡಿದ ನಿರ್ದೇಶನ. ಕರ್ನಾಟಕ ಸರ್ಕಾರದ ಸಾರ್ವಜನಿಕ ವಲಯದ ಉದ್ದಿಮೆ ಮೈಸೂರು ಲ್ಯಾಂಪ್ಸ್ ಲಿಮಿಟೆಡ್ ಒಂದು ಪ್ರತಿಷ್ಠಿತ ಉದ್ದಿಮೆಯಾಗಿತ್ತು. ವಿದ್ಯುತ್ ದೀಪಗಳ ಮಾರುಕಟ್ಟೆಯ ಶೇ 12 ರಷ್ಟು ಪಾಲನ್ನು ಘಟಕ ಒಮ್ಮೆ ಹೊಂದಿತ್ತು. ಇಂದು ರೋಗಗ್ರಸ್ತವಾಗಿ ಒದ್ದಾಡುತ್ತಿದೆ.

ಕರ್ನಾಟಕ ಸರ್ಕಾರ ಈ ಉದ್ದಿಮೆಯನ್ನು ಖಾಸಗೀಕರಿಸುವ ನಿರ್ಧಾರವನ್ನು ಆಗಲೇ ಕೈಗೊಂಡಿದೆ. ಈಗ ಬಿಐಎಫ್‌ಆರ್ ಈ ಉದ್ದಿಮೆಯ ರೋಗಕ್ಕೆ ಕಾರಣ ಅತಿ ಹೆಚ್ಚು ಸಂಖ್ಯೆಯಲ್ಲಿರುವ ನೌಕರರು. ಆದ್ದರಿಂದ ನೌಕರರ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂಬ ನಿರ್ದೇಶನ ನೀಡಿದೆಯಂತೆ.

ಈ ಘಟಕದ ಪುನರುಜ್ಜೀವನದ ಪ್ರಶ್ನೆ ಹಲವು ವರ್ಷಗಳಿಂದಲೇ ಇದೆ. ಆರ್ಥಿಕದ ಉದಾರೀಕರಣದ ಜೊತೆಗೆ ರೋಗಗ್ರಸ್ತಗೊಂಡ ಈ ಉದ್ದಿಮೆಯನ್ನು ಪುನರುಜ್ಜೀವನಗೊಳಿಸುವ ಹಲವು ಮಾರ್ಗಗಳಿದ್ದವು. ಆದರೆ ಸ್ವಾಮ್ಯತ್ವ ಹೊಂದಿರುವ ಕರ್ನಾಟಕ ಸರ್ಕಾರ ಅದರ ಕಾಳಜಿ ವಹಿಸದೇ ಇರುವುದರಿಂದ ಉಂಟಾಗಿರುವ ಪರಿಸ್ಥಿತಿ ಇದು.

ಉಕ್ಕಿಗೂ ತುಕ್ಕು

ಭಾರತದ ಉಕ್ಕು ಉದ್ಯಮಕ್ಕೇ ಈ ತುಕ್ಕು ಹಿಡಿಯತೊಡಗಿದೆ. ಭಾರತೀಯ ಉಕ್ಕು ಪ್ರಾಧಿಕಾರ (ಸೇಲ್) ಭಾರತದ ಪ್ರತಿಷ್ಠಿತ ಸಾರ್ವಜನಿಕ ವಲಯದ ಉದ್ಯಮ ಸೇಲ್ ಇವತ್ತು ಹಾನಿ ಅನುಭವಿಸುತ್ತಿದೆ. ಕಾರಣ ಉದಾರೀಕರಣದ ಆಶೀರ್ವಾದ. ಆರ್ಥಿಕ ಉದಾರೀಕರಣದ ಕ್ರಮವಾಗಿ ಉಕ್ಕಿನ ಆಮದನ್ನು ಉದಾರೀಕರಿಸಲಾಯಿತು.

- ಇದೇ ಅವಕಾಶ ಕಾಯುತ್ತಿದ್ದ ಮತ್ತು ಇಂತಹ ಕ್ರಮಕ್ಕಾಗಿ ಒತ್ತಡ ಹೇರುತ್ತಿದ್ದ ಯುರೋಪು ಮತ್ತು ಅಮೇರಿಕದ ದೇಶಗಳು ಭಾರತಕ್ಕೆ ಕಡಿಮೆ ಬೆಲೆಗೆ ಉಕ್ಕನ್ನು ತಂದು ತುಂಬ ತೊಡಗಿದವು. ಇದರಿಂದಾಗಿ ಉಕ್ಕಿನ ಬೆಲೆ ತೀವ್ರವಾಗಿ ಕುಸಿದು ದೇಶೀ ಉದ್ದಿಮೆಗಳು ಈಗ ತಲ್ಲಣಿಸತೊಡಗಿವೆ.

ಹೀಗೆ ಉಕ್ಕು ಉದ್ದಿಮೆಗಳು ನರಳತೊಡಗಿದರೆ ಅವುಗಳಿಗೆ ಸಾಲ ನೀಡಿರುವ ಹಣ ಕಾಸು ಸಂಸ್ಥೆಗಳು ಮತ್ತು ಬ್ಯಾಂಕುಗಳೂ ತಮ್ಮ ಸಾಲ ಮರಳಿ ಬಾರದ ಸ್ಥಿತಿ ಅನುಭವಿಸತೊಡಗಿವೆ. ಉಕ್ಕು ಉದ್ದಿಮೆಗೆ ನೀಡಿರುವ ಹಣಕಾಸಿನಲ್ಲಿ ಶೇ 14.5 ರಷ್ಟು 'ದುಡಿಯಲಾರದ ಆಸ್ತಿ'ಗಳಾಗಿ ಹೋಗಿವೆಯಂತೆ. ಐಡಿಬಿಐ ಮತ್ತು ಐಸಿಐಸಿಐ ನಂತಹ ಹಣಕಾಸು ಸಂಸ್ಥೆಗಳನ್ನು ಇದು ಮುಂಬರುವ ದಿನಗಳಲ್ಲಿ ಕಾಡಲಿದೆಯಂತೆ.

ಕರ್ನಾಟಕದಲ್ಲಿ ಕಳೆದವಾರ

ಸೆಪ್ಟಂಬರ್ 4

- ರಾಜ್ಯಾದ್ಯಂತ 3 ಸಾವಿರ ಅಧ್ಯಾಪಕರ ಬಂಧನ
- ಚಿತ್ರದುರ್ಗದ ಅನ್ನೇಹಾಳ್ ಶಾಂತ ಸ್ಥಿತಿಯತ್ತ. ಸೆ.11 ರವರೆಗೆ ನಿಷೇದಾಜ್ಞೆ ಜಾರಿ
- ಕರ್ನಾಟಕದಲ್ಲಿ ವಜ್ರ ಚಿನ್ನದ ನಿಕ್ಷೇಪ ಪತ್ತೆ

ಸೆಪ್ಟಂಬರ್ 5

- ಅಧ್ಯಾಪಕರ 26 ದಿನಗಳ ಮುಷ್ಕರ ಅಂತ್ಯ.
- ಗುಲ್ಬರ್ಗ ಸತತ ಮಳೆಗೆ 3 ಸಾವು
- ಕೃಷ್ಣಾ ಕಣಿವೆ ನೀರಾವರಿ ಯೋಜನೆಗಳಿಗೆ ಪ್ರತ್ಯೇಕ ನಿಗಮ-ವಿಶೇಷಾಧಿಕಾರಿ ನೇಮಕ.

ಸೆಪ್ಟಂಬರ್-6

- ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆಯಾಗಿ ಡಾ|| ಶಾಂತಾ ಪಿ ಹಲಗಿ.
- ಇಂದಿನಿಂದ ಕಾಲೇಜು ಆರಂಭ.
- ನಗರ ಸಭಾ ಸದಸ್ಯರ ಅಪಹರಣ ಪ್ರತಿಭಟಿಸಿ ದಾವಣಗೆರೆ ಬಂದ್.

ಸೆಪ್ಟಂಬರ್-7

- ಕಾಯ್ದೆ ತಿದ್ದು ಪಡಿ ವಿರೋಧಿಸಿ ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಬಂದ್.
- ಎಪಿಎಂಸಿ ಕಾಯ್ದೆ ತಿದ್ದು ಪಡಿ ಜಾರಿ - ಮಾರುಕಟ್ಟೆ ಸಚಿವರು.
- ರಾಜ್ಯ ಸರ್ಕಾರಿ ನೌಕರರ ಸಾಂಕೇತಿಕ ಧರಣಿ.
- ಬಸ್ಸುಗಳಲ್ಲಿ ಮಹಿಳೆಯರ ಆಸನ ಮೀಸಲು ಜಾರಿಗೆ ಕೋರ್ಟ್ ಆದೇಶ.

ಸೆಪ್ಟಂಬರ್-8

- ಬಾಗೂರು ನವಿಲೆ ರೈತ ನಾಯಕನ ಹತ್ಯೆಗೆ ವಿಫಲಯತ್ನ.
- 'ಸುಪಾರಿಕೊಲೆ' ಆಪಾದಿತ ಗುತ್ತೇದಾರ್‌ಗೆ ಜಾಮೀನು.
- ರಾಜ್ಯದಲ್ಲಿ ಸೀಸ ರಹಿತ ಪೆಟ್ರೋಲ್ ಮಾರಾಟ.

ಸೆಪ್ಟಂಬರ್-9

- ನ್ಯಾಯಾಧೀಶರ ನೇಮಕಾತಿ ಮೀಸಲಾತಿ ಉಲ್ಲಂಘನೆ-ಹೈಕೋರ್ಟ್‌ಗೆ ಸುಪ್ರೀಂ ಕೋರ್ಟಿನ ನೋಟಿಸ್.
- ಕರ್ನಾಟಕ-ಆಂಧ್ರ ಒಪ್ಪಂದ: 20 ಹೊಸ ಮಾರ್ಗಗಳಲ್ಲಿ ಬಸ್ ಸಂಚಾರ.

ಸೆಪ್ಟಂಬರ್-10

- ನಂಜನಗೂಡಿನ ಎರಡು ಗ್ರಾಮಸ್ಥರ ನಡುವೆ ಘರ್ಷಣೆ - ಮನೆಗಳಿಗೆ ಬೆಂಕಿ.
- ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ ಸ್ಟಾಂಪ್ ಶುಲ್ಕ ರದ್ದು.
- ಸಂಬಳವಿಲ್ಲದೆ ಬೀದಿಗೆ ಬಂದ ಕಲ್ಬುರ್ಗಿ ಎಂ.ಎಸ್.ಕೆ.ಮಿಲ್ ಕಾರ್ಮಿಕರು.

ಹಂಚು ಕಾರ್ಮಿಕರ ಸಮಾವೇಶ

ಭಟ್ಕಳ: ಕರ್ನಾಟಕ ರಾಜ್ಯದ ಹಂಚು ಉದ್ಯಮದಲ್ಲಿ ದುಡಿಯುವ ಕಾರ್ಮಿಕರಿಗೆ 1987 ರ ನಂತರ ಕನಿಷ್ಠ ಕೂಲಿ ಪರಿಷ್ಕರಿಸದೇ ಕಾರ್ಮಿಕರಿಗೆ ಅನ್ಯಾಯ ಮಾಡಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಶಂಕರ್ ಉತ್ತರ ಕನ್ನಡ ಜಿಲ್ಲಾ ಹಂಚು ಕಾರ್ಮಿಕರ ಸಮಾವೇಶದಲ್ಲಿ ಹೇಳಿದ್ದಾರೆ.

ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ ಹಂಚು ಕಾರ್ಮಿಕರ ಜೀವನ ಮಟ್ಟ ಕುಸಿದಿದೆ ಎಂದು ಶಂಕರ್ ಕಾರ್ಮಿಕರು ಐಕ್ಯ ಹೋರಾಟದ ಮುಲಕ ಬೇಡಿಕೆ ಈಡೇರಿಸಿ ಕೋಳ್ಳಲು ಕರೆ ನೀಡಿದರು.

ಟಿ.ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶದಲ್ಲಿ ಡಿ.ವೈ.ಎಫ್.ಐನ ಶಾಂತರಾಮ ನಾಯಕ್ ಮಾತನಾಡಿ ಜನತೆಯ ಅಗತ್ಯ ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ಪರ್ಯಾಯ ನೀತಿಗಾಗಿ ಎಲ್ಲಾ ಜನತೆ ಹೋರಾಡಬೇಕೆಂದರು.

ಅಂಗನವಾಡಿ ನೌಕರರ ಸಂಘದ ನಾಗರತ್ನ ಪಡಿಯಾರ ಮೊದಲಾದವರು ಉಪಸ್ಥಿತರಿದ್ದರು. ಸಮಾವೇಶ ಹಲವು ನಿರ್ಣಯಗಳನ್ನು ಕೈಗೊಂಡಿತು.

ಹೊಸ ಪದಾಧಿಕಾರಿಗಳು:

ಅಧ್ಯಕ್ಷರು:ಟಿ.ಎಸ್.ನಾಯ್ಕ್, ಉಪಾಧ್ಯಕ್ಷರು: ಸುಭಾಷ ಕೊಪ್ಪಿಕರ, ಬೀರಣ್ಣ ನಾಯಕ್, ಪಾಂಡುರಂಗ ಶಟ್ಟಿಗಾರ್, ಮಂಜಾಗೌಡ, ಪ್ರಧಾನ ಕಾರ್ಯದರ್ಶಿ:ತಿಲಕ ಗೌಡ, ಸಹಕಾರ್ಯದರ್ಶಿಗಳು ಮುಸ್ಸಿಲ ಟಿ.ಕೋನಾ, ಗಣಪತಿ ಮಂಜುನಾಥ ಎಂ. ನಾಯಕ, ಶಂಕರ ದೇವಾಡಿಗ, ಖಜಾಂಚಿ: ಸೂರ್ಯ ಮಂಜುನಾಥ.



ಬೆಲೆಏರಿಕೆ ನೀತಿ ವಿರುದ್ಧ ಸಿಪಿಐ(ಎಂ) ಪ್ರತಿಭಟನೆ

ಭಟ್ಕಳ: ಬಿ.ಜೆ.ಪಿ ಸರಕಾರದ ಜನವಿರೋಧಿ ಬಜೆಟ್ ಬೆಲೆ ಏರಿಕೆ ನೀತಿ, ಯುದ್ಧ ಕೋರ ನೀತಿ, ವಿನಾಶಕಾರಿ ಕೋಮುವಾದದ ವಿರುದ್ಧ ಭಟ್ಕಳ ತಾಲೂಕಿನ ಮುರ್ಡೇಶ್ವರ ನಗರದಲ್ಲಿ 600 ಕ್ಕೂ ಹೆಚ್ಚು ಸಿ.ಪಿ.ಐ(ಎಂ) ಕಾರ್ಯಕರ್ತರು ಆ.23 ರಂದು ಮೆರವಣಿಗೆ ನಡೆಸಿ ಜಲಗ ಮಂಟಪದಲ್ಲಿ ಬಹಿರಂಗ ಸಭೆ ನಡೆಸಿದರು. ಬಹಿರಂಗ ಸಭೆಯನ್ನುದ್ದೇಶಿಸಿ ರಾಜ್ಯ ಸಮಿತಿ ಸದಸ್ಯರಾದ ಕೆ. ಶಂಕರ ಮಾತನಾಡಿ''ಬಿಜೆಪಿ. ಚುನಾವಣೆ ಸಂದರ್ಭದಲ್ಲಿ ಹೇಳಿದ್ದೇನು, ಈಗ ಮಾಡುತ್ತಿರುವುದೇನು, ಸರ್ಕಾರ ಮೂರು ದಿನ ತುಂಬುವ ಮೊದಲೇ ಪೆಟ್ರೋಲ್ ಬೆಲೆ ಏರಿಸಿತು. ಜೀವನಾವಶ್ಯಕ ವಸ್ತುಗಳ ಬೆಲೆ ಗಗನಕ್ಕೇರಿಸಿತು. ತರಕಾರಿ, ಅಹಾರ ಧಾನ್ಯ ಬೆಲೆ ತುಂಬಾ ಏರಿಕೆಯಾಗಿ ಜನಸಾಮಾನ್ಯರ ಬದುಕು ದುಸ್ತರಗೊಳಿಸಿದೆ. ಜಯಲಲಿತಾಳಂಥ ಮಹಾನ್ ಭ್ರಷ್ಟಾಚಾರಿ ಜೊತೆ ರಾಜಿ ಮಾಡಿ ಸರಕಾರ ನಡೆಸುತ್ತಿದ್ದಾರೆ ಎಂದರು.

ಪಕ್ಷದ ಮುಖಂಡ ಶಾಂತರಾಮ ನಾಯಕ ಮಾತನಾಡಿ ಬಿಜೆಪಿ ಅಧಿಕಾರಕ್ಕೆ ಬಂದ ಸ್ವಲ್ಪ ದಿನದಲ್ಲೇ ಹಣದುಬ್ಬರ ದರ ಶೇಕಡಾ 4.7 ರಿಂದ ಶೇಕಡಾ 8ಕ್ಕೆ ಮೀರಿದೆ. 1992 ರಿಂದ ಅನುಸರಿಸಿಕೊಂಡು ಬರುತ್ತಿರುವ ಉದಾರೀಕರಣ ಹಾಗೂ ಜಾಗತೀಕರಣ ನೀತಿಗಳಿಂದ ದೇಶದ ಆರ್ಥಿಕ ಪರಿಸ್ಥಿತಿ ಉಲ್ಬಣ ಗೊಂಡಿದ್ದು ಜನಸಾಮಾನ್ಯರು ರೈತಕಾರ್ಮಿಕ ವಿದ್ಯಾರ್ಥಿಯರು ಈ ನೀತಿಗಳ ವಿರುದ್ಧ ಐಕ್ಯ ಚಳುವಳಿ ನಡೆಸಬೇಕೆಂದು ಕರೆ ನೀಡಿದರು.

23 ರಂದು ನಡೆದ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ನಾಯ್ಕ ಸೆಪ್ಟೆಂಬರ್ 16 ರಂದು ಜಿಲ್ಲಾ ಕೇಂದ್ರ ಕಾರವಾರದಲ್ಲಿ ಪ್ರತಿಭಟನಾ ಮೆರವಣಿಗೆ ಸಭೆ ನಡೆಸಲಿದ್ದೇವೆಂದು ಬಿ.ಜೆ.ಪಿ ಸರ್ಕಾರದ ರಾಜಕೀಯ ಕುತಂತ್ರವನ್ನು ಬಯಲಿಗೆಳೆಯಬೇಕೆಂದು ಕರೆನೀಡಿದರು ಮೊದಲಿಗೆ ಸಿಪಿಐ(ಎಂ) ಭಟ್ಕಳ ಶಾಖೆ ಕಾರ್ಯದರ್ಶಿ ಸುಭಾಶ್ ಕೊಪ್ಪಿಕರ್ ಸ್ವಾಗತಿಸಿದರು.

ಜಿಲ್ಲಾ ಸಮಿತಿ ಸದಸ್ಯ ತಿಲಕಗೌಡ ಮಾತನಾಡಿದರು. ಮಂಜುನಾಥ ನಾಯ್ಕ ವಂದಿಸಿದರು.

ಎಸ್‌ಎಫ್‌ಐ ಜಿಲ್ಲಾ ಮಟ್ಟದ ಅಧ್ಯಯನ ಶಿಬಿರ

ಬೆಂಗಳೂರು; ಆಗಸ್ಟ್ 21 ರಿಂದ 23 ರವರೆಗೆ ಎಸ್‌ಎಫ್‌ಐನ ಬೆಂಗಳೂರು ಜಿಲ್ಲಾ ಮಟ್ಟದ ಅಧ್ಯಯನ ಶಿಬಿರವು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಯಶಸ್ವಿಯಾಗಿ ಜರುಗಿತು.

ಈ ಶಿಬಿರದಲ್ಲಿ ಶಿಕ್ಷಣ ನೀತಿ ಮತ್ತು ಸಾಮಾಜಿಕ ಪರಿಸ್ಥಿತಿ, ಕೋಮುವಾದ ಮತ್ತು ಸಂಘಟನೆಯು ಬಗ್ಗೆ ತರಗತಿಗಳನ್ನು ನಡೆಸಲಾಯಿತು.

ಈ ವಿದ್ಯಾರ್ಥಿ ಶಿಬಿರದಲ್ಲಿ ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಶಾಲಾ-ಕಾಲೇಜುಗಳಿಂದ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿ ಮುಖಂಡರುಗಳು ಭಾಗವಹಿಸಿದ್ದರು.

ಹೊಸ ನಾಯಕತ್ವದ ಆಯ್ಕೆ

ಇದೇ ಸಂದರ್ಭದಲ್ಲಿ ನಡೆದ ಎಸ್.ಎಫ್.ಐ. ನ ವಿಶೇಷ ಬೆಂಗಳೂರು ಜಿಲ್ಲಾ ಸಮಿತಿ ಸಭೆಯು ಎಸ್‌ಎಫ್‌ಐ ಬೆಂಗಳೂರು ಜಿಲ್ಲಾ ಸಮಿತಿಗೆ ಹೊಸ ನಾಯಕತ್ವವನ್ನು ಆಯ್ಕೆ ಮಾಡಿದೆ.

ಅಧ್ಯಕ್ಷರಾಗಿ ಬಸಮ್ಮ ಕಾರ್ಯದರ್ಶಿಯಾಗಿ ರಮೇಶ್ ಆರ್.ಎಂ, ಉಪಾಧ್ಯಕ್ಷರುಗಳಾಗಿ ವಸಂತ್ ಕುಮಾರ್.ವೈ, ಸ್ವರೂಪ, ನಾರಾಯಣಿ, ಬಿ.ಎನ್. ಶ್ರೀನಿವಾಸ್ ಮತ್ತು ಸಹ ಕಾರ್ಯದರ್ಶಿ ಗಳಾಗಿ ದೇವರಾಜ್, ಶ್ರೀಧರಪ್ರಭು, ಹೇಮಲತ ಮತ್ತು ಅಜಯ್‌ರವರನ್ನು ಆರಿಸಲಾಯಿತು.

ಶಿಕ್ಷಣ ಶುಲ್ಕ ಏರಿಕೆ ವಿರೋಧಿಸಿ ಭೂತ ದಹನ

ಹಾಸನ: ಕೇಂದ್ರ ಸರ್ಕಾರ ಬೋದನ ಶುಲ್ಕ ಏರಿಕೆಯ ಉದ್ದೇಶದಿಂದ ಶಿಕ್ಷಣಕ್ಕೆ ಶೇ 50 ರಷ್ಟು ಅನುದಾನ ಕಡಿತ ಮಾಡಿ, ಶಿಕ್ಷಣ ಕ್ಷೇತ್ರವನ್ನು ಅನುತ್ಪಾದಕ ವಲಯ ವೆಂಬ ತಿರ್ಮಾನದ ವಿರುದ್ಧ ಬಾರತ ವಿದ್ಯಾರ್ಥಿ ಫೇಡರೇಷನ್ ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೇಡರೇಷನ್ ಸಂಘಟನೆಗಳು ಮೆರವಣಿಗೆ ನಡೆಸಿದರು.

ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿನಿಯರಿದ್ದ ಮೆರವಣಿಗೆಗಾರರು ನಗರದ ಪ್ರಮುಖ ಬೀದಿಗಳಲ್ಲಿ ಕೇಂದ್ರ ಸಂಪನ್ಮೂಲ ಸಚಿವ ಮುರುಳಿಮನೋಹರ ಜೋಷಿಯವರ ಪ್ರತಿಕೃತಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಭೂತ ದಹನ ಮಾಡಿದರು.

ಪ್ರತಿಭಟನಾಕಾರರನ್ನುದ್ದೇಶಿ ಮಾತನಾಡಿದ ಎಸ್.ಎಫ್.ಐ ಜಿಲ್ಲಾ ಸಂಚಾಲಕ ಎನ್. ಆರ್ ಪ್ರಕಾಶ ಅನುದಾನವನ್ನು ಶೇ. 6 ರಿಂದ 3ಕ್ಕೆ ಇಳಿಸಿರುವ ಕ್ರಮವನ್ನು ಖಂಡಿಸಿದರು.

ಹೆಣ್ಣು ಮಕ್ಕಳಿಗೆ ಪಿಯುಸಿವರೆಗೆ ಉಚಿತ ಶಿಕ್ಷಣ ನೀಡುತ್ತೇವೆ, ಮುಂದೆ ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂದ ಬಿಜೆಪಿ ಕೇಂದ್ರ ಸರ್ಕಾರ ಶಿಕ್ಷಣ ರಂಗವನ್ನು ಅನುತ್ಪಾದಕ ಎನ್ನುವುದು ಹಾಗೂ ನಿವೃತ್ತಿ ವಯಸ್ಸನ್ನು 60 ಕ್ಕೆ ಏರಿಸಿರುವುದನ್ನು ಡಿ.ವೈ.ಎಫ್.ಐ.ನ ಹೆಚ್.ಟಿ ಗುರುರಾಜ್ ಟೀಕಿಸಿದರು. ಕೆ.ಎಸ್. ರವಿಕುಮಾರ್ ಸಭೆಯಲ್ಲಿ ಮಾತನಾಡಿದರು.

ಸಿಐಟಿಯುಗೆ ವಿಜಯ

ದಾಂಡೇಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಲಿನ ಜಂಟಿ ಸಂಧಾನ ಸಮಿತಿಗೆ ನಡೆದ ಚುನಾವಣೆಯಲ್ಲಿ ಸಿಐಟಿಯು 1165 ಮತ ಪಡೆದು 2 ಸೀಟುಗಳಲ್ಲಿ ಜಯಗಳಿಸಿದೆ.

ಮೂರು ಯೂನಿಯನ್‌ಗಳ ಒಕ್ಕೂಟವಾದ ಸ್ಟಾಫ್ ಅಂಡ್ ವರ್ಕರ್ಸ್ ಅಸೋಸಿಯೇಶನ್‌ನ ಅಪಪ್ರಚಾರದ ನಡುವೆಯು ತಮ್ಮ ಸಂಘಕ್ಕೆ ಬೆಂಬಲ ವ್ಯಕ್ತಪಡಿಸಿರುವ ಕಾರ್ಮಿಕರಿಗೆ ಸಿಐಟಿಯು ಅಭಿನಂದಿಸಿದೆ.

ಐಎನ್‌ಟಿಯುಸಿ ಒಂದು ಬಿ.ಎಂ.ಎಸ್. ಒಂದು ಹಾಗೂ ಸ್ಟಾಫ್ ಅಂಡ್ ವರ್ಕರ್ಸ್ ಅಸೋಸಿಯೇಷನ್ ಒಂದು ಸ್ಥಾನ ಪಡೆದಿವೆ.

ಕಾಂ. ಚಡಯನ್ ಲಾಲ್‌ಸಲಾಂ ....

ಪುಟ 1 ರಿಂದ

ಪಿ.ಬಿ. ಸದಸ್ಯರುಗಳಾದ, ಇ. ಬಾಲನಂದನ್, ಕೇರಳದ ಮುಖ್ಯಮಂತ್ರಿ ಇ.ಕೆ.ನಾಯನಾರ್, ಎಸ್. ರಾಮಚಂದ್ರನ್ ಪಿಳ್ಳೆ, ಎಲ್.ಡಿ.ಎಫ್. ಸಂಚಾಲಕ ವಿ.ಎಸ್. ಅಚ್ಯುತಾನಂದನ್, ತಮಿಳುನಾಡು ರಾಜ್ಯ ಸಮಿತಿಯು ಪರವಾಗಿ ಕೆ. ಪದ್ಮನಾಭನ್ ಮೆರವಣಿಗೆಯಲ್ಲಿ ಆಗಮಿಸಿ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದರು.

ಕರ್ನಾಟಕ ರಾಜ್ಯ ಸಮಿತಿಯಿಂದ ಕಾರ್ಯದರ್ಶಿ ಕಾಂ|| ಪಿ. ರಾಮಚಂದ್ರ ರಾವ್ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವನ್ನು ಅರ್ಪಿಸಿದರಲ್ಲದೆ, ಕರ್ನಾಟಕ ರಾಜ್ಯ ಸಮಿತಿಯು ಪರವಾಗಿ ಪಕ್ಷದ ಸದಸ್ಯರ ಪರವಾಗಿ, ಕಾರ್ಮಿಕರ ಪರವಾಗಿ ಹೃದಯ ಸ್ಪರ್ಶಿ ಶ್ರದ್ಧಾಂಜಲಿಯನ್ನು ಸಲ್ಲಿಸದರು.

ಹೃದಯಸ್ಪರ್ಶಿ ವಿದಾಯ :

ಮಾರಕ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದ ಕಾಂ|| ಚಡಯನ್ ಸೆಪ್ಟಂಬರ್ 9 ರಂದು ಬೆಳಿಗಿನ ಜಾವ 2.40 ರ ಸಮಯದಲ್ಲಿ ಕೊನೆಯುಸಿರೆಳೆದರು. ಉನ್ನತ ಮಟ್ಟದ ಚಿಕಿತ್ಸೆ ನೀಡಿದರೂ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅನಾರೋಗ್ಯದ ನಡುವೆಯೂ ಸ್ವಲ್ಪ ಗುಣಮುಖರಾದರೆಂದರೆ ಕಛೇರಿಗೆ ಬಂದು ತನ್ನ ಕೆಲಸದಲ್ಲಿ ನಿರತರಾಗುತ್ತಿದ್ದ ಕಾಂ|| ಚಡಯನ್ ಅವರನ್ನು ಕಮ್ಯುನಿಸ್ಟ್ ವಿರೋಧಿಗಳಿಗೂ ಸಹ ವಿರೋಧಿಸುವುದು ಕಷ್ಟವಾಗುತ್ತಿತ್ತು.

ಬೆಳಿಗ್ಗೆ 5.30ಕ್ಕೆ ತಿರುವನಂತಪುರದ ಎ.ಕೆ.ಜಿ. ಕೇಂದ್ರಕ್ಕೆ(ರಾಜ್ಯ ಸಿ.ಪಿ.ಐ.(ಎಂ) ಕಛೇರಿ) ತಂದಿರಿಸಿದ ಪಾರ್ಥಿವ ಶರೀರಕ್ಕೆ ಅಸಂಖ್ಯಾತ ಅಭಿಮಾನಿಗಳು ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೆ ಬಂದು ತಮ್ಮ ಗೌರವವನ್ನು ಸೂಚಿಸಿದರು. ಸಿ.ಪಿ.ಐ. ರಾಜ್ಯ ಕಾರ್ಯದರ್ಶಿ ವೆಲಿಯಂ ಭಾರ್ಗವನ್, ಕೆ.ಪಿ.ಸಿ.ಸಿ.(ಐ) ಅಧ್ಯಕ್ಷ ಎ.ಕೆ. ಆಂಟೋನಿ ಮತ್ತಿತರ ರಾಜಕೀಯ ಪಕ್ಷಗಳ ಮುಖಂಡರು ಪಕ್ಷದ ಕಛೇರಿಗೆ ಬಂದು ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಿದರು.

ಕೇರಳ ರಾಜ್ಯದ ರಾಜ್ಯಪಾಲರಾದ ಸುಖದೇವ್ ಸಿಂಗ್ ಶರಣ್, ಚಡಯನ್ ಅವರನ್ನು ದುರ್ಬಲ ವರ್ಗದ ನಾಯಕ ಎಂದು ಬಣ್ಣಿಸಿದರು.

ಸೆಪ್ಟಂಬರ್ 10ರಂದು ಬೆಳಿಗ್ಗೆ 9 ಗಂಟೆಯಿಂದಲೇ ಕಣ್ಣೂರು ಜಿಲ್ಲಾ ಸಮಿತಿ ಕಛೇರಿಯಲ್ಲಿ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಇಡಲಾಯಿತು.

ಈ ವರದಿಗಾರ ನೋಡುತ್ತಿದ್ದಂತೆಯೇ ಸಂದರ್ಶನಕಾರರ ಸಂಖ್ಯೆ ಹೆಚ್ಚಾಗ ತೊಡಗಿತು. ಪಾರ್ಥಿವ ಶರೀರದ ಇಕ್ಕೆಲಗಳಲ್ಲಿ ಬರುತ್ತಿದ್ದ ಜನ ಆರಕ್ಷಣವೂ ನಿಲ್ಲದೆ ಗೌರವವನ್ನು ಸೂಚಿಸಿ ಮುಂದೆ ಹೋಗುತ್ತಿದ್ದರೂ ಸಂಜೆ 4.00ರ ತನಕವೂ ಜನರ ಆಗಮನ ನಿಲ್ಲಲಿಲ್ಲ. ತಮ್ಮ ನೋವಿಗೆ ದನಿ ನೀಡಿದ ನಾಯಕನ ಅಂತಿಮ ದರ್ಶನದ ಕಾತುರ ಅವರಿಗೆ. ಕಣ್ಣೂರಿನಿಂದ ಮಾತ್ರವಲ್ಲದೆ ಹತ್ತಿರದ ಜಿಲ್ಲೆಗಳಿಂದಲೂ ಜನರು ಪ್ರವಾಹದಂತೆ ಬಂದಿದ್ದರು.

ಪಕ್ಷದ ಕೇಂದ್ರ ಸಮಿತಿಯ ಪರವಾಗಿ ಗೌರವ ಸೂಚಿಸಲೆಂದೇ ಬಂದ ಕಾಂ|| ಸುರ್ಜಿತ್ ಪುಷ್ಪಗುಚ್ಛ ಅರ್ಪಿಸುತ್ತಲೇ, ಅಗಲಿದ ನಾಯಕನನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಕೆಂಬಾವುಟವನ್ನು ಹೊದ್ದು ಚಿರನಿದ್ದೆಯಲ್ಲಿದ್ದ ಕಾಂ|| ಚಡಯನ್ ಗೋವಿಂದನ್ ಅವರ ಕಳೇಬರವನ್ನು ಹೊತ್ತ ವ್ಯಾನಿನಲ್ಲಿ ಸುರ್ಜಿತ್, ಇ.ಕೆ. ನಾಯನಾರ್, ವಿ.ಎಸ್. ಅಚ್ಯುತಾನಂದನ್ ಮೊದಲಾದ ಮುಖಂಡರಿದ್ದರು. ಮೌನವಾಗಿ ತೆರಳಿದ ಮೆರವಣಿಗೆಯನ್ನು ವೀಕ್ಷಿಸಲು ರಸ್ತೆಯ ಎರಡೂ ಬದಿಗಳಲ್ಲಿ ಬಂದು ಮಹಡಿ ಕಟ್ಟಡದ ಛಾವಣಿಗಳಲ್ಲಿ, ಮೇಲು ಸೇತುವೆಯಲ್ಲಿ ಜನರ ಗುಂಪು ಸೇರಿತ್ತು. ಸಾಧಾರಣ 5. ಕಿ.ಮೀ. ದೂರದ ಹಾದಿಯಲ್ಲಿ ಜನ ಸಂದಣಿ ಬಿಟ್ಟು ಬೇರೇನೂ ಇರಲಿಲ್ಲ.

80 ವರ್ಷ ಪ್ರಾಯದ ಕೇರಳ ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷರಾದ ಸಿ. ಕಣ್ಣನ್ 5 ಕಿ.ಮೀ. ದೂರವನ್ನು ನಡಿಗೆಯಲ್ಲೇ ಕ್ರಮಿಸಿದರು. ನೇಕಾರರ ಹೋರಾಟದ ಪ್ರಾರಂಭದ ಘಟ್ಟದಲ್ಲಿ ಚಡಯನ್ ಅವರಿಗೆ ಗುರುವಾಗಿದ್ದ ಸಿ. ಕಣ್ಣನ್ ಭುಜಕ್ಕೆ ಭುಜಕ್ಕೆ ಕೊಟ್ಟು ದುಡಿದ ಸಂಗಾತಿಯಾಗಿದ್ದರು.

ಹೆಸರಾಂತ ಕಮ್ಯುನಿಸ್ಟ್ ಧುರೀಣ ಕಾಂ|| ಎ.ಕೆ. ಗೋಪಾಲನ್ ಅವರ ಸಮಾಧಿ ಇರುವ ಪಯ್ಯಬಲಾಮ್ ಬೀಚ್‌ನಲ್ಲಿ ಆ ಸಮಾಧಿಯ ಬಳಿಯಲ್ಲೇ ಕಾಂ|| ಚಡಯನ್ ಗೋವಿಂದನ್ ಅವರ ಸಮಾಧಿಯನ್ನು ನಡೆಸಲು ಕಣ್ಣೂರು ಜಿಲ್ಲಾ ಸಮಿತಿ ನಿರ್ಧರಿಸಿತು.

ಸಂಪೂರ್ಣವಾದ ಹರತಾಳ :

ಯಾವಾಗಲೂ ವಾಹನ ಓಡಾಟ, ಜನ ಜಂಗುಳಿಯು ನಡುವೆ 'ಬಿಸಿ'ಯಾಗಿರುತ್ತಿದ್ದ ಕಣ್ಣೂರು ಸಪ್ಟೆಂಬರ್ 10ರಂದು ರುದ್ರಮೌನವನ್ನು ತಳೆದಿತ್ತು. ಅಂಗಡಿ ಮುಗ್ಗಟ್ಟುಗಳ ಮಾಲೀಕರು ಬಾಗಿಲು ಮುಚ್ಚಿ ಶ್ರದ್ಧಾಂಜಲಿ ಸಲ್ಲಿಸಿದರೆ, ಕಾರ್ಮಿಕರು, ರೈತರು ಕಾರ್ಖಾನೆ, ಹೊಲಗದ್ದೆಗಳಿಗೆ ತೆರಳಲಿಲ್ಲ. ಪೇಪರಿಗೂ ಪರದಾಡಬೇಕಾದ ಪರಿಸ್ಥಿತಿ ಈ ವರದಿಗಾರನದ್ದು. ಕಣ್ಣೂರು ಜಿಲ್ಲೆಯಾದ್ಯಂತ ಮುಂಜಾನೆಯಿಂದ ಸಂಜೆಯ ತನಕ ಹರತಾಳದ ಕರೆ ನೀಡಿದ್ದ ಸಿ.ಪಿ.ಐ.(ಎಂ) ಕೇರಳ ರಾಜ್ಯ ಸಮಿತಿ ರಾಜ್ಯದ ಇತರ ಭಾಗಗಳಲ್ಲಿ ಮಧ್ಯಾಹ್ನ 1 ಗಂಟೆಯಿಂದ ಸಂಜೆ 7 ಗಂಟೆವರೆಗೆ ಹರತಾಳದ ಕರೆ ನೀಡಿದ್ದು ಸಂಪೂರ್ಣ ಯಶಸ್ವಿಯಾದ ವರದಿ ಬಂದಿದೆ.

- ಬಾಲಕೃಷ್ಣ

ಇಂದಿನ ಜಾಗತಿಕ ಸನ್ನಿವೇಶ ಮತ್ತು ನಾವು

ಅಮೆರಿಕಾದ ಹೆಚ್ಚುತ್ತಿರುವ ಭಂಡತನ, 'ಏಶ್ಯನ್ ಹುಲಿ'ಗಳು ಇಲಿಗಳಾಗಿರುವುದು, ಬಂಡವಾಳಶಾಹಿ ದಾರಿ ತುಳಿಯಲಾರಂಭಿಸಿದ ರಶ್ಯಾದಲ್ಲಿನ ಬಿಕ್ಕಟ್ಟು, ಪಾಕಿಸ್ತಾನದಲ್ಲಿನ ಬೆಳವಣಿಗೆ ಗಳು ಈ ಹಿನ್ನಲೆಯಲ್ಲಿ ವಾಜಪೇಯಿ ಸರಕಾರ ದೇಶದ ಭವಿಷ್ಯವನ್ನು ಒತ್ತೆಯಿಡಲು ಮುಂದಾಗಿರುವುದು ಬಹಳ ಆತಂಕಕಾರಿ ಸಂಗತಿಗಳು. ಉದಾರೀಕರಣ-ಜಾಗತೀಕರಣ ಆರ್ಥಿಕ ಧೋರಣೆಗಳು ಹಾಗೂ ಕೋಮುವಾದದ ವಿರುದ್ಧ ಸಿಪಿಐ(ಎಂ) ಸೆಪ್ಟಂಬರ್ ೧೬ ರ 'ದಿಲ್ಲಿ ಚಲೋ' ಕಾರ್ಯಕ್ರಮದ ಮಹತ್ವವನ್ನು ಈ ಹಿನ್ನೆಲೆಯಲ್ಲಿ ಕಾಣಬೇಕು ಎನ್ನುತ್ತಾರೆ ಪ್ರಧಾನ ಕಾರ್ಯದರ್ಶಿ ಸುರ್ಜಿತ್.



ಹರ್ಕಿಶನ್ ಸಿಂಗ್ ಸುರ್ಜಿತ್

ಇಡೀ ಜಗತ್ತಿನ ಮೇಲೆ ತನ್ನ ಯಜಮಾನಿಕೆ ಹೇರುವ ಅಮೆರಿಕದ ಪ್ರಯತ್ನ ಈಗ ನಾಗರಿಕ ಸಮಾಜದ ಎಲ್ಲಾ ವರ್ತನೆಗಳನ್ನು, ಅಂತರ್ರಾಷ್ಟ್ರೀಯ ಕಾನೂನಿನ ವಿಧಿ-ವಿಧಾನಗಳನ್ನೆಲ್ಲಾ ಉಲ್ಲಂಘಿಸಿ ಒಂದು ನಿರ್ಣಾಯಕ ಹಂತ ಮುಟ್ಟಿದಂತಿದೆ.

ನಿಜ, ಇಂತಹ ಪ್ರಯತ್ನಗಳಿಗೆ ಈಗಲೂ ಪ್ರತಿರೋಧ ಬರುತ್ತಿದೆ. ಆದರೆ ಈ ಪ್ರತಿಭಟನೆ ಇಲ್ಲೊಂದು, ಅಲ್ಲೊಂದು ನಡೆಯುತ್ತಿದೆಯಷ್ಟೆ. ಇದರಿಂದ ಅಮೆರಿಕದ ಪ್ರಯತ್ನಗಳಿಗೆ ತಡೆಹಾಕಲು ಸಾಧ್ಯವಾಗುತ್ತಿಲ್ಲ. ಇದು ಕೂಡಾ ಅವರ ಭಂಡತನ ಇನ್ನೂ ಹೆಚ್ಚಲು ಒಂದು ಕಾರಣ.

ಇದೇ ವೇಳೆಗೆ ವಿಶ್ವಬ್ಯಾಂಕ್, ಐ.ಎಂ.ಎಫ್. ಹೇರಿದ ಆರ್ಥಿಕ ನೀತಿಗಳಾಗಲೀ ಮೂರನೇ ಜಗತ್ತಿನ ದೇಶಗಳನ್ನು ಹಾಳುಗೆಡವಿ ಸಾಮ್ರಾಜ್ಯಶಾಹಿಗಳಿಗೆ ಪ್ರಯೋಜನ ತಂದುಕೊಡುತ್ತಿದೆ. ಈ ನೀತಿಗಳ ಪರಿಣಾಮವೇನು ಎಂದು ಈಗ ಯಾರಿಗೂ ಬಿಡಿಸಿ ಹೇಳಬೇಕಾಗಿಲ್ಲ. ದಕ್ಷಿಣ ಕೋರಿಯಾ ಮತ್ತಿತರ ಆಗ್ನೇಯ ಏಶ್ಯಾದ ದೇಶಗಳ ಈಗಿನ ಪರಿಸ್ಥಿತಿ ಎಲ್ಲರ ಕಣ್ಣು ತೆರಸಬೇಕು. ಏಶ್ಯಾದ ಹುಲಿಗಳೆಂಬ ಅವುಗಳ ಹೆಗ್ಗಳಿಕೆ ಮಾಯವಾಗಿ ಅವೀಗ ಇಲಿಗಳಾಗಿವೆ. ಕೆಲವು ವರ್ಷಗಳ ಹಿಂದೆ ಇದೇ ರೀತಿಯ ಸ್ಥಿತಿ ಮೆಕ್ಸಿಕೋದಲ್ಲಿ ಉಂಟಾಗಿ ಝಪಾಟಿಸ್ಟಾ ದಂಗೆ ನಡೆದದ್ದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು. ಆ ದಂಗೆ ಕೇವಲ ಅವರ ಆಳುವ ವರ್ಗಗಳ ವಿರುದ್ಧ ಮಾತ್ರವಲ್ಲ ಅಮೆರಿಕಾದ ವಿರುದ್ಧ ಕೂಡ ಆಗಿತ್ತು.

ಇಂತಹ ಕ್ಷೋಭೆ ಅಮೆರಿಕಾ, ಜಪಾನು, ಯುರೋಪಿನಂತಹ ಸಾಮ್ರಾಜ್ಯಶಾಹಿ ದೇಶಗಳಲ್ಲೂ ಕಾಣುತ್ತಿದೆ. ಅಲ್ಲಿಯ ಜನಸಾಮಾನ್ಯರು ಬಿಕ್ಕಟ್ಟಿನ ಅಂಚಿಗೆ ಸಾಗಿರುವ ಕೈಗಾರಿಕಾ ಹಿಂಜರಿತ, ವಿಪರೀತ ನಿರುದ್ಯೋಗದ ಹಿಡಿತದಲ್ಲಿ ಸಿಲುಕಿದ್ದಾರೆ. ಈ ದೇಶಗಳ ಶೇರು ಮಾರುಕಟ್ಟೆಗಳು ಈ ವರ್ಷದಲ್ಲಿ ಹಲವು ಬಾರಿ ಕುಸಿತ ಕಾಣಬೇಕಾಗಿ ಬಂದಿದೆ.

ರಶ್ಯಾ: ಕಣ್ಣು ತೆರೆಸಬೇಕಾದ ಬೆಳವಣಿಗೆ

ರಶ್ಯಾದ ಪರಿಸ್ಥಿತಿ ಕಣ್ಣು ತೆರೆಸಬೇಕಾದ ಇನ್ನೊಂದು ಬೆಳವಣಿಗೆ. ಅಲ್ಲಿಯ ಆರ್ಥಿಕ ಪಾತಾಳಕ್ಕಿಳಿಯುತ್ತಿದೆ. ಇಲ್ಲಿ ಮತ್ತು ಪೂರ್ವ ಯುರೋಪಿಯನ್ ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಕಳಚಿ ಹಾಕಿದ ನಂತರ ಆರ್ಥಿಕ ಮತ್ತು ಜನಗಳ ಪರಿಸ್ಥಿತಿ ಸತತವಾಗಿ ಹದಗೆಡುತ್ತಾ ಬಂದಿರುವುದು ಎಲ್ಲರಿಗೂ ತಿಳಿದ ವಿಷಯ. ಆದರೆ ರಶ್ಯಾದಲ್ಲಿ ಅದು ಹಿಂದಿನ ಎಲ್ಲಾ 'ದಾಖಲೆ'ಗಳನ್ನು ಮೀರಿದೆ. ಇದು ಬೇರೆ ದೇಶಗಳಲ್ಲೂ ಮುಖ್ಯವಾಗಿ ಜರ್ಮನಿ ಮತ್ತು ಜಪಾನ್‌ಗಳಲ್ಲೂ ಆಘಾತದ ಅಲೆಗಳನ್ನು ಉಂಟುಮಾಡಿದೆ. ಅಮೆರಿಕದ ಶೇರು ಮಾರುಕಟ್ಟೆಯು ಇದರ ಪ್ರಭಾವದಿಂದ ತಪ್ಪಿಸಿ ಕೊಳ್ಳಲಾಗಿಲ್ಲ.

ಈ ಆರ್ಥಿಕ ಅವನತಿ ಅಲ್ಲಿಯ ರಾಜಕೀಯ ಸ್ಥಿತಿಯ ಮೇಲೆ ಇನ್ನೂ ಹೆಚ್ಚಿನ ಪರಿಣಾಮ ಬೀರಿದೆ. ಅದು ಇನ್ನೇನು ಪೂರ್ಣ ಪ್ರಮಾಣದ ರಾಜಕೀಯ ಬಿಕ್ಕಟ್ಟಿನ ಸ್ವರೂಪ ಪಡೆಯುವ ಹಂತದಲ್ಲಿದೆ. ಅಧ್ಯಕ್ಷ ಯೆಲ್ಟ್‌ಸಿನ್ ರಾಜಿನಾಮೆಯ ಊಹಾಪೋಹ ಮಾಸ್ಕೋದಲ್ಲಿ ದಟ್ಟವಾಗಿದೆಯಂತೆ. ಝಾರ್‌ನ ಅವನತಿಯಂತೆ ತನ್ನ ಅವನತಿಯೂ ಆಗದಿರಲಿ ಎಂದು ತಡೆಯಲು ಯೆಲ್ಟ್‌ಸಿನ್ ರಶ್ಯನ್ ಸಂಸತ್ತು ಡೂಮಾದಲ್ಲಿ ಕಮ್ಯುನಿಸ್ಟ್ - ನೇತೃತ್ವದ ವಿರೋಧಿ ಪಕ್ಷಗಳೊಂದಿಗೆ ಚೌಕಾಶಿ ನಡೆಸಿದರು. ಆದರೆ ಯೆಲ್ಟ್‌ಸಿನ್ ಮಾತುಗಳನ್ನು ನಂಬಲು ಸಿದ್ಧವಿಲ್ಲದ ಡೂಮಾ ಅವರು ಚೆನೊಮಿರ್ಡಿನ್‌ರನ್ನು ಪ್ರಧಾನ ಮಂತ್ರಿಯಾಗಿ ನೇಮಕ ಮಾಡಿದ್ದನ್ನು ಅನುಮೋದಿಸಲು ನಿರಾಕರಿಸಿತು. ರಶ್ಯನ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಝುಗನೋವ್ ಅವರು ದೇಶದಲ್ಲಿ ತಕ್ಷಣವೇ ಸಮಾಜವಾದದ ಪುನಸ್ಥಾಪನೆಯ ಸಾಧ್ಯತೆಯಿಲ್ಲದಿದ್ದರೂ ರಶ್ಯವನ್ನು ಬಿಕ್ಕಟ್ಟಿನ ಪ್ರಪಾತದ ಅಂಚಿಗೆ ತಂದು ನಿಲ್ಲಿಸಿದ ಆಳುವ ಕೂಟದೊಂದಿಗೆ ಸಹಕರಿಸಲು ತಮ್ಮ ಪಕ್ಷ ಸಿದ್ಧವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಇನ್ನೊಂದೆಡೆ ದೇಶವನ್ನು ಇಂತಹ ಸ್ಥಿತಿಗೆ ತಂದ 'ಸುಧಾರಣೆ'ಗಳನ್ನು ಕೈಬಿಡದಿರುವಂತೆ ಐ.ಎಂ.ಎಫ್., ವಿಶ್ವಬ್ಯಾಂಕ್ ಬಹಿರಂಗ ಬೆದರಿಕೆ ಹಾಕಿವೆ. ಒಟ್ಟಿನಲ್ಲಿ ರಶ್ಯಾದಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆಯೆಂದರೆ ಅಮೆರಿಕಾ ಅಧ್ಯಕ್ಷ ಕ್ಲಿಂಟನ್ ಅಲ್ಲಿಗೆ ಯೋಜಿತ ಭೇಟಿ ನೀಡಿದಾಗ ಮಾಸ್ಕೋದಲ್ಲಿ ಆತನನ್ನು ಸ್ವಾಗತಿಸಲು ಸರಕಾರವೇ ಇರಲಿಲ್ಲ!

ಅಮೆರಿಕನ್ ಭಂಡತನ

ಇಂತಹ ಒಂದು ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ಅಮೆರಿಕಾ ತನ್ನ ಭಂಡತನ ತೋರಿದೆ - ಅಫಘಾನಿಸ್ತಾನ, ಸೂಡಾನ್‌ಗಳೊಳಗಿನ ಗುರಿಗಳಿಗೆ ಕ್ಷಿಪಣಿ ಧಾಳಿ ನಡೆಸಿದೆ. ಆದರ ಈ ಕ್ರಮವನ್ನು ಇಡೀ ಜಗತ್ತಿನ ಸಾರ್ವಜನಿಕಾಭಿಪ್ರಾಯ ವ್ಯಾಪಕವಾಗಿ ಖಂಡಿಸಿದೆ. ಕ್ಯೂಬಾದ ಹೇಳಿಕೆ ಇದಕ್ಕೊಂದು ಉದಾಹರಣೆ. ಸ್ವತಃ ಅಮೆರಿಕದಲ್ಲಿನ ನೆಲೆಗಳಿಂದ, ಅಮೆರಿಕ ಸರಕಾರದ ಬೆಂಬಲದಿಂದ ಗಡಿಯಾಚೆಯ ಭಯೋತ್ಪಾದಕರಿಗೆ ಗುರಿಯಾಗಿರುವ ದೇಶ ಕ್ಯೂಬಾ. ಆದರೂ ಗಡಿ ಮೀರಿದ ಭಯೋತ್ಪಾದನೆಯನ್ನು ಎದುರಿಸುವ ಹೆಸರಲ್ಲಿ ಅಮೆರಿಕಾ ವಾಸ್ತವವಾಗಿ ಅಂತರ್ರಾಷ್ಟ್ರೀಯ ಕಾನೂನಿನ ನೀತಿ-ನಿಯಮಗಳನ್ನು ಉಲ್ಲಂಘಿಸಿದೆ ಎಂದು ಬಲವಾಗಿ ಖಂಡಿಸಿದೆ.

ನವಾಜ್ ಶರೀಫರ 'ಇಸ್ಲಾಮಿಕರಣ'

ಇತ್ತೀಚಿನ ಇನ್ನೊಂದು ಮಹತ್ವದ ಬೆಳವಣಿಗೆ ಎಂದರೆ ಪಾಕಿಸ್ತಾನದಲ್ಲಿ 'ಇಸ್ಲಾಮಿ ಕಾನೂನನ್ನು' ತರಲು ಅಲ್ಲಿಯ ಪ್ರಧಾನಿ ನವಾಜ್ ಶರೀಫ್ ಅಲ್ಲಿಯ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಆಗಸ್ಟ್ 28 ರಂದು ಒಂದು ಮಸೂದೆ ತಂದಿರುವುದು. ಈ ಹಿಂದೆ ಜನರಲ್ ಜಿಯಾಉಲ್ ಹಕ್ ಆಂತರಿಕ ಸಮಸ್ಯೆಗಳಿಂದ ಜನಗಳ ಗಮನವನ್ನು ಬೇರೆಡೆಗೆ ಸೆಳೆಯಲು ಮತ್ತು ಮುಲ್ಲಾಗಳ ಬೆಂಬಲ ಪಡೆಯಲು ತಂದ ಕ್ರಮಗಳನ್ನು ಇದು ಮೀರಿಸಿದೆ ಎಂಬ ಅಭಿಪ್ರಾಯ ಉಂಟಾಗಿದೆ.

ನವಾಜ್ ಶರೀಫ್‌ರ ಇಕ್ಕಟ್ಟು ಅರ್ಥವಾಗುವಂತದ್ದು. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಏನೇ ರಾಜಕೀಯ, ರಾಜತಾಂತ್ರಿಕ ಭಿನ್ನತೆಗಳಿದ್ದರೂ ಆರ್ಥಿಕ ರಂಗದಲ್ಲಂತೂ ಒಂದು ಸಾಮ್ಯತೆಯಿದೆ - ಅದೆಂದರೆ ಎರಡೂ ದೇಶಗಳ ಸರಕಾರಗಳು ಈ ದಶಕದ ಆರಂಭದಿಂದಲೇ ಐ.ಎಂ. ಎಫ್-ವಿಶ್ವಬ್ಯಾಂಕ್ ಆದೇಶಗಳನ್ನು ಅತ್ಯಂತ ವಿಧೇಯತೆಯಿಂದ ಪಾಲಿಸಿ ಕೊಂಡು ಬಂದಿವೆ. ಆದರೆ ಪಾಕಿಸ್ತಾನದ ಆರ್ಥಿಕತೆ ಭಾರತದ ಆರ್ಥಿಕತೆಗಿಂತ ಬಹಳ ದುರ್ಬಲವಾಗಿದ್ದರಿಂದ ಈ ಅವಧಿ ಯಲ್ಲಿ ಈ ಧೋರಣೆಗಳು ಅದನ್ನು ಸುಮಾರಾಗಿ ಅಂಗವಿಕಲಗೊಳಿಸಿವೆ. ಎಂತಹ ಪರಿಸ್ಥಿತಿಯಿದೆಯೆಂದರೆ ಅದರ ಒಟ್ಟು ಆಂತರಿಕ ಉತ್ಪಾದನೆಯ 74% ಕೇವಲ ಎರಡೇ ಬಾಬ್ತುಗಳಿಗೆ ಖರ್ಚಾಗುತ್ತಿದೆ - ಒಂದು ಮಿಲಿಟರಿಗೆ, ಇನ್ನೊಂದು ಸಾಲದ ಬಡ್ಡಿಪಾವತಿಗೆ. ಇದರಿಂದ ಬೆನಝೀರ್ ಭುಟ್ಟೋ ಪ್ರಧಾನ ಮಂತ್ರಿ ಯಾಗಿದ್ದಾಗ ವಾಶಿಂಗ್ಟನ್‌ನಲ್ಲಿರುವ ಐ.ಎಂ.ಎಫ್. ಕಚೇರಿಯೆದುರು ತಕ್ಷಣದ ಪರಿಹಾರಕ್ಕಾಗಿ ಮೊಣಕಾಲೂರಿ ಅಂಗಲಾಚುವಂತಹ ಪರಿಸ್ಥಿತಿ ಉಂಟಾಗಿತ್ತು. ಆದರೆ ಆಕೆಯನ್ನು ಅಧಿಕಾರದಿಂದಿಳಿಸಬೇಕೆಂದು ಬಯಸಿದ್ದ ಐ.ಎಂ.ಎಫ್. ಆ ಸಹಾಯ ನೀಡಲಿಲ್ಲ. ಈಗ ಪಾಕಿಸ್ತಾನದ ಆರ್ಥಿಕದ ಪ್ರತಿಯೊಂದು ಕೀಲಿಕೈ ಕೂಡಾ ಐ.ಎಂ.ಎಫ್. - ವಿಶ್ವಬ್ಯಾಂಕ್‌ನ ಹುಡುಗರ ಕೈಯಲ್ಲಿವೆ. ಭಾರತಕ್ಕೆ ಇದೊಂದು ಪಾಠವಾಗಬೇಕು.

ಮೇ ಅಂತ್ಯದ ಪಾಕಿಸ್ತಾನೀ ಅಣುಸ್ಫೋಟದ ನಂತರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ಬಹುಶಃ ನವಾಜ ಶರೀಫ್‌ಗೆ ಜನಗಳ ಅಸಂತೃಪ್ತಿ ಹೆಚ್ಚಲಿದೆ ಎಂಬ ನಿರೀಕ್ಷೆಯಿದ್ದಿರಬೇಕು. ಆದ್ದರಿಂಧಲೇ ಅಣುಸ್ಫೋಟದೊಂಧಿಗೆ ತುರ್ತುಪರಿಸ್ಥಿತಿ ಹಾಕಲಾಯಿತು. ಈಗಂತೂ ಪರಿಸ್ಥಿತಿ ಹತೋಟಿ ಮೀರಿದಂತೆ ಕಾಣುತ್ತದೆ. ಏಕೆಂದರೆ ಕೇವಲ ಭಾರತ-ವಿರೋಧಿ ಭಾವನೆಗಳನ್ನು ಬಡಿದೆಬ್ಬಿಸುವುದಷ್ಟೇ ಸಾಕಾಗಲಿಲ್ಲ. ಆದ್ದರಿಂದ ಈಗ ಕುಸಿಯುತ್ತಿರುವ ಆಡಳಿತವನ್ನು ಎತ್ತಿ ನಿಲ್ಲಿಸಲು ಇಸ್ಲಾಮೀಕರಣದ ಇನ್ನೊಂದು ಆವೃತ್ತಿ ಬಂದಿದೆ.

ಸಂಘರ್ಷಗಳು ಉಲ್ಬಣಗೊಳ್ಳುತ್ತಿವೆ

ಆದರೆ ಇದರಿಂದಲೂ ನವಾಜ್ ಶರೀಫರಿಗೆ ಪ್ರಯೋಜನವೇನೂ ಆದಂತಿಲ್ಲ. ಒಂದೆಡೆ ಒಂದಾಗಿದ್ದ ಭಾರತದಿಂದ ಕೋಮು ಆಧಾರದ ಮೇಲೆ ಪಾಕಿಸ್ತಾನವೆಂದು ಪ್ರತ್ಯೇಕಿಸಿದಾಗ ಅದನ್ನು ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ನಿರ್ಮಿಸಬೇಕೆಂಬ ಜಿನ್ನಾರ ಕನಸಿನತ್ತ ಬೆನ್ನು ತಿರುಗಿಸಿದರೆ, ಇನ್ನೊಂದೆಡೆ ಮೂಲಭೂತವಾದಿ ಶಕ್ತಿಗಳನ್ನು ತೃಪ್ತಿಪಡಿಸಲೂ ಶರೀಫರಿಗೆ ಆಗಿಲ್ಲ. ಇದೊಂದು ಸುಳ್ಳು ಪ್ರಯತ್ನ ಎಂದಿರುವ ಈ ಶಕ್ತಿಗಳು ಅವರನ್ನು ಪದಚ್ಯುತಗೊಳಿಸಬಯಸುತ್ತಿವೆ. ಉದಾಹರಣೆಗೆ, ಜಮಾತ್-ಎ-ಇಸ್ಲಾಮಿ ಶರೀಫ್ ಆಡಳಿತದ ವಿರುದ್ಧ ತನ್ನ ಧಾಳಿಯನ್ನು ತೀವ್ರಗೊಳಿಸಿ ಜನಗಳನ್ನು ಬೀದಿಗೆ ತರುವುದಾಗಿ ಬೆದರಿಸಿದೆ. ಬೆನಝೀರ್ ಭುಟ್ಟೋರ ಪಾಕಿಸ್ತಾನೀ ಪೀಪಲ್ಸ್ ಪಾರ್ಟಿ ಹಾಗೂ ಮಾಜಿ ಅಧ್ಯಕ್ಷ ಫರೂಕ್ ಅಹ್ಮದ್ ಲೆಘಾರಿ ಇದನ್ನು ಕಟುವಾಗಿ ಟೀಕಿಸಿದ್ದಾರೆ. ಸರಕಾರದ ಮಿತ್ರಪಕ್ಷಗಳಾದ ಎಂ.ಕ್ಯೂ.ಎಂ. ಹಾಗೂ ನ್ಯಾಶನಲ್ ಅವಾಮೀ ಪಾರ್ಟಿ ಕೂಡಾ ಅದರಿಂದ ದೂರ ನಿಂತಿದೆ. ಇತರ ಪಕ್ಷಗಳೂ ಟೀಕೆ ಮಾಡುವುದರಲ್ಲಿ ಹಿಂದೆ ಬಿದ್ದಿಲ್ಲ.

ಈ ಬಹುದೇಶೀ ಪಾಕಿಸ್ತಾನದಲ್ಲಿನ ಜನಾಂಗೀಯ, ಭಾಷಿಕ ಅಲ್ಪಸಂಖ್ಯಾತರೂ ಈ ಕ್ರಮದ ಬಗ್ಗೆ ಬಹಳ ಸಂದೇಹ ಹೊಂದಿದ್ದಾರೆ. ಒಂದೇ ಭಾಷಾ ಗುಂಪು ರಾಜಕೀಯ ಮತ್ತು ಆರ್ಥಿಕ ವಲಯಗಳಲ್ಲಿ ಪ್ರಾಬಲ್ಯ ಹೊಂದಿರುವ ಈ ದೇಶದಲ್ಲಿ ಸಿಂಧಿಗಳು, ಬಲೂಚಿಗಳು, ಪುಷ್ತೋಗಳು, ಅಷ್ಟೇ ಅಲ್ಲ ಮುಹಾಜಿರ್‌ಗಳು ಕೂಡಾ ತಮ್ಮ ಅಸ್ತಿತ್ವದ ಬಗ್ಗೆ ಶಂಕಿತರಾಗಿದ್ದಾರೆ. ಹಿಂದೂ ಗಳು, ಕ್ರಿಶ್ಚಿಯನ್ನರು, ಅಹಮದೀಯರು ಮತ್ತು ಶಿಯಾ ಮುಸ್ಲಿಮರ ಬಗ್ಗೆಯೂ ಇದನ್ನೇ ಹೇಳಬಹುದು. ತಂತಮ್ಮ ವೈಯಕ್ತಿಕ ಕಾನೂನುಗಳನ್ನು ಮುಂದುವರೆಸುವ ಸರಕಾರದ ಭರವಸೆಯ ಬಗ್ಗೆ ಅವರಿಗೆ ನಂಬಿಕೆಯಿರುವಂತಿಲ್ಲ.

ಇದು ಪಾಕಿಸ್ತಾನೀ ಸಮಾಜ ಮತ್ತು ರಾಜಕಾರಣದಲ್ಲಿ ಅಡಕವಾಗಿರುವ ಸಂಘರ್ಷಗಳನ್ನು ಉಲ್ಬಣಗೊಳಿಸಲಿದೆ. ಪಾಕಿಸ್ತಾನಕ್ಕೆ ಮಿಲಿಯಗಟ್ಟಲೆ ಡಾಲರುಗಳನ್ನು ಸುರಿಯುವ ಅನಿವಾಸಿ ಪಾಕಿಸ್ತಾನೀಯರೂ ಮತ್ತೆ ಮಧ್ಯಯುಗಕ್ಕೆ ದೇಶವನ್ನೊಯ್ಯುವ ಕ್ರಮಗಳನ್ನು ಒಪ್ಪಲಿಕ್ಕಿಲ್ಲ. ಏಕೆಂದರೆ ಸಾಕಷ್ಟು ಪಾಶ್ಚಾತ್ಯೀಕರಣಗೊಂಡ ಜನ ಅವರು. ಆದ್ದರಿಂದ ಇಂತಹ ವೈರುಧ್ಯಗಳನ್ನು ಪರಿಹರಿಸುವುದು ಪಾಕಿಸ್ತಾನೀ ಆಳರಸರಿಗೆ ಸುಲಭದ ಕೆಲಸವೇನಲ್ಲ. ಇದರಲ್ಲಿ ಅದು ವಿಫಲವಾದರೆ ದೇಶದ ಗತಿಯೇನಾದೀತೆಂದು ಹೇಳಲು ಸಾಧ್ಯವಿಲ್ಲ. ಪೂರ್ವ ಪಾಕಿಸ್ತಾನವಾಗಿದ್ದು ಬಾಂಗ್ಲಾದೇಶವಾಗಿಬಿಟ್ಟ ಉದಾಹರಣೆ ಕಣ್ಮುಂದೆ ಇದೆ. ಸೇನಾ ಪ್ರಬಲರು ಇನ್ನೂ ದುರ್ಬಲವಾಗಿರುವ ಅಲ್ಲಿಯ ಪ್ರಜಾಪ್ರಭುತ್ವ ವ್ಯವಸ್ಥೆಯ ಕತ್ತು ಹಿಸುಕಲು ಮತ್ತೆ ಮುಂದಾದರೂ ಆಶ್ಚರ್ಯವಿಲ್ಲ.

ಭಾರತವೂ ಇವೆಲ್ಲದರಿಂದ ಪಾಠ ಕಲಿಯಬೇಕಾಗಿದೆ. ಆರ್ಥಿಕ ಧೋರಣೆಗಳು ಮತ್ತು ಮೂಲಭೂತವಾದ ನಮ್ಮ ಆರ್ಥಿಕ ಸಾರ್ವಭೌಮತೆ ಮತ್ತು ರಾಷ್ಟ್ರೀಯ ಐಕ್ಯತೆಗೂ ಗಂಭೀರ ಸವಾಲೊಡ್ಡಿದೆ.

ವಾಜಪೇಯಿ ಸೋಗಲಾಡಿತನ

ಪಾಕಿಸ್ತಾನದಲ್ಲಿ ಇಸ್ಲಾಮಿ ಕಾನೂನನ್ನು ತರುವ ಪ್ರಯತ್ನವನ್ನು ಭಾರತದ ಪ್ರಧಾನಮಂತ್ರಿಗಳು ಖಂಡಿಸಲು ಪ್ರಯತ್ನಿಸಿದರು, ಅದಕ್ಕೂ ನಮ್ಮ ಭದ್ರತಾ ಆತಂಕಗಳಿಗೂ ತಳುಕು ಹಾಕಲು ಪ್ರಯತ್ನಿಸಿದರು. ಆದರೆ ಅವರಂತವರ ಬಾಯಲ್ಲಿ ಇಂತಹ ಟೀಕೆ ಹಾಸ್ಯಾಸ್ಪದ, ಸೋಗಲಾಡಿತನದ ಪ್ರತೀಕ. ಬಹುಸಂಖ್ಯಾತ ಕೋಮುವಾದದ ಅಲೆಯ ಮೇಲೆ ಅಧಿಕಾರಗಿಟ್ಟಿಸಿಕೊಂಡ ವಾಜಪೇಯಿ ಇಸ್ಲಾಮಿ ಮೂಲಭೂತವಾದದ ಬಗ್ಗೆ ಟೀಕೆ ಮಾಡುವ ನೈತಿಕ ಹಕ್ಕು ಕಳಕೊಂಡವರು. ವಾಸ್ತವ ಸಂಗತಿಯೆಂದರೆ ಇಂದು ಬಹುಸಂಖ್ಯಾತ ಕೋಮುವಾದ ಭಾರತದ ರಾಜಕೀಯ ವ್ಯವಸ್ಥೆಯ ಜಾತ್ಯತೀತ, ಒಕ್ಕೂಟ ಸ್ವರೂಪಕ್ಕೆ ಅಭೂತಪೂರ್ವ ಬೆದರಿಕೆಯೊಡ್ಡಿದೆ. ಈ ಮೂಲಕ ಭಾರತದ ಐಕ್ಯತೆಗೂ ಬೆದರಿಕೆ ಯೊಡ್ಡಿದೆ. ಪ್ರಧಾನಮಂತ್ರಿಗಳು ಮತ್ತು ಅವರ ಪಕ್ಷ ಬಿಜೆಪಿ ಸೂಡಾನ್, ಅಫಘಾನಿಸ್ತಾನಗಳ ಮೇಲೆ ಅಮೆರಿಕನ್ ಧಾಳಿಗಳನ್ನು ನೇರವಾಗಿ ಖಂಡಿಸುವಲ್ಲೂ ವಿಫಲರಾಗಿದ್ದಾರೆ - ಇದಕ್ಕೆ ಕಾರಣವೇನು ಎಂದು ಬಹಳವೇನೂ ಹುಡುಕಬೇಕಾಗಿಲ್ಲ. ಅಮೆರಿಕಾದ ಧಾಳಿಗಳಿಗೆ ಒಳಗಾದ ಈ ಎರಡೂ ದೇಶ ಗಳು ಮುಸ್ಲಿಂ ದೇಶಗಳು. ಬಿಜೆಪಿಗೆ ಸಂತೋಷವಾಗಲು ಇಷ್ಟೇ ಸಾಕು! ಆದರೆ ಈ ಮಂದದೃಷ್ಟಿಯಿಂದಾಗಿ ಈ ರೀತಿ ಅಮೆರಿಕನ್ ಧಾಳಿಗಳನ್ನು ಸಮರ್ಥಿಸಿ ಕೊಳ್ಳುವಾಗ ಅದನ್ನು ಭಾರತದ ಮೇಲೂ ಒಂದು ದಿನ ಬಳಸಲು ಸಾಧ್ಯ ಎಂಬುದನ್ನು ಅವರು ಕಾಣದಾಗಿದ್ದಾರೆ.

ಇಲ್ಲಿ ಅತ್ಯಂತ ಖಂಡನಾರ್ಹವಾದ ಇನ್ನೊಂದು ಸಂಗತಿಯೆಂದರೆ ಮಾಜಿ ಪ್ರಧಾನಿ ಐ.ಕೆ.ಗುಜ್ರಾಲ್ ಅಮೆರಿಕನ್ ಧಾಳಿಗಳನ್ನು ಅಂತರ್ರಾಷ್ಟ್ರೀಯ ಭಯೋತ್ಪಾದನೆಯ ಹೆಸರಲ್ಲಿ ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಅಮೆರಿಕನ್ ಸಾಮ್ರಾಜ್ಯಶಾಹಿಯೇ ದಶಕಗಳ ಕಾಲ ಅಂತರ್ರಾಷ್ಟ್ರೀಯ ಭಯೋತ್ಪಾದನೆಯ ಅತಿದೊಡ್ಡ ಪ್ರೋತ್ಸಾಹಕ, ಈಗಲೂ ಅದು ತನ್ನ ಈ ಪಾತ್ರವನ್ನು ಬಿಟ್ಟುಕೊಟ್ಟಿಲ್ಲ ಎಂಬುದನ್ನು ಯಾರೂ ಮರೆಯಲು ಸಾಧ್ಯವಿಲ್ಲ.

ವಾಜಪೇಯಿ ಸರಕಾರ ಭಾರತದ ವಿರುದ್ಧ ಅಮೆರಿಕಾ ನೇತೃತ್ವದ ನಿರ್ಬಂಧಗಳ ಬಗ್ಗೆಯೂ ಎಡಬಿಡಂಗಿ ನಿಲುವು ತಳೆದಿದೆ. ಇಲ್ಲಿ ಅದರ ಮರೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರತದ ಆರ್ಥಿಕದೊಳಗೆ ನುಸುಳಲು ಇನ್ನಷ್ಟು ಅವಕಾಶ ಮಾಡಿಕೊಟ್ಟಿದೆ. ಕೆಲ ಶರತ್ತುಗಳ ಮೇಲೆ ಸಿ.ಟಿ.ಬಿ.ಟಿ.ಗೆ ಸಹಿ ಹಾಕಲು, ಇನ್ನೊಂದು ಪಕ್ಷಪಾತಪೂರ್ಣ ಸಂಧಿಯಾದ ಎಫ್.ಎಂ.ಸಿ.ಟಿ. ಬಗ್ಗೆಯೂ ಮಾತುಕತೆ ಗಳಲ್ಲಿ ಸೇರಿಕೊಳ್ಳಲು ಸಿದ್ಧವಿದೆ ಎಂಬ ಬಗ್ಗೆ ಸಾಕಷ್ಟು ಸಂಕೇತಗಳು ಸಿಕ್ಕಿವೆ.

ಉದಾರೀಕರಣ, ಜಾಗತೀಕರಣದ ಧೋರಣೆಗಳ ಬಗ್ಗೆ ಬಿಜೆಪಿಯ ನಿಲುವೇನೆಂದು ಈಗ ಹೇಳುವ ಅವಶ್ಯಕತೆಯೂ ಇಲ್ಲ. ಅಧಿಕಾರ ಬಂದಂದಿನಿಂದಲೇ 'ಸ್ವದೇಶಿ' ಯನ್ನು ಮೂಲೆಗೆ ತಳ್ಳಿ, ತನ್ನ ರಾಷ್ಟ್ರೀಯವಾದದ ಹೆಗ್ಗಳಿಕೆಯನ್ನು ಸಂಪೂರ್ಣ ಮರೆತು ಹೇಗೆ ಮುಂದುವರೆಯುತ್ತಿದೆಯೆಂದರೆ ಅದರ ಗುರು ಆರ್.ಎಸ್.ಎಸ್. ಕೂಡಾ ಈ ನೀತಿಗಳಿಂದ ದೂರನಿಲ್ಲಲು ಪ್ರಯತ್ನಿಸು ವಂತಾಗಿದೆ. ಇದು ಜನಗಳನ್ನು ವಂಚಿಸುವ ಇನ್ನೊಂದು ಕ್ರಮ ಎನ್ನುವುದು ಬೇರೆ ಮಾತು. ಒಟ್ಟಿನಲ್ಲಿ ಬಿಜೆಪಿ ಸರಕಾರದ ಈ ಎಲ್ಲಾ ಕ್ರಮಗಳಿಂದಾಗಿ ದೇಶದ ಭವಿಷ್ಯವನ್ನೇ ಸಾಮ್ರಾಜ್ಯಶಾಹಿಗಳಿಗೆ ಒತ್ತೆಯಿಡಲಾಗುತ್ತಿದೆ.

ಬೇರೇನು ನಿರೀಕ್ಷಿಸಲು ಸಾಧ್ಯ?

ಆದರೆ ಬಿಜೆಪಿಯಂತಹ ಮಾತಿಗೂ ಕೃತಿಗೂ ಅಜಗಜಾಂತರವಿರುವ ಒಂದು ಪಕ್ಷದಿಂದ ಇನ್ನೇನು ತಾನೇ ನಿರೀಕ್ಷಿಸಲು ಸಾಧ್ಯ? ರಾಷ್ಟ್ರೀಯವಾದಿಯೆಂದು ಹೇಳಿಕೊಳ್ಳುವ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ದೇಶದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಆಚರಣೆಗೆಂದು ರಚಿಸಿದ ವಿಶಾಲ ರಾಷ್ಟ್ರೀಯ ಸಮಿತಿಯನ್ನು ಮೂಲೆಗೊತ್ತಿದ್ದಾಗಲೀ, ಸುಲಿಗೆಕೋರ ಬಹುರಾಷ್ಟ್ರೀಯ ಕಂಪನಿಗಳಿಗೆ ಎದೆತುಂಬಿ ಸ್ವಾಗತ ನೀಡಿದ್ದಾಗಲೀ, ಸ್ವದೇಶಿ ಮಾತುಗಳನ್ನೆಲ್ಲಾ ಮೂಲೆಗೆಸೆದುದಾಗಲೀ ಆಕಸ್ಮಿಕವಲ್ಲ. ಅದೇ ರೀತಿ ಬಿಜೆಪಿಗೆ ಪ್ರಚಾರ ಕೊಡಲು ಏನು ಬೇಕಾದರೂ ಮಾಡಲು ಸಿದ್ಧವಿರುವ ಟಿ.ವಿ. ಚಾನಲುಗಳೇ ವಿಶೇಷವಾಗಿ ಅಮೆರಿಕಾದಿಂದ ಆಮದಾದ ಹೊಲಸು ಸಾಮ್ರಾಜ್ಯಶಾಹಿ ಸಂಸತಿಯನ್ನು ಬಿತ್ತರಿಸುತ್ತಿರುವುದೂ ಆಕಸ್ಮಿಕವೇನಲ್ಲ. ಬಹಳಷ್ಟು ಮಾತನಾಡುವ ವಾರ್ತಾ ಮತ್ತು ಪ್ರಸಾರ ಮಂತ್ರಿಗಳೂ ಈ ರೀತಿ ಯುವ ಮನಸ್ಸುಗಳನ್ನು ಕೆಡಿಸುವ ಪ್ರಸಾರಗಳ ವಿರುದ್ಧ ಕಿರುಬೆರಳನ್ನು ಎತ್ತದಿರುವುದು ಆಕಸ್ಮಿಕವಲ್ಲ.

ದೇಶಕ್ಕೆ, ನಮ್ಮ ಸಮಾಜಕ್ಕೆ ಅಪಾಯವಿರುವುದು ಇಲ್ಲೇ. ಈ ವಿಶಾಲ ಸಾಮಾಜಿಕ-ಆರ್ಥಿಕ-ರಾಜಕೀಯ ಹಿನ್ನೆಲೆಯಲ್ಲಿಯೇ ಐಎಂಎಫ್ - ವಿಶ್ವಬ್ಯಾಂಕ್ ಹೇರಿದ ಆರ್ಥಿಕ ನೀತಿಗಳು ಮತ್ತು ಕೋಮುವಾದದ ವಿರುದ್ಧ ಹೋರಾಡಬೇಕೆಂದು ಸಿಪಿಐ(ಎಂ) ನೀಡಿರುವ ಕರೆಯ ಮಹತ್ವವನ್ನು ಅರಿಯಬೇಕಾಗಿದೆ. ದೇಶದ ಐಕ್ಯತೆಯನ್ನು, ಆರ್ಥಿಕ ಸಾರ್ವಭೌಮತೆಯನ್ನು ರಕ್ಷಿಸಿ ಪುನರುಜ್ಜೀವನಕ್ಕಾಗಿ ನಡೆಸುವ ದೀರ್ಘ ಹಾಗೂ ವ್ಯಾಪಕವಾದ ಹೋರಾಟದಲ್ಲಿ ಸೆಪ್ಟೆಂಬರ್ 16 ರ ದಿಲ್ಲಿ ಚಲೋ ಕಾರ್ಯಕ್ರಮ ಮೊದಲ ಹೆಜ್ಜೆ, ಮಹತ್ವದ ಹೆಜ್ಜೆ.

ಸೂಡಾನ್, ಅಫಘಾನಿಸ್ತಾನಗಳ ಮೇಲೆ ಅಮೆರಿಕನ್ ಕ್ಷಿಪಣಿ ಧಾಳಿಗಳಿಗೆ ವಾಜಪೇಯಿ ಸರಕಾರದ ಬೆಂಬಲ ಒಂದು ನಾಚಿಕೆಗೇಡಿನ ಘಟನೆ. ಇದರಿಂದಾಗಿ ಭಾರತ ಅಮೆರಿಕದ ಪಾಶ್ಚಿಮಾತ್ಯ ಮಿತ್ರರ, ಬಾಲಂಗೋಚಿ ದೇಶಗಳ ಸಾಲಿಗೆ ಸೇರಿತು. ಅಮೆರಿಕನ್ ಅರಸರ ಮುಂದೆ ಮೊಣಕಾಲೂರುವ ಈ ಕುರುಡು ನೀತಿ ಬಿಜೆಪಿ-ಆರ್‌ಎಸ್‌ಎಸ್ ನ ಕೋಮುವಾದಿ ಮನಸ್ಸಿನ ವಿಸ್ತರಣೆ ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್‌ರವರು.

ಅಮೇರಿಕ ಕ್ಷಿಪಣಿದಾಳಿಗೆ ಬೆಂಬಲವಾದ ವಾಜಪೇಯಿ ಸರಕಾರಕ್ಕೆ ತಿರುಗುಬಾಣ



"ಅಮೆರಿಕಾ! ಆಫ್ರಿಕಾದ ಮೇಲೆ ಬಾಂಬು ಹಾಕುವುದನ್ನು ನಿಲ್ಲಿಸಿ", "ಹಣ ಯುದ್ಧ ನಡೆಸಲಿಕ್ಕಲ್ಲ, ಉದ್ಯೋಗ ನಿರ್ಮಿಸಲು" ಎಂಬಿತ್ಯಾದಿ ಘೋಷಣಾ ಪಟ್ಟಿಗಳನ್ನು ಹಿಡಿದು ಅಮೆರಿಕನ್ ಸೇನಾ ಪಡೆಗಳ ಕಚೇರಿಯೆದುರು ಅಮೆರಿಕನ್ನರ ಪ್ರತಿಭಟನೆ

ಪ್ರಕಾಶ್ ಕಾರಟ್

ಸುಡಾನ್ ಮತ್ತು ಅಫ್ಘಾನಿಸ್ತಾನದ ಮೇಲೆ ಅಮೇರಿಕ ಕ್ಷಿಪಣಿ ಧಾಳಿ ಮಾಡಿದ್ದನ್ನು ಬಿಜೆಪಿ ನೇತೃತ್ವದ ಸರಕಾರ ಬೆಂಬಲಿಸಿದೆ. ವಿದೇಶಾಂಗ ಖಾತೆ ಹೊರಡಿಸಿದ ಹೇಳಿಕೆ ಅಂತರ್ರಾಷ್ಟ್ರೀಯ ಭಯೋತ್ಪಾದನೆಗೆ ಕಾರಣವಾದವರ ವಿರುದ್ಧ ಕ್ರಮಕ್ಕೆ ಜಾಗತಿಕ ಸಹಕಾರ ಬೇಕೆಂದು ಕರೆ ನೀಡಿದೆ. ಆದರೆ ಆ ಹೇಳಿಕೆ, ಅಮೆರಿಕದ ಕ್ರಮವನ್ನು ಸೌಮ್ಯವಾಗಿ ಯಾದರೂ ಟೀಕಿಸುವ ಗೋಜಿಗೆ ಹೋಗಿಲ್ಲ.

ಸರಕಾರದ ಅಮೆರಿಕ ಪರ ಧೋರಣೆಯನ್ನು ಪ್ರಧಾನಿ ವಾಜಪೇಯಿಯವರೇ ತಮ್ಮ ಹೇಳಿಕೆಯಲ್ಲಿ ಸಮರ್ಥಿಸಿಕೊಂಡಿರುವುದು ಸ್ಪಷ್ಟವಾಗಿದೆ. ಅಮೆರಿಕ ದಾಳಿಮಾಡುವ ಮುನ್ನ ಭಯೋತ್ಪಾದಕರ ಕೃತ್ಯ ನಡೆದಿತ್ತು ಎಂದು ಪ್ರಧಾನಿ ಹೇಳಿದ್ದಾರೆ. ಕೆನ್ಯಾ ಮತ್ತು ತಾಂಜಾನಿಯಾದಲ್ಲಿ ಅಮೆರಿಕ ರಾಯಭಾರ ಕಚೇರಿ ಮೇಲೆ ನಡೆದ ಬಾಂಬ್ ದಾಳಿಯನ್ನು ಪ್ರಸ್ತಾಪಿಸಿ ಅವರು ಈ ಮಾತು ಹೇಳಿದ್ದರು.

ಪಾಕಿಸ್ತಾನ ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಗೆ ಅದರ ಬೆಂಬಲದ ಸಂಬಂಧವಾಗಿಯೂ ಅಮೆರಿಕ ಇದೇ ನಿಲುವನ್ನು ತಳೆಯಬೇಕೆಂಬುದು ಪ್ರಧಾನಿ ಮತ್ತು ಆಗ ಜೈಪುರದಲ್ಲಿ ಸಭೆ ಸೇರಿದ್ದ ಬಿಜೆಪಿಯ ಸ್ಪಷ್ಟ ಇಂಗಿತವಾಗಿತ್ತು.

ನಾಚಿಕೆಗೇಡಿನ ಬೆಂಬಲ

ಅಮೆರಿಕ ದಾಳಿಗೆ ವಾಜಪೇಯಿ ಸರಕಾರ ಬೆಂಬಲ 1991 ರಲ್ಲಿ ಕೊಲ್ಲಿಯುದ್ಧದ ವೇಳೆ ಚಂದ್ರಶೇಖರರ ಅಲ್ಪಸಂಖ್ಯಾತ ಸರಕಾರ ಅಮೆರಿಕದ ಯುದ್ಧ ವಿಮಾನಗಳು ಇಂಧನ ತುಂಬಿ ಕೊಳ್ಳಲು ಭಾರತದಲ್ಲಿ ಅವಕಾಶ ಕಲ್ಪಿಸಿದ್ದ ನಾಚಿಕೆಗೇಡಿನ ಪ್ರಸಂಗವನ್ನು ನೆನಪಿಸುತ್ತದೆ. ಬಹುಶಃ ಇದೇ ರೀತಿಯ ಅವಕಾಶ ಅಮೆರಿಕಕ್ಕೆ ಬೇಕಿದ್ದಲ್ಲಿ ಹಾಗೂ ಕೋರಿದ್ದಲ್ಲಿ ವಾಜಪೇಯಿ ಸರಕಾರ ಬಹಳ ಉತ್ಸಾಹ ದಿಂದ ಅದನ್ನು ಕೊಡಮಾಡುತ್ತಿತ್ತೇನೋ.

ಈ ಪುಕ್ಕಲುತನದ ಧೋರಣೆಯನ್ನು ಅಮೆರಿಕ ಮೆಚ್ಚುತ್ತದೆ ಹಾಗೂ ಕಾಶ್ಮೀರದಲ್ಲಿನ ಪ್ರತ್ಯೇಕತಾವಾದಿ ಶಕ್ತಿಗಳಿಗೆ ನೆರವು ನೀಡುತ್ತಿರುವ ಪಾಕಿಸ್ತಾನದ ಬಗ್ಗೆ ಸ್ಪಷ್ಟ ಧೋರಣೆ ತಳೆಯುತ್ತದೆ ಎಂಬ ಸಮಯಸಾಧಕ ಹಾಗೂ ತಪ್ಪು ಆಶಾಭಾವನೆಯೇ ಬಿಜೆಪಿ ಸರಕಾರದ ಈ ಅಮೆರಿಕ ಪರ ಧೋರಣೆಗೆ ಕಾರಣವಾಗಿದೆ.

ಈ ಆಶಾವಾದ ಠುಸ್ಸಾಗಲು ಒಂದು ವಾರವೂ ಬೇಕಾಗಲಿಲ್ಲ. ಎಲ್ಲೇ ಆದರೂ ಭಯೋತ್ಪಾದಕರ ವಿರುದ್ಧ ಕ್ರಮಕೈಗೊಳ್ಳುವ ತನ್ನ ಹಕ್ಕನ್ನು ಅಮೆರಿಕ ಕಾಯ್ದಿರಿಸುತ್ತದೆ, ಆದರೆ ಕಾಶ್ಮೀರ ವಿಚಾರದಲ್ಲಿ ಭಾರತ ಇದೇ ರೀತಿಯ ಹಕ್ಕನ್ನು ಕಾದಿರಿಸಿಕೊಳ್ಳುವುದನ್ನು ತಮ್ಮ ದೇಶ ವಿರೋಧಿಸುತ್ತದೆ ಎಂದು ಅಮೆರಿಕದ ಉಪವಿದೇಶಾಂಗ ಸಚಿವ (ರಾಜಕೀಯ ವ್ಯವಹಾರಗಳು) ಥಾಮಸ್ ಪಿಕರಿಂಗ್ ಸುದ್ದಿಗೋಷ್ಠಿಯೊಂದರಲ್ಲಿ ಹೇಳಿದರು.

ಭಾರತ ಮತ್ತು ಪಾಕಿಸ್ತಾನ ಅಣುಶಕ್ತಿ ಪರೀಕ್ಷೆ ನಡೆಸಿದ ನಂತರ ಕಾಶ್ಮೀರ ಒಂದು ಅಪಾಯಕಾರಿ ವಿಷಯವಾಗಿವೆ ಎಂಬ ಅಮೆರಿಕದ ಅಭಿಪ್ರಾಯವನ್ನು ಪಿಕರಿಂಗ್ ಹೊರಗೆಡಹಿದರು. ಈ ವಲಯದಲ್ಲಿ ಭಾರತ ಮೊದಲೇ ಯಾವುದೇ ಕ್ರಮಕೈಗೊಳ್ಳುವುದರ ವಿರುದ್ಧ ಪಿಕರಿಂಗ್ ಎಚ್ಚರಿಕೆ ನೀಡಿದರು.

ನಿರರ್ಥಕ ಪ್ರತಿಭಟನೆ

ಬಿಜೆಪಿ ನಾಯಕತ್ವ ತಕ್ಷಣವೇ ಇದಕ್ಕೆ ಪ್ರತಿಭಟನೆಯ ದನಿ ಎತ್ತಿತು. ಅಮೆರಿಕದ ದ್ವಿಮುಖ ಧೋರಣೆಯನ್ನು ಭಾರತ ಬಲವಾಗಿ ಪ್ರತಿಭಟಿಸುತ್ತದೆ ಎಂದು ಗೃಹಸಚಿವ ಎಲ್.ಕೆ. ಆಡ್ವಾಣಿ ಹೇಳಿದರು. 'ಭಾರತ ಸ್ವಾಭಿಮಾನಿ ಜನತೆಯ ನಾಡು' ಅಮೆರಿಕದ ಇಂಥ ಅಹಂಕಾರದ ಹೇಳಿಕೆಗಳನ್ನು ನಾವು ಸಹಿಸಿಕೊಳ್ಳುವುದಿಲ್ಲ ಎಂದವರು ನುಡಿದರು. ಬಿಜೆಪಿ ಉಪಾಧ್ಯಕ್ಷ ಕೆ.ಎಲ್. ಶರ್ಮಾ ಕೂಡ ಇದಕ್ಕೆ ದನಿಗೂಡಿಸಿದರು.

ಯಾವುದೇ ಸಾರ್ವಭೌಮ ರಾಷ್ಟ್ರದ ಮೇಲೆ ಯಾವುದೇ ನೆಪಮುಂದೊಡ್ಡಿ, ಎಲ್ಲಾ ಅಂತರ್ರಾಷ್ಟ್ರೀಯ ಕಾನೂನುಗಳನ್ನು ಗಾಳಿಗೆ ತೂರಿ ಅಮೇರಿಕ ಆಕ್ರಮಣ ಮಾಡುವಂತಿಲ್ಲ ಎಂಬ ಸ್ವತಂತ್ರ ನಿಲುವನ್ನು ಕೈಬಿಟ್ಟಾಗ ಭಾರತದ ಸ್ವಾಭಿಮಾನದ ಬಗ್ಗೆ ಈ ಮುಖಂಡರಿಗೆ ನೆನಪುಬರಲಿಲ್ಲ.

ಅಲಿಪ್ತ ನೀತಿ ಹಾಗೂ ಸ್ವತಂತ್ರ ವಿದೇಶಾಂಗ ನೀತಿಯಿಂದಲೂ ಬಿಜೆಪಿ ಎಷ್ಟು ದೂರ ಸರಿದಿದೆ ಎಂಬುದು ಗೊತ್ತಾಗಿದೆ. ವಾಸ್ತವವಾಗಿ ಅಮೇರಿಕದ ಮಿತ್ರ ದೇಶಗಳು ಹಾಗೂ ಬಾಲಂಗೋಚಿಗಳು ಮಾತ್ರ ಹೊರತುಪಡಿಸಿ ಇನ್ನುಳಿದಂತೆ ಇಡೀ ಜಗತ್ತು ಅಮೆರಿಕದ ಆಕ್ರಮಣವನ್ನು ಉಗ್ರವಾಗಿ ಪ್ರತಿಭಟಿಸುತ್ತಿದ್ದಾಗ ವಾಜಪೇಯಿ ಸರಕಾರ ಅಮೆರಿಕದೊಂದಿಗೆ ನೀತಿಬಾಹಿರ ರಾಜಿಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಯಿತು.

ಇದು ಬಿಜೆಪಿ ನೇತೃತ್ವದ ಸರಕಾರ ಆಕಸ್ಮಿಕವಾಗಿ ದಾರಿತಪ್ಪಿ ತೆಗೆದುಕೊಂಡ ಹೆಜ್ಜೆಯೇನೂ ಅಲ್ಲ. ವಾಷಿಂಗ್ಟನ್‌ನಲ್ಲಿ ಸ್ಟ್ರೋಬ್ ಟಾಲ್ಬಾಟ್ ಜಸ್ವಂತಸಿಂಗ್ ನಡುವೆ ನಾಲ್ಕನೇ ಸುತ್ತಿನ ಮಾತುಕತೆ ನಡೆಯುವ ಹಿನ್ನಲೆಯಲ್ಲಿ ಈ ನಿಲುವು ಹೊರಬಂದಿದೆ. ಈ ಚರ್ಚೆಯ ನಿರೀಕ್ಷಿತ ಫಲಿತಾಂಶದ ಬಗ್ಗೆ ಸರಕಾರ ಮತ್ತು ಅದರ ಮಾಧ್ಯಮ ದಲ್ಲಾಳಿಗಳು ಮತ್ತೊಮ್ಮೆ ರಂಗುರಂಗಿನ ಚಿತ್ರಣ ಕೊಡುತ್ತಿದ್ದಾರೆ.

ಎಷ್ಟೇ ಪ್ರಾಯೋಜಿತ ಪ್ರಚಾರ ಮಾಡಿದರೂ ಸಿಟಿಬಿಟಿ ವಿಚಾರದಲ್ಲಿ ಹೀನವಾಗಿ ಶರಣಾಗಲು ವಾಜಪೇಯಿ ಸರಕಾರ ನಡೆಸುತ್ತಿರುವ ಸಿದ್ಧತೆಯನ್ನು ಮುಚ್ಚಿಡಲು ಆಗಿಲ್ಲ. ಸಿಟಿಬಿಟಿಗೆ ಸಹಿಹಾಕುವುದಕ್ಕೆ ಪ್ರತಿಯಾಗಿ ಅಮೆರಿಕದಿಂದ ಯಾವುದೇ ರಿಯಾಯಿತಿ ಪಡೆಯಲು ವಿಫಲವಾಗಿರುವುದರಿಂದ ಮಾತುಕತೆಯ ಸುತ್ತುಗಳು ಹೆಚ್ಚುತ್ತಲೇ ಇವೆ!

ನವೆಂಬರ್‌ನಲ್ಲಿ ಭೇಟಿನೀಡಲು ನಿಮ್ಮ ಅಧ್ಯಕ್ಷ ಬಿಲ್ ಕ್ಲಿಂಟನ್‌ನ್ನು ಭಾರತಕ್ಕೆ ಕಳಿಸಿ ಎಂದು ಅಮೆರಿಕದ ಮೊರೆಯಿಡುವ ಮಟ್ಟಕ್ಕೆ ಹುಸಿರಾಷ್ಟ್ರೀಯವಾದಿಗಳು ಬಂದು ಮುಟ್ಟಿದ್ದಾರೆ.

ಪೋಖ್ರಾನ್ ಪರೀಕ್ಷೆಯ ನಂತರ ಸಮಾನ ಷರತ್ತಿನ ಆಧಾರದಲ್ಲಿ ಅಮೆರಿಕದೊಂದಿಗೆ ಚರ್ಚಿಸಲಾಗುತ್ತಿದೆ ಎಂಬ ತೋರ್ಪಡಿಕೆ ದೊಡ್ಡ ಮೋಸ ಎಂಬುದು ಬಲು ಬೇಗನೆ ಬಯಲಾಗುತ್ತಿದೆ. ಜಸ್ವಂತಸಿಂಗ್ ಜತೆ ನಡೆದ ಮಾತುಕತೆಯ ಬೆನ್ನಲ್ಲೇ

ಪುಟ 7 ಕ್ಕೆ

"ಪ್ರಕೃತಿಯ ವಿಕೋಪದೊಂದಿಗೆ ಆಡಳಿತ ಪರ ನಿರ್ಲಕ್ಷ್ಯಕ್ಕೂ ಬಲಿಯಾದ ಮೂವರು ಮಹಿಳೆಯರಿಗೆ ನ್ಯಾಯ ದೊರಕಿಸಿ"

ಮಾನವಹಕ್ಕು ಆಯೋಗಕ್ಕೆ ಎಐಡಿಡಬ್ಲ್ಯುಎ ಮನವಿ

ಇದು ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಮಾಡಿರುವ ಕಳಕಳಿಯ ಮನವಿ. ಆಗಸ್ಟ್ ೧೧ ರಂದು ಬಿಹಾರದ ಸೀತಾಮರಿಯಲ್ಲಿ ನಡೆದ ಪೋಲಿಸ್ ಗೋಳಿಬಾರಿಗೆ ತುತ್ತಾದವರಿಗೆ, ಅವರ ಕುಟುಂಬಗಳಿಗೆ ಬಿಹಾರ ಆಡಳಿತದಿಂದ ನ್ಯಾಯ ಸಿಗುವ ನಿರೀಕ್ಷೆಯಿಲ್ಲವಾದ್ದರಿಂದ ಮಾನವ ಹಕ್ಕು ಆಯೋಗ ಮಧ್ಯಪ್ರವೇಶಿಸಬೇಕು ಎಂದು ಎಐಡಿಡಬ್ಲ್ಯುಎ ಸೆಪ್ಟೆಂಬರ್ ೧ ರಂದು ಆಯೋಗದ ಅಧ್ಯಕ್ಷರಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದೆ.

ಬಿಹಾರದ ಬಡಪಾಯಿ ಸೀತಾಮರ್ಹಿ ಜಿಲ್ಲೆಯ ಭೀಕರ ಪ್ರವಾಹಗಳಿಂದ ಮಾತ್ರವಲ್ಲ. ಅಷ್ಟೇ ಭೀಕರವಾದ ಆಡಳಿತದ ನಿರ್ಲಕ್ಷ್ಯದಿಂದ ಸಂಕಟಪಡುತ್ತಿದ್ದಾರೆ. ಪ್ರವಾಹದಿಂದ ಸಂಪೂರ್ಣ ಆವೃತ್ತವಾಗಿದ್ದ ಏಳು ಹಳ್ಳಿಗಳಿಗೆ ಮತ್ತು ಸಾಕಷ್ಟು ಕಷ್ಟ-ನಷ್ಟಗಳಿಗೆ ಒಳಗಾದ 95 ಹಳ್ಳಿಗಳಿಗೆ ಒಂದು ತಿಂಗಳಾದರೂ ಒಂದು ಕಿಲೋ ಧಾನ್ಯ ಕೂಡಾ ಹಂಚುವ ವ್ಯವಸ್ಥೆಯಾಗಿಲ್ಲ.

ಆಗಸ್ಟ್ 11 ರಂದು ಈ ನಿರ್ಲಕ್ಷ್ಯವನ್ನು ಪ್ರತಿಭಟಿಸಲು ಸಿಪಿಐ(ಎಂ) ಸಂಘಟಿಸಿದ್ದ ಧರಣಿಯಲ್ಲಿ ಸಾವಿರಾರು ಪ್ರವಾಹ ಸಂತ್ರಸ್ತರು ಭಾಗವಹಿಸಿದ್ದರು. ಅವರಲ್ಲಿ ಬಹುಪಾಲು ಗ್ರಾಮೀಣ ಜನತೆಯ ಅತ್ಯಂತ ಬಡ ವಿಭಾಗಗಳಿಂದ ಬಂದವರು. ಧರಣಿಯಲ್ಲಿ ಭಾಗವಹಿಸಿದ್ದ ನೂರಾರು ಮಹಿಳೆಯರಲ್ಲಿ ಹಲವರು ಎಐಡಿಡಬ್ಲ್ಯುಎ ಸದಸ್ಯೆಯರು. ಜಿಲ್ಲಾ ಮ್ಯಾಜಿಸ್ಟ್ರೇಟ್ ಕಛೇರಿಯೆದುರು ಧರಣಿ ನಡೆದಿತ್ತು. ಆ ದಿನ ಜನತಾದಳ ಮತ್ತಿತರ ಸಂಘಟನೆಗಳೂ ಧರಣಿ, ಮತಪ್ರದರ್ಶನ ಸಂಘಟಿಸಿದ್ದವು. ಇವೆಲ್ಲಾ ಪ್ರತ್ಯೇಕವಾಗಿ ನಡೆಯುತ್ತಿದ್ದವು. ಮಹಿಳೆಯರ ಧರಣಿ ಮುಖ್ಯದ್ವಾರದ ಒಂದು ಬದಿಯಲ್ಲಿತ್ತು. ಜಿಲ್ಲಾ ಮ್ಯಾಜಿಸ್ಟ್ರೇಟ್ ಪ್ರಕಾರ ಕೆಲವು ಕಪ್ಪು ಹಣೆಪಟ್ಟಿ ಕಟ್ಟಿಕೊಂಡ ಸಶಸ್ತ್ರ ಮಂದಿ ಗುಂಡುಹಾರಿಸಿ, ಭಾರೀ ಕಲ್ಲು ತೂರಾಟ ನಡೆಯಿತು. ಮುಖ್ಯದ್ವಾರವನ್ನು ಅಡ್ಡ ಗಟ್ಟಿದಾಗ ತಾನು ಗೋಳಿಬಾರಿಗೆ ಆಜ್ಞಾಪಿಸಿದುದಾಗಿ ಜಿಲ್ಲಾ ಮ್ಯಾಜಿಸ್ಟ್ರೇಟ್ ನಂತರ ಸತ್ಯ ಸಂಗತಿ ತಿಳಿಯಲು ಅಲ್ಲಿಗೆ ಹೋದ ಎಐಡಿಡಬ್ಲ್ಯುಎ ನ ತಂಡದ ಪ್ರಶ್ನೆಗೆ ಉತ್ತರಿಸುತ್ತಾ ಹೇಳಿಕೊಂಡರು. ಆದರೆ ಇಂತಹ ಘಟನೆಯ ಸಾಧ್ಯತೆ ಕಮ್ಮಿ ಎಂದು ತನಗನಿಸಿರುವುದಾಗಿ ಎಐಡಿಡಬ್ಲ್ಯುಎ ತಂಡ ಹೇಳಿದೆ. ಏಕೆಂದರೆ ಈ ರೀತಿ ಕಪ್ಪು ಹಣೆಪಟ್ಟಿ ಕಟ್ಟಿಕೊಂಡವರನ್ನು ನಾವು ನೋಡಿದ್ದೇವೆ ಎಂದು ಒಬ್ಬರಾದರೂ ಮತಪ್ರದರ್ಶಕರು ಹೇಳಿಲ್ಲ. ಇಡೀ ಕಾಂಪೌಂಡಿನಲ್ಲಿ ಒಂದಾದರೂ ಕಿಟಕಿ ಗಾಜು ಒಡೆದಿಲ್ಲ. ಒಬ್ಬನೇ ಒಬ್ಬ ಪೋಲೀಸನ ಮೇಲೆ ಗುಂಡಿನ ಗಾಯವಿಲ್ಲ. ಒಂದೇ ಒಂದು ಕಾರು ಕೂಡಾ ಜಖಂ ಆಗಿಲ್ಲ. ತಾನು ಮತ್ತು ಎಸ್.ಪಿ. ಗಾಯಗೊಂಡುದಾಗಿ ಹೇಳಿರುವ ಜಿಲ್ಲಾ ಮ್ಯಾಜಿಸ್ಟ್ರೇಟರ ಮಾತಿಗೂ ಪುರಾವೆಯೇನಿಲ್ಲ. ತಂಡ ಅವರನ್ನು ಭೇಟಿಯಾದಾಗ ಅವರು ಗಾಯಗೊಂಡ ಸೂಚನೆಗಳೇನೂ ಕಾಣಲಿಲ್ಲ. ತಂಡ ಮಾತನಾಡಿದ ಮಹಿಳೆಯರ ಪ್ರಕಾರ ಕಾಂಪೌಂಡ್ ಒಳಗೆ ಬರಲು ಪ್ರಯತ್ನಿಸುತ್ತಿದ್ದ ಒಂದು ತಂಡದ ಮೇಲೆ ಪೋಲಿಸರು ಲಾಠಿ ಪ್ರಹಾರ ಆರಂಭಿಸಿದಾಗ ಧರಣಿ ಕುಳಿತಿದ್ದ ಮಹಿಳೆಯರು ಎದ್ದು ಬದಿಗೆ ಸರಿಯಲಾರಂಭಿಸಿದರು. ಆಗಲೇ ಪೋಲೀಸ್ ಗೋಳಿಬಾರಿನ ಸದ್ದು ಕೇಳಿತು. ಜನ ವಿಭಿನ್ನ ದಿಕ್ಕುಗಳಲ್ಲಿ ಓಡಲಾರಂಭಿಸಿದರು. ಪೋಲೀಸ್ ನೇರವಾಗಿ ಜನಜಂಗುಳಿಯ ಮೇಲೆಯೇ ಗೋಳೀಬಾರು ನಡೆಸಿತು. ಅದರ ಮೊದಲು ಗಾಳಿಯಲ್ಲಿ ಗುಂಡಿನ ಎಚ್ಚರಿಕೆಯೂ ಇರಲಿಲ್ಲ. ನಾಲ್ಕು ಮಂದಿ ಸ್ಥಳದಲ್ಲೇ ಸತ್ತರು. ಅವರಲ್ಲಿ ಒಬ್ಬಾಕೆ ಮಹಿಳೆ, ರಾಂಪರಿ ಎಂದು ಹೆಸರು. ಇನ್ನೊಬ್ಬರು 82 ವರ್ಷದ ಹಿರಿಯ ಜನತಾದಳ ಮುಖಂಡ. ಅವರು ಧರಣಿಯ ಪಕ್ಕದ ಚಹಾದಂಗಡಿಯಲ್ಲಿ ಕೂತಿದ್ದರು. ಪೋಲೀಸರು ಮೃತರ ಸಂಬಂಧಿಕರಿಗೂ ತಿಳಿಸದೆ ಹೆಣಗಳನ್ನು ದಹನ ಮಾಡಿದರು. ಎಐಡಿಡಬ್ಲ್ಯುಎ ತಂಡದ ತನಿಖೆಯ ಪ್ರಕಾರ ಪೋಲೀಸ್ ಗೋಳೀಬಾರು ಸಂಪೂರ್ಣ ಅನಗತ್ಯವಾಗಿತ್ತು. ಹೆಣಗಳನ್ನು ದಹನ ಮಾಡಿದ್ದಲ್ಲದೆ, ನಂತರ ಹಲವರನ್ನು ಬಂಧಿಸಿದ್ದೂ ಪೋಲೀಸರ ಕಾನೂನು ಹೀನತೆಯನ್ನು ತೋರಿದೆ ಎಂದು ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ಎಐಡಿಡಬ್ಲ್ಯುಎ ಬರೆದ ಪತ್ರ ಹೇಳಿದೆ.

ರಾಂಪರಿ ದೇವಿ

ಈಕೆ ತಲೆಗೆ ಬಿದ್ದ ಗುಂಡೇಟಿನಿಂದ ಸ್ಥಳದಲ್ಲೇ ಪ್ರಾಣಾರ್ಪಣೆ ಮಾಡಿದಳು. ಈಕೆ ಕೃಷಿಕೂಲಿಗಾರಳು. ಕೃಶಕಾಯದ ಈಕೆ ಒಬ್ಬ ಗಲಭೆಕೋರಳು, ಹಿಂಸಾ ಕೃತ್ಯದಲ್ಲಿ ತೊಡಗಿದ್ದವಳು ಎಂದು ಯಾರೂ ಹೇಳಲು ಸಾಧ್ಯವಿಲ್ಲ ಎಂದು ಎಐಡಿಡಬ್ಲ್ಯುಎ ತನ್ನ ಪತ್ರದಲ್ಲಿ ಹೇಳಿದೆ. 45 ವರ್ಷದ ಈ ವಿಧವೆ ಕೃಷಿಕೂಲಿ ಮಾಡಿಕೊಂಡು ಇಬ್ಬರು ಮಕ್ಕಳ ಪಾಲನೆ ಮಾಡುತ್ತಿದ್ದವಳು. 1996 ರಲ್ಲಿ ಕಿಸಾನ್ ಸಭಾ ನಡೆಸಿದ ಹೋರಾಟದಲ್ಲಿ ಭಾಗವಹಿಸಿದ ಈಕೆ ರೋನಿಸೈಪುರ್‌ನಲ್ಲಿ 21 ಎಕ್ರೆ ಜಮೀನನ್ನು ವಶಪಡಿಸಿಕೊಂಡ ತಂಡದಲ್ಲಿದ್ದಳು.

ನಂತರ ಆಕೆ ಮಹಿಳಾ ಸಮಿತಿ ಮತ್ತು ಪಕ್ಷವನ್ನು ಸೇರಿದಳು. ಈಕೆ ತನ್ನ ಊರಿನಲ್ಲಿ ಬಹಳ ಹೆಸರುವಾಸಿಯಾಗಿದ್ದು ಅವಳ ನೇತೃತ್ವದಲ್ಲಿ ಬಹಳ ಸಂಖ್ಯೆಯಲ್ಲಿ ಮಹಿಳೆಯರು ಧರಣಿಗೆ ಬಂದಿದ್ದರು. ಆಕೆ ಪೋಲೀಸ್ ಬರ್ಬರತೆಗೆ ಬಲಿಯಾದಳು. ಸರಕಾರ ಇದುವರೆಗೂ ಆಕೆಯ ಕುಟುಂಬಕ್ಕೆ ಒಂದು ಪೈಸೆಯನ್ನೂ ಕೊಟ್ಟಿಲ್ಲ. ಈ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ರನ್ನು ಕೇಳಿದಾಗ ತಾನು ಪಾಟ್ನಾದಿಂದ ನಿರ್ದೇಶನಕ್ಕೆ ಕಾಯುತ್ತಿದ್ದೇನೆ ಎಂದರಂತೆ.

ಮಂಜೂದೇವಿ

ಧರಣಿ ಕೂತಿದ್ದ ಈಕೆಯ ಬಲಗಾಲನ್ನು ಪೋಲೀಸ್ ಗುಂಡು ಸೀಳಿಕೊಂಡು ಹೋಯಿತು. ಎಐಡಿಡಬ್ಲ್ಯುಎ ನ ತಂಡ ಪಾಟ್ನಾದಲ್ಲಿ ಆಕೆಯನ್ನು ಭೇಟಿಯಾದಾಗ ಆಕೆಯ ಕಾಲನ್ನು ಕತ್ತರಿಸಬೇಕಾಗಿ ಬಂದಿದೆ ಎಂದು ತಿಳಿದು ಬಂತು. ಸರಿಯಾದ ಸಮಯದಲ್ಲಿ ತುರ್ತು ಚಿಕಿತ್ಸೆ ಒದಗಿಸುವಲ್ಲಿ ಪೋಲೀಸರ ನಿರ್ಲಕ್ಷ್ಯದಿಂದಾಗಿ ಆಕೆ ಈಗ ಒಂದು ಕಾಲನ್ನೇ ಕಳಕೊಳ್ಳಬೇಕಾಗಿ ಬಂದಿದೆ. ಈಕೆ 30 ವರ್ಷದ ವಿಧವೆ. ಇಬ್ಬರು ಮಕ್ಕಳನ್ನು ಈಕೆಯೇ ಏಕಾಂಗಿಯಾಗಿಯೇ ಬೆಳೆಸಿದಳು. ದೊಡ್ಡ ಮಗ 11 ವರ್ಷದ ಹುಡುಗ ಪಂಜಾಬಿನಲ್ಲಿ ಒಬ್ಬ ಭೂಮಾಲಕನ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದಾನೆ. ಚಿಕ್ಕವ 8 ವರ್ಷದ ಹಸುಳೆ ಆಘಾತಕ್ಕೊಳಗಾಗಿದ್ದಾನೆ. ಊರಿನ ಜನ ಆತನನ್ನು ನೋಡಿಕೊಳ್ಳುತ್ತಿದ್ದಾರೆ. ಕೃಷಿಕೂಲಿ ಮಾಡಿ ಜೀವನ ಸಾಗಿಸುತ್ತಿದ್ದ ಈಕೆ "ಏಳುವರ್ಷಗಳ ಹಿಂದೆ ನನ್ನ ಗಂಡ ತೀರಿಕೊಂಡಾಗ ನಾನೇ ಈ ಮಕ್ಕಳನ್ನು ಬೆಳೆಸಬೇಕು ಎಂದು ನನಗೆ ಅರಿವಾಗಿತ್ತು. ಬೇರೆಯವರ ಗದ್ದೆಗಳಲ್ಲಿ ಕೆಲಸ ಮಾಡಿದೆ. ಬಹಳ ಕಷ್ಟವಾಗಿತ್ತು, ಆದರೆ ಮಕ್ಕಳು ಬದುಕುಳಿಯಲು ಅದರಿಂದ ಸಾಧ್ಯವಾಯಿತು. ಆದರೆ ಕೆಲಸ ಮಾಡಲು ಎರಡೂ ಕೈ, ಎರಡೂ ಕಾಲುಗಳು ಬೇಕಲ್ಲ. ಈಗ ಪೋಲೀಸರು ಒಂದು ಕಾಲು ಕಡಿದು ಹಾಕಿದರು. ಒಂದು ಕಾಲಿನ ಹೆಂಗಸಿಗೆ ಗದ್ದೆಯಲ್ಲಿ ಯಾರು ಕೆಲಸ ಕೊಡುತ್ತಾರೆ?" ಎಂದು ತನ್ನ ದುಗುಡ ತೋಡಿಕೊಂಡಳು.

ಆಕೆಯ ವೈದ್ಯಕೀಯ ಖರ್ಚುಈಗ ವಿಪರೀತ. 110 ರಿಂದ 125 ರೂ. ಗಳ 6 ಇಂಜಕ್ಷನ್‌ಗಳನ್ನು ಪ್ರತಿದಿನ ತಗೊಳ್ಳ ಬೇಕಾಗಿದೆ. ಜತೆಗೆ ವಿಪರೀತ ಬೆಲೆಯ ಆ್ಯಂಟಿ-ಬಯೋಟಿಕ್‌ಗಳೂ ಬೇಕು. ಆಕೆಯ ಕಾಲು ಕಡಿದದ್ದಕ್ಕೆ ಏನೂ ಪರಿಹಾರ ನೀಡಿಲ್ಲ. ಗೋಳೀಬಾರಿನ ಬಗ್ಗೆ ಕೇಳಿದಾಗ ಪೋಲೀಸರು ನೇರವಾಗಿ ಜನ ಜಂಗುಳಿಯ ಮೇಲೆ ಗೋಳೀಬಾರು ಮಾಡಿದರು ಎಂದಳಾಕೆ. ಮಹಿಳೆಯರು ಎದ್ದು ಹೊರಡುತ್ತಿದ್ದರು. ಯಾವುದೇ ಎಚ್ಚರಿಕೆಯಿಲ್ಲದೆ ಗೋಳೀಬಾರು ನಡೆದದ್ದು ಎಲ್ಲರನ್ನೂ ಕಕ್ಕಾಬಿಕ್ಕಿಯಾಗಿಸಿತ್ತು. ಆಕೆ ಪ್ರಜ್ಞಾಹೀನಳಾಗಿ ಬಿದ್ದಳು. ಈಕೆಗೆ ಪರಿಹಾರ ಸಿಗಬೇಕಾದ್ದು ಹಾಗೂ ಸರ್ಕಾರಿ ಕೆಲಸ ಸಿಗಬೇಕಾದ್ದು ಅತ್ಯಗತ್ಯ. ಈಕೆ ಪೋಲೀಸ್ ಬರ್ಬರತೆಯ ಇನ್ನೊಂದು ಬಲಿ ಎಂದು ಎಐಡಿಡಬ್ಲ್ಯುಎ ತಂಡ ಮಾನವ ಹಕ್ಕು ಆಯೋಗಕ್ಕೆ ಬರೆದ ಪತ್ರದಲ್ಲಿ ಹೇಳಿದೆ.

ಪುಟ 7 ಕ್ಕೆ

ಐಕ್ಯರಂಗ ಸೆಪ್ಟಂಬರ್ 14-20, 1998

ಅಪಾಯದ ಮಟ್ಟ ಮುಟ್ಟಿದ ಬೇಡಿಕೆಯ ಪಲಾರ: ಪ್ರತ್ಯೇಕ ರಾಜ್ಯಗಳು

ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಹಾಗೂ ನೈಜ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರದ ಅಂಗವಾಗಿ ಪ್ರತ್ಯೇಕ ರಾಜ್ಯಗಳನ್ನು ರಚಿಸುವ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ತರಾತುರಿಯ ಕ್ರಮ ಬಹಳಷ್ಟು ಸಮಸ್ಯೆಗಳನ್ನೇ ಹುಟ್ಟುಹಾಕಿದೆ. ಯಾವುದೇ ವೈಜ್ಞಾನಿಕ ಆಧಾರವಿಲ್ಲದ, ಪ್ರತ್ಯೇಕ ರಾಜ್ಯ ರಚನೆಯ ಹೆಜ್ಜೆ ದೇಶದ ಏಕತೆಗೆ ಮಾರಕವಾಗುವ ಸನ್ನಿವೇಶ ಉಂಟಾಗುತ್ತಿದೆ.

ಮಧ್ಯಪ್ರದೇಶ ವಿಧಾನ ಸಭೆಯ ಸ್ಪೀಕರ್ ಶ್ರೀನಿವಾಸ ತಿವಾರಿ ಅವರ ಹೇಳಿಕೆಯನ್ನು ಈ ಹಿನ್ನೆಲೆಯಲ್ಲಿ ಪರಿಗಣಿಸಲೇ ಬೇಕಾಗುತ್ತದೆ.

ಒಂದು ವೇಳೆ ಪ್ರತ್ಯೇಕ ಛತ್ತೀಸಗಢ ರಾಜ್ಯವನ್ನು ರಚಿಸಿದರೆ ವಿಂಧ್ಯಾ ಪ್ರದೇಶ ಅಥವಾ ರೇವಾಂಚಲ ಎಂದು ಇನ್ನೊಂದು ಪ್ರತ್ಯೇಕ ರಾಜ್ಯದ ರಚನೆಗಾಗಿ ಚಳವಳಿಯನ್ನು ಆರಂಭಿಸುವುದಾಗಿ ತಿವಾರಿ ಹೇಳಿದ್ದಾರೆ. ಛತ್ತೀಸ್‌ಗಢ ರಚನೆಯಾದರೆ ವಿಂಧ್ಯಾಪ್ರದೇಶ ಅಥವಾ ರೇವಾಂಚಲ ರಚನೆಯನ್ನು ಯಾರಿಂದಲೂ ತಡೆಯಲಾಗದು ಎಂದು ಸೆಪ್ಟಂಬರ್ ಎರಡರಂದು ಭೂಪಾಲ್‌ನಲ್ಲಿ ಒಂದು ಸುದ್ದಿಗೋಷ್ಠಿಯಲ್ಲಿ ತಿವಾರಿ ಹೇಳಿದರು.

ಪ್ರತ್ಯೇಕ ಛತ್ತೀಸ್‌ಗಢ ರಾಜ್ಯ ರಚನೆಯಾದರೆ ದೇಶದ ಇತರ ಭಾಗಗಳಲ್ಲಿಯೂ ಇದೇ ರೀತಿಯ ಬೇಡಿಕೆ ಹುಟ್ಟಿಕೊಳ್ಳುತ್ತದೆ ಎಂದು ತಿವಾರ ಹೇಳಿದರು.

ಮಧ್ಯ ಪ್ರದೇಶ ವಿಧಾನಸಭೆಯಲ್ಲಿ ನಡೆದ ಚರ್ಚೆಯ ವೇಳೆ ಅನೇಕ ಸದಸ್ಯರು ಇದೇ ರೀತಿಯ ಆತಂಕ ವ್ಯಕ್ತಪಡಿಸಿದ್ದಾರೆ. ಛತ್ತೀಸ್‌ಗಢ ಕೆಲವು ಭಾಗಗಳನ್ನೇ ಸೇರಿಸಿ ಬುಂದೇಲ್‌ಖಂಡ ರಾಜ್ಯ ರಚನೆ ರಚನೆಯಾದರೆ ಮಧ್ಯಪ್ರದೇಶಧ ವಿಭಜನೆ ಆಗುವುದನ್ನು ತಪ್ಪಿಸಲು ಅಸಾಧ್ಯ ಎಂದು ಮಾಜಿ ಮುಖ್ಯ ಮಂತ್ರಿ ಎಸ್.ಸಿ.ಶುಕ್ಲಾ ಸದನದಲ್ಲಿ ಸೆ. 1 ರಂದು ಹೇಳಿದರು.

ಬೇಕಾಬಿಟ್ಟಿಯಾಗಿ ರಾಜ್ಯ ರಚನೆ ಮಾಡುತ್ತಾ ಹೋದರೆ ಅದು ಅಂತಿಮವಾಗಿ ಇಡೀ ದೇಶದ ಸಮಗ್ರತೆ ಏಕತೆಗೆ ಭಂಗ ತರುವ ಹಂತವನ್ನು ತಲುಪುತ್ತದೆ ಎಂಬ ಸಿಪಿಐ(ಎಂ)ನ ನಿಲುವು ಸರಿ ಎಂಬುದನ್ನು ಈ ವಿದ್ಯಮಾನಗಳು ಪುಷ್ಟೀಕರಿಸುತ್ತವೆ.

ಅತ್ತ ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶ, ಇತ್ತ ಕರ್ನಾಟಕದಲ್ಲಿ ಇಂಥ ಕೇಳಿಕೆಗಳು ಈಗಾಗಲೇ ಕೇಳಿಬರುತ್ತಿವೆ. ಈ ಅಪಾಯಕಾರಿ ಪ್ರವೃತ್ತಿಯ ವಿರುದ್ಧ ಎಚ್ಚರದಿಂದಿದ್ದು ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ.

ಸರಕಾರಕ್ಕೆ ಬೆದರಿಕೆ

ಈ ಮಧ್ಯೆ ಉತ್ತರಾಂಚಲ ರಾಜ್ಯ ರಚನೆಯ ಪ್ರಸ್ತಾವ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರಕ್ಕೆ ತಲೆನೋವಾಗಿ ಪರಿಣಮಿಸಿದೆ. ಸ್ವತಃ ಅದರ ಭಾಗೀದಾರ ಪಕ್ಷದಿಂದಲೇ ಈ ಸಮಸ್ಯೆ ಉಂಟಾಗಿದೆ ಎನ್ನುವುದು ಇಲ್ಲಿ ಗಮನಾರ್ಹ.

ಉದ್ದೇಶಿತ ಉತ್ತರಾಂಚಲ ರಾಜ್ಯಕ್ಕೆ ಉಧಮ್‌ಸಿಂಗ್ ನಗರ ಜಿಲ್ಲೆಯನ್ನು ಸೇರಿಸಿದ್ದೇ ಆದಲ್ಲಿ ವಾಜಪೇಯಿ ನೇತೃತ್ವದ ಸರಕಾರದಲ್ಲಿರುವ ತಮ್ಮ ಸಚಿವರನ್ನು ವಾಪಸು ಕರೆಸಿಕೊಳ್ಳುವುದಾಗಿ ಅಕಾಲಿದಳದ (ಬಾದಲ್) ಹಿರಿಯನಾಯಕ ಬಲ್ವಿಂದರ್ ಸಿಂಗ್ ಬೂಂದಾರ್ ಸೆಪ್ಟಂಬರ್ 7 ರಂದು ಎಚ್ಚರಿಕೆ ನೀಡಿದ್ದಾರೆ.

ತಮ್ಮ ಪಕ್ಷ ಬಿಜೆಪಿ ಮೈತ್ರಿಗೆ ಖಾಯಂ ಆಗಿಯೇನೂ ಅಂಟಿಕೊಂಡಿಲ್ಲ ಎಂದವರು ಸ್ಪಷ್ಟಪಡಿಸಿದರು.

ಉತ್ತರಾಂಚಲ ರಾಜ್ಯ ರಚನೆಯ ವಿಧೇಯಕವನ್ನು ಈಗಿನ ರೂಪದಲ್ಲೇ ಸಂಸತ್ತಿನಲ್ಲಿ ಮಂಡಿಸಿದರೆ ತಮ್ಮ ಪಕ್ಷ ಅದರ ವಿರುದ್ಧ ಮತ ಚಲಾಯಿಸಲಿದೆ ಎಂದು ಬೂಂದಾರ್ ತಿಳಿಸಿದರು.

ಉತ್ತರಾಂಚಲ ರಾಜ್ಯಕ್ಕೆ ಹರಿದ್ವಾರ ಜಿಲ್ಲೆಯನ್ನು ಸೇರಿಸುವುದನ್ನು ಉತ್ತರ ಪ್ರದೇಶದ ಬಿಜೆಪಿ ಕೂಟದ ಅಂಗಪಕ್ಷಗಳಲ್ಲಿ ಒಂದಾದ ಲೋಕತಾಂತ್ರಿಕ ಕಾಂಗ್ರೆಸ್ ವಿರೋಧಿಸಿದೆ.

ಒಟ್ಟಿನಲ್ಲಿ ಉತ್ತರಾಂಚಲ ರಾಜ್ಯ ರಚನೆ ಬಿಜೆಪಿ ಸರಕಾರಕ್ಕೆ ಅಷ್ಟು ಸುಗಮ ಕೆಲಸ ಅಲ್ಲ ಎನ್ನುವುದು ಮಾತ್ರ ಸ್ಪಷ್ಟವಾಗಿದೆ.

ವಿಶ್ವ

ಮಹಾರಾಷ್ಟ್ರ ಆಳುವ ಕೂಟ: ಬಿಕ್ಕಟ್ಟಿನ ಹೊಸ ಅಧ್ಯಾಯ

ಮಹಾರಾಷ್ಟ್ರದ ಶಿವಸೇನೆ ಬಿಜೆಪಿ ಕೂಟದಲ್ಲಿನ ಭಾರೀ ಭಿನ್ನಾಭಿಪ್ರಾಯಗಳು ಉಲ್ಬಣಿಸಿ ಬಿಕ್ಕಟ್ಟಿನ ಹಂತ ತಲುಪಿದ್ದನ್ನು 'ಐಕ್ಯರಂಗ' ಅಂಕಣದಲ್ಲಿ ಬರೆದಿತ್ತು. ಬಿಕ್ಕಟ್ಟು ಉಲ್ಬಣಗೊಂಡು ತಾತ್ಕಾಲಿಕವಾಗಿ ಶಮನವಾಗಿದೆಯೆಂದೂ ಅದು ಯಾವ ಕಾರ್ಯದಲ್ಲಾದರೂ ಯಾವುದೇ ರೂಪದಲ್ಲಿ ಮತ್ತೆ ಸ್ಫೋಟಗೊಳ್ಳಬಹುದು ಎಂದು ಬರೆಯಲಾಗಿತ್ತು. ನಮ್ಮ ಆ ನಿರೀಕ್ಷೆ ಸರಿಯೆಂದು ತೋರ್ಪಡಿಸುವ ವಿದ್ಯಮಾನಗಳು ಅಲ್ಲಿಂದ ವರದಿಯಾಗಿವೆ.

ಸಚಿವ ಸಂಪುಟದ ಸಭೆಯನ್ನೇ ಬಿಜೆಪಿ ಮಂತ್ರಿಗಳು ಬಹಿಷ್ಕರಿಸುವ ಮಟ್ಟಕ್ಕೆ ಬಿಕ್ಕಟ್ಟು ಬೆಳೆಯಲು ಕಾರಣವಾದ ಕೊಳಗೇರಿ ವಸತಿ ಯೋಜನೆಗೂ ತನಗೂ ಯಾವುದೇ ಸಂಬಂಧ ಇಲ್ಲ ಎಂದು ಭಾರತೀಯ ಜನತಾ ಪಕ್ಷ ಕೈತೊಳೆದುಕೊಂಡಿದೆ.

ಶಿವಸೇನೆ ರೂಪಿಸಿದ್ದ ಈ ಯೋಜನೆಯನ್ನು ಆರಂಭದಿಂದಲೂ ತೀಕ್ಷ್ಣವಾಗಿ ವಿರೋಧಿಸುತ್ತ ಬಂದಿರುವ ಬಿಜೆಪಿ ಇದು ಕಾರ್ಯಸಾಧುವಾದ ಯೋಜನೆಯಲ್ಲ ಎಂದು ಹೇಳುತ್ತಿತ್ತು. ಇದೀಗ ಅಧಿಕೃತವಾಗಿ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ.

ಪ್ರಕರಣ ಒಂದು:

ಬಿಜೆಪಿ ನಾಯಕ ಕಿರೀಟ್ ಸೋಮಯ್ಯ ಮುಖ್ಯಮಂತ್ರಿ ಮನೋಹರ ಜೋಷಿಗೆ (ಶಿವಸೇನೆ) ಬರೆದಿರುವ ದೀರ್ಘ ಪತ್ರ ಉಭಯ ಪಕ್ಷಗಳ ವೈಮನಸ್ಯವನ್ನು ಮತ್ತೊಮ್ಮೆ ತೆರೆದಿಟ್ಟಿದೆ.

ಕೊಳಗೇರಿ ಮರುವಸತಿ ಯೋಜನೆ ಯಶಸ್ವಿಯಾದಲ್ಲಿ ಅದರ ಪೂರ್ಣ ಯಶಸ್ಸನ್ನು ಶಿವಸೇನೆ ಪಡೆಯ ಬಹುದು. ಆದರೆ ಅದು ವಿಫಲವಾದಲ್ಲಿ ದೂಷಣೆಯಲಿ ಭಾಗೀದಾರನಾಗಲು ನಾನು ಸಿದ್ಧವಿಲ್ಲ ಎಂದು ಬಿಜೆಪಿ ಹೇಳಿದೆ.

ಈ ಯೋಜನೆಯಲ್ಲಿ ಭಾರೀ ಮೊತ್ತದ ಹಣ ಬಳಕೆಯಾಗದೆ ಹಾಗೇ ಬಿದ್ದಿರುತ್ತದೆ ಮಾತ್ರವಲ್ಲ ಅನೇಕ ಕಾನೂನಿನ ಅಡೆತಡೆಗಳೂ ಇದರಲ್ಲಿ ಅಡಕವಾಗಿವೆ ಎಂದು ಬಿಜೆಪಿ ವಾದಿಸಿದೆ.

ಪ್ರಕರಣ ಎರಡು:

ಕಾವಿ ಪಡೆ ಕೂಟದಲ್ಲಿ ಇನ್ನೂ ವೈಮನಸ್ಸು ತಾಂಡವವಾಡುತ್ತಿರುವುದಕ್ಕೆ ಈ ಪ್ರಕರಣವನ್ನು ಗಮನಿಸಬಹುದು.

ಸೆಪ್ಟೆಂಬರ್ 3 ರಂದು ಮೈತ್ರಿಕೂಟ ಸರಕಾರಕ್ಕೆ ಬೆಂಬಲ ನೀಡುತ್ತಿರುವ ಎಲ್ಲಾ ಪಕ್ಷೇತರರ ಸಭೆಯನ್ನು ಮುಖ್ಯಮಂತ್ರಿ ಜೋಷಿ ಮನೆಯಲ್ಲಿ ಕರೆಯಲಾಗಿತ್ತು. ಆದರೆ ಉಪಮುಖ್ಯ ಮಂತ್ರಿ ಗೋಪಿನಾಥ ಮುಂಡೆ (ಬಿಜೆಪಿ) ಯವರನ್ನು ಸಭೆಗೆ ಆಹ್ವಾನಿಸಿಲ್ಲ ಎಂಬ ಕಾರಣದಿಂದ ಪಕ್ಷೇತರ ಸದಸ್ಯರಾರೂ ಸಭೆಯಲ್ಲಿ ಭಾಗವಹಿಸಲಿಲ್ಲ ಸಭೆಯನ್ನೇ ಬಹಿಷ್ಕರಿಸಿದರು. ಆದರೆ ಈ ಸದಸ್ಯರು ಶಿವಸೇನೆ ಮುಖ್ಯಸ್ಥ ಬಾಳಠಾಕ್ರೆಯನ್ನು ಭೇಟಿಮಾಡಿದಾಗ ಮುಂಡೆ ಅವರ ಜತೆಗಿದ್ದರು. ಜೋಷಿ ಕೂಡ ಈ ಸಭೆಯಲ್ಲಿ ಇದ್ದರು ಎನ್ನುವುದಷ್ಟೇ ಸ್ವಲ್ಪ ವ್ಯತ್ಯಾಸ.

ಮಿತ್ರಕೂಟ ಸರಕಾರಕ್ಕೆ ಪಕ್ಷೇತರರ ಬೆಂಬಲವಿದೆ ಎಂದರೂ ಅವರೆಲ್ಲರೂ ಮುಂಡೆ ಜತೆಗಿದ್ದಾರೆ ಎಂದು ಈ ಘಟನೆ ತೋರಿಸುತ್ತದೆ.

ಪ್ರಕರಣ ಮೂರು:

ಇದೇ ಸೆಪ್ಟೆಂಬರ್ ಒಂದರಿಂದ ಜಾರಿಗೆ ಬರುವಂತೆ ಮಹಾರಾಷ್ಟ್ರದಲ್ಲಿ ವಿದ್ಯುಚ್ಛಕ್ತಿ ದರಗಳನ್ನು ಏರಿಸಲಾಗಿದೆ. ಜನರಿಂದ ಪ್ರತಿಪಕ್ಷಗಳಿಂದ ಇದಕ್ಕೆ ವಿರೋಧ ವ್ಯಕ್ತವಾಗುವುದು ಸಹಜವೇ. ಆದರೆ ಸ್ವತಃ ಸರಕಾರದ ಅಂಗಪಕ್ಷ ಅದರಲ್ಲೂ ಸರಕಾರದ ನೇತೃತ್ವ ವಹಿಸಿರುವ ಪಕ್ಷವೇ ಅದನ್ನು ವಿರೋಧಿಸುವುದೆಂದರೆ!

ಹೌದು. ಶಿವಸೇನೆಯೇ ಈ ವಿದ್ಯುಚ್ಛಕ್ತಿ ದರ ಏರಿಕೆಯನ್ನು ತೀವ್ರವಾಗಿ ವಿರೋಧಿಸಿದೆ. ಉಪಮುಖ್ಯಮಂತ್ರಿ ಗೋಪಿನಾಥ ಮುಂಡೆ ಇಂಧನ ಖಾತೆಯನ್ನು ಇಟ್ಟು ಕೊಂಡಿದ್ದಾರೆ. ಈ ಹಿನ್ನಲೆಯಲ್ಲಿ ಶಿವಸೇನೆಯ ವಿರೋಧಕ್ಕೆ ಹೆಚ್ಚಿನ ರಾಜಕೀಯ ಮಹತ್ವವಿದೆ.

ಶಿವಸೇನೆ ನಿಯೋಗವೊಂದು ಮುಂಡೆಯವರನ್ನು ಭೇಟಿ ಮಾಡಿ ವಿದ್ಯುಚ್ಛಕ್ತಿ ದರ ಏರಿಕೆಯ ಹೊರೆಯಿಂದ ಜನ ಸಾಮಾನ್ಯರನ್ನು ಹೊರತು ಪಡಿಸುವಂತೆ ಒತ್ತಾಯ ಮಾಡಿತು.

ಒಟ್ಟಿನಲ್ಲಿ, ಮಹಾರಾಷ್ಟ್ರದ ಶಿವಸೇನೆ-ಬಿಜೆಪಿ ಮಿತ್ರ ಕೂಟ ಸರಕಾರ ಒಂದು ಸಮಸ್ಯೆಯಿಂದ ಇನ್ನೊಂದು ಬಿಕ್ಕಟ್ಟಿಗೆ ಸಿಲುಕಿ ಕೊಳ್ಳುತ್ತಿದೆ. ಅಪ್ಪ-ಅಮ್ಮನ ಜಗಳದಲ್ಲಿ ಕೂಸು ಬಡವಾಯ್ತು ಎಂದಂತೆ ಈ ಕಾವಿಪಡೆಯಿಂದ ಮಹಾರಾಷ್ಟ್ರದ ಜನತೆ ತೊಂದರೆಗೆ ಒಳಗಾಗುತ್ತಿದ್ದಾರೆ.

ಬಿಹಾರದಲ್ಲಿ ಕ್ರಿಮಿನಲ್‌ಗಳ ದುಷ್ಕೃತ್ಯ: ಸಿಪಿಐ(ಎಂ) ನಾಯಕರ ಮೇಲೆ ಗುಂಡಿನ ದಾಳಿ

ಬಿಹಾರದ ರಾಜಗಿರ್ ಎಂಬಲ್ಲಿ ಸಮಾಜ ಘಾತುಕ ಶಕ್ತಿಗಳು ನಡೆಸಿದ ಗುಂಡಿನ ದಾಳಿಯಲ್ಲಿ ಸಿಪಿಐ(ಎಂ) ರಾಜಗಿರ್ ಜಿಲ್ಲಾ ಕಾರ್ಯದರ್ಶಿ ಕಾII ಪರಮೇಶ್ವರ್ ಪ್ರಸಾದ್ ಮತ್ತು ಪಕ್ಷದ ನಾಯಕರಾದ ಅಕ್ಲು ರಾಜವಂಶಿ ಹಾಗೂ ರಘುನಂದನ ಗಾಯಗೊಂಡಿದ್ದಾರೆ. ಆಗಸ್ಟ್ 28 ರಂದು ಈ ಆಕ್ರಮಣ ನಡೆಯಿತು.

ರಾಜವಂಶಿ ಅವರ ದೇಹದ ಮೇಲೆ ನಾಲ್ಕು ಗುಂಡಿನ ಗಾಯಗಳಾಗಿವೆ. ಅವರು ಪಟ್ನಾದಲ್ಲಿ ಚಿಕಿತ್ಸೆ ಪಡೆದಿದ್ದಾರೆ ಉಳಿದಿಬ್ಬರಿಗೆ ರಜಗಿರ್‌ನಲ್ಲಿ ಚಿಕಿತ್ಸೆ ನೀಡಲಾಯಿತು.

ಕ್ರಿಮಿನಲ್‌ಗಳ ದುಷ್ಕೃತ್ಯದ ಸುದ್ದಿ ತಿಳಿಯುತ್ತಲೇ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಗಣೇಶ ಶಂಕರ ವಿದ್ಯಾರ್ಥಿ ಶಾಸಕ ಸುಭೊಧರಾಯ್, ಬಿಹಾರ ರಾಜ್ಯ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ವಿಜಯ ಕಾಂತ ಠಾಕೂರ ಮತ್ತು ಬಿಹಾರ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಸ್ಯಾರಂಗಧರ್ ಪಾಸ್ವಾನ್ ಅವರುಳ್ಳ ನಿಯೋಗವೊಂದು ಸ್ಥಳಕ್ಕೆ ಭೇಟಿ ನೀಡಿತು.

ಅವರು ಅಲ್ಲಿನ ನಾಗರಿಕರು, ಬುದ್ಧಿ ಜೀವಿಗಳು ಮತ್ತು ಸರಕಾರಿ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರು. ರಾಜಗಿರ್‌ನಲ್ಲಿ ಕ್ರಿಮಿನಲ್‌ಗಳದ್ದೇ ರಾಜ್ಯಭಾರ ಎಂಬುದು ಈ ಸಂದರ್ಭದಲ್ಲಿ ಗೊತ್ತಾಯಿತು. ಅಪಹರಣ, ಡಕಾಯಿತಿ, ರಸ್ತೆ ಬದಿ ದರೋಡೆ, ಅತ್ಯಾಚಾರ ಇವು ದಿನ ನಿತ್ಯದ ಘಟನೆಗಳಾಗಿವೆ. ಉನ್ನತ ಸ್ಥಾನಗಳಲ್ಲಿರುವವರ ಆಶ್ರಯ ಈ ಕ್ರಿಮಿನಲ್‌ಗಳಿಗೆ ಇರುವುದರಿಂದಲೇ ಅವರು ರಾಜಾರೋಷವಾಗಿ ಓಡಾಡುತ್ತಿದ್ದಾರೆ.


ಇಂಥ ದುಷ್ಕೃತ್ಯಗಳನ್ನು ಸತತವಾಗಿ ವಿರೋಧಿಸುತ್ತಿರುವ ಸಿಪಿಐ(ಎಂ) ಕ್ರಿಮಿನಲ್‌ಗಳನ್ನು ಶಿಕ್ಷಿಸಬೇಕೆಂದು ಒತ್ತಾಯಿಸುತ್ತಿದೆ. ಹೀಗಾಗಿ ಅವರು ದುಷ್ಕರ್ಮಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಅವರ ಮೇಲೆ ಹಲ್ಲೆ ನಡೆಸುವುದಾಗಿ ಕ್ರಿಮಿನಲ್‌ಗಳು ಬಹಿರಂಗವಾಗಿಯೇ ಬೆದರಿಕೆ ಹಾಕುತ್ತಿದ್ದಾರೆ.

ಸೀತಾಮರಿ ಪೊಲೀಸ್ ಗೋಲಿಬಾರನ್ನು ಖಂಡಿಸಿ ಪಟ್ನಾದಲ್ಲಿ ನಡೆದ ರಜ್ಯ ಮಟ್ಟದ ರ್‍ಯಾಲಿಯಿಂದ ಹಿಂದಿರುಗುವಾಗ ಆಗಸ್ಟ್ 28 ರಂದು ರಾಜಗಿರ್‌ನಲ್ಲಿ ಕ್ರಿಮಿನಲ್‌ಗಳು ಗುಂಡು ಹಾರಿಸಿ ನಾಯಕರನ್ನು ಗಾಯಗೊಳಿಸಿದರು. ಸಿಪಿಐ(ಎಂ) ಮುಖಂಡರ ಕೊಲೆ ದುಷ್ಕರ್ಮಿಗಳ ಉದ್ದೇಶವಾಗಿತ್ತೆನ್ನುವುದು ಸ್ಪಷ್ಟವಾಗಿದೆ.

ನಾಡ ಪಿಸ್ತೂಲಿನಿಂದ 15 ರಿಂದ 18 ಸುತ್ತು ಗುಂಡನ್ನು ಮುಖಂಡರ ಮೇಲೆ ಹಾರಿಸಲಾಯಿತು ಎಂದು ಪ್ರತ್ಯಕ್ಷ ದರ್ಶಿಗಳು ಹೇಳಿದ್ದಾರೆ. ಕತ್ತಲಾಗಿದ್ದು ಹಾಗೂ ಗುಂಡಿನ ಸದ್ದು ಕೇಳಿ ಕೂಡಲೇ ಜನರು ಧಾವಿಸಿ ಬಂದಿದ್ದರಿಂದ ಆಕ್ರಮಣ ಮರಣಾಂತಿಕವಾಗುವುದು ತಪ್ಪಿತು.

ಬಿಹಾರದಲ್ಲಿ ಕಳೆದ ಮೂರ್‍ನಾಲ್ಕು ತಿಂಗಳಲ್ಲಿ ಸಿಪಿಐ(ಎಂ) ಮೇಲೆ ಸುಮಾರು ಒಂದುವರೆ ಡಜನ್ ಹಲ್ಲೆಗಳು ನಡೆದಿವೆ. ಭೂಮಿ, ಕೂಲಿ, ಪ್ರವಾಹ ಪರಿಹಾರ ಭ್ರಷ್ಟಾಚಾರ ಬೆಲೆಯೇರಿಕೆ ಮೊದಲಾದ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಪ್ರಚಾರ ಹಾಗೂ ಹೋರಾಟವನ್ನು ತೀವ್ರಗೊಳಿಸಿರುವುದರಿಂದ ಪಕ್ಷದ ಮೇಲೆ ಆಕ್ರಮಣ ಹೆಚ್ಚುತ್ತಿದೆ.

ಕಾಮ್ರೇಡ್ ಅಜಿತ್ ಸರ್ಕಾರ ಹತ್ಯೆ, ಸೀತಾಮಡಿ ಗೋಲಿಬಾರ್, ಸಿಪಿಐ(ಎಂ) ನಳಂದ ಜಿಲ್ಲಾ ಸಮಿತಿ ಕಾರ್ಯದರ್ಶಿ ಮೇಲೆ ಮರಣಾಂತಿಕ ಹಲ್ಲೆ ಇವೇ ಮೊದಲಾದವು ಪಕ್ಷ ಯಾವ ರೀತಿಯಲ್ಲಿ ಆಕ್ರಮಣಕ್ಕೆ ಗುರಿಯಾಗುತ್ತಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ.




ಸಿಪಿಐ(ಎಂ) ಪಶ್ಚಿಮಬಂಗಾಳ ಘಟಕದ 19ನೇ ಸಮ್ಮೇಳನದಲ್ಲಿ ಮಾತನಾಡುತ್ತಿರುವ ಜ್ಯೋತಿ ಬಸು.

ಮೂಡಿಬರುತ್ತಿರುವ ಕ್ಲಿಷ್ಟ ಸನ್ನಿವೇಶವನ್ನು ಎದುರಿಸುವ ಛಲ, ಎದೆಗಾರಿಕೆ ಹಾಗೂ ಒಂದು ಗಹನ ಅಂತರಂಗ ವಿಮರ್ಶೆಯ ವಾತಾವರಣ ಸಿಪಿಐ(ಎಂ)ನ ಪಶ್ಚಿಮ ಬಂಗಾಳ ಘಟಕದ 19ನೇ ಸಮ್ಮೇಳನದ ಸಾರಾಂಶ. ಆಗಸ್ಟ್ 27 ರಿಂದ 30 ರ ವರೆಗೆ ಹೌರಾದಲ್ಲಿ ಈ ಸಮ್ಮೇಳನ ನಡೆಯಿತು. ಸಮ್ಮೇಳನದ ಆವರಣ ಇ.ಎಂ.ಎಸ್. ರನ್ನು ನೆನಪಿಸುತ್ತಿದ್ದರೆ, ಸಮ್ಮೇಳನದ ವೇದಿಕೆಗೆ ಸುನಿಲ್ ಮೈತ್ರರವರ ಹೆಸರಿಡಲಾಗಿತ್ತು. ಒಂದು ಇನ್ನಷ್ಟು ಐಕ್ಯಗೊಂಡ, ಬಲಿಷ್ಠ ಪಕ್ಷವನ್ನು ರಚಿಸಲು ಮಂಡಿಸಿದ ರಾಜಕೀಯ- ಸಂಘಟನಾ ವರದಿಯನ್ನು ಸಮ್ಮೇಳನ ಅಂಗೀಕರಿಸಿತು. ಶೈಲೇನ್ ದಾಸ್ ಗುಪ್ತಾ ರಾಜ್ಯ ಸಮಿತಿ ಕಾರ್ಯದರ್ಶಿಗಳಾಗಿ, ಅನಿಲ್ ಬಿಸ್ವಾಸ್ 'ಗಣಶಕ್ತಿ' ದೈನಿಕದ ಸಂಪಾದಕರಾಗಿ ಪುನರಾಯ್ಕೆಗೊಂಡರು. 79 ಸದಸ್ಯರುಳ್ಳ ರಾಜ್ಯ ಸಮಿತಿಯನ್ನು ಆರಿಸಲಾಯಿತು. ಒಂದು ಸ್ಥಾನವನ್ನು ಖಾಲಿಯಿಡಲಾಗಿದೆ. ಕಲ್ಕತ್ತೆಯಲ್ಲಿ ನಡೆಯಲಿರುವ 16ನೇ ಮಹಾಧಿವೇಶನಕ್ಕೆ ರಾಜ್ಯದಿಂದ 175 ಪ್ರತಿನಿಧಿಗಳನ್ನು, ಮೂವರು ವೀಕ್ಷಕರನ್ನು ಆರಿಸಲಾಯಿತು.

ರಾಜ್ಯದಲ್ಲಿ ಪಕ್ಷದ 233776 ಸದಸ್ಯರನ್ನು ಪ್ರತಿನಿಧಿಸುವ 580 ಪ್ರತಿನಿಧಿಗಳು ಹಾಗೂ 116 ವೀಕ್ಷಕರು ಭಾಗವಹಿಸಿದರು. ಹರಿದಾಸ್ ಮಲಕರ್ ಅಧ್ಯಕ್ಷತೆಯ ಹತೋಟಿ ಆಯೋಗವನ್ನು ಸಮ್ಮೇಳನ ಆರಿಸಿತು.

ಸಾರ್ವಜನಿಕ ಸಭೆ: ಸುರಿಯುತ್ತಿರುವ ಮಳೆಯಲ್ಲಿ ನೆರೆದ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಿರುವ ಜ್ಯೋತಿಬಸುರವರು



ಬಿಜೆಪಿ ಸರಕಾರದ ಹುಸಿ ಘರ್ಷಣೆಗಳಲ್ಲಿ 500 ಸಾವು

ಉತ್ತರ ಪ್ರದೇಶದಲ್ಲಿ ಮಾನವ ಹಕ್ಕುಗಳ ಹರಣವಾಗುತ್ತಿದೆ. ಕಲ್ಯಾಣ್‌ಸಿಂಗ್ ಆಡಳಿತದಲ್ಲಿ ಹುಸಿ ಘರ್ಷಣೆಗಳಲ್ಲಿ ಕನಿಷ್ಟ 500 ಜನರನ್ನು ಕೊಲ್ಲಲಾಗಿದೆ.

ಹಿರಿಯ ಪತ್ರಕರ್ತ ಹಾಗೂ ರಾಜ್ಯಸಭೆ ಸದಸ್ಯ ಕುಲದೀಪ್ ನಯ್ಯರ್ ಅವರ ನೇರ ಆಪಾದನೆಯಿದು, ಆತಂಕವಿದು.

ಉ.ಪ್ರ.ದಲ್ಲಿನ ಹುಸಿ ಘರ್ಷಣೆಗಳಲ್ಲಿ ಮೃತಪಟ್ಟವರಲ್ಲಿ ಹೆಚ್ಚಿನವರು ಅಲ್ಪ ಸಂಖ್ಯಾತ ಸಮುದಾಯ ಮತ್ತು ಪರಿಶಿಷ್ಟ ಜಾತಿಗಳಿಗೆ ಸೇರಿದ ಜನರು ಎಂಬುದು ನಯ್ಯರ್ ವಿವರಣೆ. ಮುಗ್ಧ ಜನರನ್ನು ಗ್ಯಾಂಗ್ ಸದಸ್ಯರು ಮತ್ತು ಕ್ರಿಮಿನಲ್‌ಗಳು ಎಂದು ಬ್ರಾಂಡ್ ಮಾಡಿ ಹುಸಿ ಘರ್ಷಣೆಗಳಲ್ಲಿ ಅವರನ್ನು ಕೊಂದು ಹಾಕುವುದು ಉತ್ತರ ಪ್ರದೇಶ ಪೊಲೀಸರ ಕಾರ್ಯಾಚರಣೆ ಶೈಲಿಯಾಗಿದೆ ಎಂದವರು ತಿಳಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಹುಸಿ ಘರ್ಷಣೆಗಳು ಎಂಬ ಕುರಿತು ನವದೆಹಲಿಯಲ್ಲಿ ಸೆ. 5 ರಂದು ನಡೆದ ವಿಚಾರ ಸಂಕಿರಣವೊಂದನ್ನು ಉದ್ಘಾಟಿಸಿದ ನಯ್ಯರ್ ಈ ವಿಷಯಗಳನ್ನು ಬಿಚ್ಚಿಟ್ಟರು.

ಶರತ್ ಚಂದ್ರ

ಇರಾನ್-ತಾಲಿಬಾನ್ ಯುದ್ಧ ಸನ್ನಿಹಿತ?

ಇರಾನ್ ಮತ್ತು ಅಫಘಾನಿಸ್ತಾನದ ತಾಲಿಬಾನ್ ಪಡೆಗಳು ಗಡಿಪ್ರದೇಶದಲ್ಲಿ ಯುದ್ಧದ ತಯಾರಿಯಲ್ಲಿ ತೊಡಗಿದ್ದಾರೆ. ಯಾವುದೇಕ್ಷಣದಲ್ಲಿ ಇರಾನ್ ಮತ್ತು ತಾಲಿಬಾನ್ ನಡುವೆ ಯುದ್ಧ ನಡೆಯಬಹುದು ಎಂದು ವರದಿಯಾಗಿದೆ. ಈ ಘರ್ಷಣೆಗೆ ಮೂಲ ಕಾರಣ ಇರಾನಿನ ಹತ್ತು ರಾಯಭಾರಿ ಸಿಬ್ಬಂದಿ ಅಫಘಾನಿಸ್ತಾನದಲ್ಲಿ ಬಂಧಿತರಾಗಿರುವುದು. ಇರಾನ್ ತಾಲಿಬಾನ್ ಸರಕಾರಕ್ಕೆ ರಾಯಭಾರ ಸಿಬ್ಬಂದಿ ಹುಡುಕಲು ಹೇಳಿದ್ದು, ಒಂದು ವಾರದ ಅವಧಿ ಕೊಟ್ಟಿದೆ. ಆ ಅವಧಿಯೊಳಗೆ ಸಿಬ್ಬಂದಿ ಸಿಗದಿದ್ದರೆ ತೀವ್ರ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದೆ.

ತಾಲಿಬಾನ್ ಇರಾನ್‌ನ ರಾಯಭಾರ ಸಿಬ್ಬಂದಿಯನ್ನು ಕೊಂದು ಹಾಕಿದ್ದಾರೆ ಎಂದು ಇರಾನ್ ತಿಳಿದಿದೆ. ಆದ್ದರಿಂದ ಈ ಒಂದು ವಾರದ ಅವಧಿಯ ನಂತರ ಇರಾನ್ ತಾಲಿಬಾನ್ ಪಡೆಗಳ ಮೇಲೆ ದಾಳಿ ಮಾಡುವುದು ಎಂಬ ಸುದ್ದಿ ಹಬ್ಬಿದೆ.

ಇರಾನ್ ಅಫಘಾನಿಸ್ತಾನ ಗಡಿ ಪ್ರದೇಶದಲ್ಲಿ 70 ಸಾವಿರಕ್ಕೂ ಹೆಚ್ಚು ಇರಾನಿ ಸೈನಿಕರು, ಟ್ಯಾಂಕುಗಳು ಯುದ್ಧ ವಿಮಾನಗಳು ಜಮಾಯಿಸಿರುವುದು ಇದರ ಸೂಚನೆ ಎನ್ನಲಾಗಿದೆ. ತಾಲಿಬಾನ್ ಸಹ ಇದಕ್ಕೆ ಪ್ರತಿಯಾಗಿ ತನ್ನ ಪಡೆಗಳನ್ನು ಗಡಿ ಪ್ರದೇಶದಲ್ಲಿ ಜಮಾಯಿಸಿದೆ. ಅಫಘಾನಿಸ್ತಾನದ ಮೇಲೆ ದಾಳಿ ಮಾಡಿದರೆ ಇಡೀ ಪ್ರದೇಶ ಉರಿದು ಹೋಗುವುದು ಎಂದು ತಾಲಿಬಾನ್ ಎಚ್ಚರಿಸಿದೆ.

ಈ ನಡುವೆ ತಾಲಿಬಾನ್- ವಿರೋಧಿ ಕೂಟ, ತಾಲಿಬಾನ್ ಸರ್ಕಾರಿ ಪಡೆಗಳ ಮೇಲೆ ಮಹತ್ವದ ಜಯ ಸಾಧಿಸಿದೆ. ತಾಲಿಬಾನ್ ಪಡೆಗಳು ಸ್ವಲ್ಪ ಮಟ್ಟಿಗೆ ಹಿಂಜರಿದಿವೆ. ಅಮೆರಿಕ ಸುಡಾನ್, ಅಫಘಾನಿಸ್ತಾನಗಳ ಮೇಲೆ ನಡೆಸಿದ ದಾಳಿಯ ಮಾದರಿಯಲ್ಲಿ ಇರಾನ್ ದಾಳಿ ಮಾಡಬಹುದು ಎಂದು ಅಂದಾಜು ಮಾಡಲಾಗಿದೆ.

ಅಮೆರಿಕನ್ ಕೃತ್ಯಗಳಿಗೆ ಕ್ಯೂಬಾ ಖಂಡನೆ

'ಬಾಂಬರುಗಳು, ಕ್ಷಿಪಣಿಗಳಿಂದ ಭಯೋತ್ಪಾದನೆಯನ್ನು ಎದುರಿಸಲಾಗದು'

ಕ್ಯೂಬಾ ಆಗಸ್ಟ್ 20 ರಂದು ಅಮೆರಿಕಾ ಸೂಡಾನ್ ಮತ್ತು ಅಫಘಾನಿಸ್ತಾನದ ಮೇಲೆ ನಡೆಸಿದ ಮಿಲಿಟರಿ ಧಾಳಿಗಳನ್ನು ಬಲವಾಗಿ ಖಂಡಿಸುತ್ತಾ ಅವು ಅಗಣಿತ ಸಾವು-ನೋವುಗಳಿಗೆ ಕಾರಣವಾದ ಬಹಿರಂಗ ಆಕ್ರಮಣಕಾರೀ ಕೃತ್ಯಗಳು ಎಂದು ಹೇಳಿದೆ. ಆದರೆ ನೈರೋಬಿ, ದಾರ್-ಎಸ್.ಸಲಾಮ್‌ನಲ್ಲಿ ಭಯೋತ್ಪಾದಕ ಪ್ರಯತ್ನಗಳೂ ಅಸಮರ್ಥನೀಯ ಎಂದೂ ಅದು ಖಂಡಿಸಿದೆ. ಇವುಗಳಲ್ಲಿ ನೂರಾರು ಜನ ಸತ್ತಿದ್ದಾರೆ. ಸಾವಿರಾರು ಜನ ಗಾಯಗೊಂಡಿದ್ದಾರೆ. ಇವರಲ್ಲಿ ಹೆಚ್ಚಿನವರು ಆಫ್ರಿಕಾದ ಮುಗ್ಧ ನಿವಾಸಿಗಳು ಎಂದು ಅದು ನೆನಪಿಸಿದೆ.

ಕ್ಯೂಬಾ ಗಣತಂತ್ರ ಕೂಡಾ ಹಿಂದೆಯೂ, ಈಗಲೂ ಬೇರೆ ದೇಶಗಳಿಂದ ಸಂಘಟಿಸಿದ ಭಯೋತ್ಪಾದಕ ಕೃತ್ಯಗಳಿಗೆ ಗುರಿಯಾಗಿದೆ ಎಂದು ನೆನಪಿಸಿರುವ ಕ್ಯೂಬಾದ ಹೇಳಿಕೆ ಈ ಕೃತ್ಯಗಳನ್ನು ನಡೆಸಿದವರು, ನಡೆಸುತ್ತಿರುವವರು ಸದಾ ಅಮೆರಿಕದೊಂದಿಗೆ ನಿಕಟ ಸಂಪರ್ಕ ಇರುವವರು. ಇವರಿಗೆ ತರಬೇತಿ ನೀಡಿ, ಇವರನ್ನು ಸಹಿಸಿಕೊಂಡು, ಕ್ಯೂಬಾದ ವಿರುದ್ಧ ಹಲವು ಹೊಲಸು ಕುಕೃತ್ಯಗಳನ್ನು ನಡೆಸಲು ಅವರನ್ನು ಬಳಸಿಕೊಂಡ ದೇಶ ಅಮೆರಿಕಾ. ಇಂತಹ ದೇಶದ ಈಗಿನ ಕೃತ್ಯಗಳಿಗೆ ಯಾವುದೇ ಕಾನೂನಿನ ಸಮರ್ಥನೆಯಿಲ್ಲ, ಅದು ಕೇವಲ ಅದರ ಅಪಾರ ಮಿಲಿಟರಿ ಮತ್ತು ತಾಂತ್ರಿಕ ಶಕ್ತಿಯ ದುರುಪಯೋಗವಷ್ಟೇ ಎಂದು ಕ್ಯೂಬಾ ಹೇಳಿದೆ.

ಆಗಸ್ಟ್ 23 ರಂದು ಕ್ಯೂಬಾ ನೀಡಿರುವ ಹೇಳಿಕೆಯಲ್ಲಿ ಅಮೆರಿಕನ್ ಕೃತ್ಯದ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಗೊಳಿಸಿದೆ. ಯಾವುದೇ ದೇಶ ಇನ್ನೊಂದು ದೇಶದ ವಿರುದ್ಧ ಕ್ರಮಕೈಗೊಳ್ಳುವ ಹಕ್ಕನ್ನು ತನ್ನ ಕೈಗೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಸಂಘರ್ಷಗಳ ಇತ್ಯರ್ಥಕ್ಕೆ ವಿಧಿ- ವಿಧಾನಗಳಿವೆ. ಅಂತರ್‌ರಾಷ್ಟ್ರೀಯ ಶಾಂತಿ ಕಾಪಾಡುವ ಸಂಸ್ಥೆಗಳಿವೆ, ಅಂತರ್‌ರಾಷ್ಟ್ರೀಯ ಕಾನೂನುಗಳಿವೆ. ಇವನ್ನೆಲ್ಲಾ ಉಲ್ಲಂಘಿಸುವ ಹಕ್ಕು ಯಾವ ದೇಶಕ್ಕೂ ಇಲ್ಲ. ಎಲ್ಲಕ್ಕೂ ಮುಖ್ಯವಾಗಿ ಸಾರ್ವಭೌಮತೆ ಪ್ರತಿಯೊಂದು ದೇಶದ ಹಕ್ಕು, ಅಮೆರಿಕದ ಕೃತ್ಯ ಒಂದು ಅತ್ಯಂತ ಅಪಾಯಕಾರಿ ಹಾಗೂ ನಕಾರಾತ್ಮಕ ಪರಂಪರೆ ನಿರ್ಮಿಸಿದೆ. ಇದರ ಅನಿರೀಕ್ಷಿತ ಪರಿಣಾಮಗಳನ್ನು ಉಪೇಕ್ಷಿಸುವುದು ಬೇಜವಾಬ್ದಾರಿತನವಾಗುತ್ತದೆ ಎಂದು ಕ್ಯೂಬಾ ಹೇಳಿದೆ.

ಅಂತರ್‌ರಾಷ್ಟ್ರೀಯ ಶಾಂತಿ ಹಾಗೂ ಭದ್ರತೆಗಾಗಿ ಅಂತರ್‌ರಾಷ್ಟ್ರೀಯ ಸಮುದಾಯ ಅಮೆರಿಕನ್ ಧಾಳಿಯ ಗಂಭೀರ ಹಾಗೂ ವಿಮರ್ಶಾತ್ಮಕ ವಿಶ್ಲೇಷಣೆ ಮಾಡಬೇಕಾಗಿದೆ ಎಂದಿರುವ ಕ್ಯೂಬಾ ಭಯೋತ್ಪಾದಕತೆಯ ವಿರುದ್ಧ ಹೋರಾಟ ನ್ಯಾಯಬದ್ಧವಾಗಬೇಕಾದರೆ, ಪರಿಣಾಮಕಾರಿಯಾಗಬೇಕಾದರೆ ಅದನ್ನು ಅಂತರ್‌ರಾಷ್ಟ್ರೀಯ ಕಾನೂನಿನ ಪ್ರಕಾರ ನಡೆಸಬೇಕು ಎಂದು ಅಭಿಪ್ರಾಯಪಟ್ಟಿದೆ. ಅದನ್ನು ಎಲ್ಲಾ ದೇಶಗಳ ನಡುವಿನ ಸಹಕಾರದ ಆಧಾರದಲ್ಲಿ ಮಾಡಬೇಕೇ ಹೊರತು ಒಂದು ಮಹಾಶಕ್ತಿಯ ಏಕಪಕ್ಷೀಯ ಕ್ರಮಗಳಿಂದಲ್ಲ ಎಂದು ಕ್ಯೂಬಾ ಸ್ಪಷ್ಟವಾಗಿ ಹೇಳಿದೆ.

ಭಯೋತ್ಪಾದನೆಯನ್ನು ಬಾಂಬುಗಳು, ಕ್ಷಿಪಣಿಗಳ ಧಾಳಿಗಳ ಮೂಲಕ ಎದುರಿಸಲು ಸಾಧ್ಯವಿಲ್ಲ, ಬದಲಿಗೆ ಈ ಧಾಳಿಗಳು ಆ ಅಮಾನವೀಯ ಹಿಂಸಾಚಾರದ ಒಂದು ಹೊಸ ಹಾಗೂ ಇನ್ನಷ್ಟು ಅಪಾಯಕಾರಿ ಸ್ವರೂಪವನ್ನು ಸೃಷ್ಟಿಸುತ್ತದೆ ಎಂದು ಕ್ಯೂಬಾ ಎಚ್ಚರಿಸಿದೆ.

ಪಾಕಿಸ್ತಾನ ಸಂವಿಧಾನವನ್ನು ಮೀರಿದ ಇಸ್ಲಾಮಿಕ್ ಕಾನೂನು

ಪಾಕಿಸ್ತಾನದಲ್ಲಿ ರೂಪಾಯಿಯ ಕುಸಿತ, ತೀವ್ರ ಆರ್ಥಿಕ ದಿಗ್ಬಂಧನಗಳು ಹದಗೆಡುತ್ತಿರುವ ಜನರ ಜೀವನ ಮಟ್ಟ, ಅತೃಪ್ತಿಯಿಂದ ತಪ್ಪಿಸಿಕೊಳ್ಳಲು ಪ್ರಧಾನಿ ನವಾಜ್ ಶರೀಫ್ ಪುನಃ ಇಸ್ಲಾಮಿನ ಮೊರೆ ಹೋಗಿದ್ದಾರೆ. 15 ನೇ ಸಂವಿಧಾನ ತಿದ್ದುಪಡಿ ಮಸೂದೆ ತಂದು ಕುರಾನ್ ಹಾಗೂ ಸುನ್ನಾ (ಪ್ರವಾದಿ ಮಹಮ್ಮದರ ಉಕ್ತಿಗಳು) ಸಂವಿಧಾನವನ್ನು ಮೀರಿದ ಪರಮೋಚ್ಚ ಕಾನೂನು ಎಂದು ಘೋಷಿಸಿದ್ದಾರೆ. ಇದರಿಂದ ಒಂದೇ ಏಟಿಗೆ ಇಡೀ ಸಂವಿಧಾನವನ್ನೇ ಭಂಗ ಮಾಡಿದಂತಾಗಿದೆ. ಇದರ ಜತೆಗೆ ಈ ತಿದ್ದುಪಡಿ ಯಾವುದೂ ಇಸ್ಲಾಮಿಕ್, ಯಾವುದು ಅಲ್ಲ ಎಂದು ನಿರ್ಧರಿಸುವ ಅಧಿಕಾರವನ್ನು ಸರ್ಕಾರಕ್ಕೆ ಕೊಡುತ್ತದೆ. ಈಗಾಗಲೇ ತುರ್ತು ಪರಿಸ್ಥಿತಿಯನ್ನು ಹೇರುವ ಮೂಲಕ ಅಪಾರ ಅಧಿಕಾರ ಪಡೆದ ಸರ್ಕಾರ ಇನ್ನಷ್ಟು ಅಧಿಕಾರ ಪಡೆದಿದೆ. ಈಗಾಗಲೇ ಇಸ್ಲಾಮಿಕ್ ಕಾನೂನಿನ ವಿವಿಧ ಅಂಶಗಳು ಸಂವಿಧಾನದಲ್ಲಿ ಮತ್ತು ವಿವಿಧ ಕಾನೂನುಗಳಲ್ಲಿ ಅಡಕವಾಗಿವೆ. ಹಾಗಿರುವಾಗ ಈ ತಿದ್ದುಪಡಿಯ ಅವಶ್ಯಕತೆ ಏನೆಂದು ಧಾರ್ಮಿಕ ನಾಯಕರೂ ಪ್ರಶ್ನಿಸಿದ್ದಾರೆ

ನಿರೀಕ್ಷಿಸಬಹುದಾದಂತೆ ಈ ತಿದ್ದುಪಡಿಗೆ ತೀವ್ರ ವಿರೋಧ ಕಂಡು ಬಂದಿದೆ. ವಿರೋಧ ಪಕ್ಷಗಳು, ಉದಾರವಾದಿಗಳು, ಅಲ್ಪಸಂಖ್ಯಾತರು, ಮಹಿಳಾ ಚಳುವಳಿ ನವಾಜ್ ಶರೀಫರ ನಿರ್ಧಾರವನ್ನು ತೀವ್ರವಾಗಿ ಪ್ರತಿಭಟಿಸಿವೆ, ಖಂಡಿಸಿವೆ. ಜನಗಳನ್ನು ಕಿತ್ತಿನ್ನುತ್ತಿರುವ ಆರ್ಥಿಕ ಸಮಸ್ಯೆಗಳಿಂದ ಗಮನ ಬೇರೆಡೆ ಹರಿಸಲು ಪ್ರಧಾನಿ ಶರೀಫ್ ಈ ಆಟಗಳಲ್ಲಿ ತೊಡಗಿದ್ದಾರೆ ಎಂಬ ತೀವ್ರ ಆಪಾದನೆ ಬಂದಿದೆ. ವಿದೇಶಿ ವಿನಿಮಯ ಖಾತೆಗಳಲ್ಲಿ ಪಾಕಿಸ್ತಾನಿಯರು ಇಟ್ಟಿರುವ 11 ಶತಕೋಟಿ ಡಾಲರುಗಳನ್ನು ಸ್ಥಗಿತ ಗೊಳಿಸುವ ಸರ್ಕಾರ, ಆರ್ಥಿಕ ಸಮಸ್ಯೆಗಳ ಬಗ್ಗೆ ಏನೂ ಮಾಡುತ್ತಿಲ್ಲ ಎಂಬ ಕೂಗು ಜೋರಾಗಿ ಕೇಳುತ್ತಿದೆ. ಆದರೆ ಈ ತಿದ್ದುಪಡಿ ಮಸೂದೆ ಪಾರ್ಲಿಮೆಂಟಿನಲ್ಲಿ ಮಂಜೂರಾಗುವ ಸಾಧ್ಯತೆ ಕಡಿಮೆ. ಆಳುವ ಪಕ್ಷದ ಹಲವು ನಾಯಕರುಗಳು ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸಿದ್ದಾರೆ.

ರಶ್ಯಾದಲ್ಲಿ ಮತ್ತೆ ಯೆಲ್ಸಿನ್‌ಗೆ ಸೋಲು

ರಶ್ಯದ ಡೂಮಾ (ಪಾರ್ಲಿಮೆಂಟು) ಎರಡನೇ ಬಾರಿ ಅಧ್ಯಕ್ಷ ಯೆಲ್ಸಿನರ ಪ್ರಧಾನಿ ಪಟ್ಟದ ನಾಮಕರಣವನ್ನು ತಿರಸ್ಕರಿಸಿದೆ. ಯೆಲ್ಸಿನ್ ಮೊದಲ ಬಾರಿ ತಿರಸ್ಕೃತವಾದ ಚೆರ್ನೋಮೆರ್ಡಿನ್‌ನನ್ನು ಪುನಃ ನಾಮಕರಣ ಮಾಡಿದ್ದು, ಆತನಿಗೆ ಕೇವಲ 138 ಮತ ಬಿದ್ದಿದ್ದು, ವಿರುದ್ಧ 273 ಮತಗಳು ಬಿದ್ದಿವೆ. ಇದರಿಂದ ರಶ್ಯದ ಬಿಕ್ಕಟ್ಟು ಇನ್ನಷ್ಟು ತೀವ್ರವಾಗಿದೆ. ರಶ್ಯದ ಸಂವಿಧಾನದ ಪ್ರಕಾರ ಮೂರನೇ ಬಾರಿ ಅಧ್ಯಕ್ಷರ ನಾಮಕರಣವನ್ನು ಡೂಮಾ ತಿರಸ್ಕರಿಸಿದೆ. ಡೂಮಾವನ್ನೇ ವಿಸರ್ಜಿಸುವ ಅಧಿಕಾರ ಅಧ್ಯಕ್ಷರಿಗಿದೆ. ಆದರೆ ಅಧ್ಯಕ್ಷರ ವಿರುದ್ಧ ದೋಷಾರೋಪಣೆಯಾದರೆ ಆ ಅಧಿಕಾರ ಅವರಿಗಿಲ್ಲ. ರಶ್ಯಾದ ಡೂಮಾದ ಕಮ್ಯುನಿಸ್ಟ್ ನಾಯಕತ್ವದ ವಿರೋಧ ಪಕ್ಷಗಳು ಅಧ್ಯಕ್ಷರ ವಿರುದ್ಧ ದೋಷಾರೋಪಣೆಯನ್ನು ಸದ್ಯಕ್ಕೆ ತರಲು ಪ್ರಯತ್ನಿಸುತ್ತಿದ್ದು, ಯೆಲ್ಸಿನ್‌ಗೆ ತಲೆನೋವಾಗಿದೆ ಚೆರ್ನೋಮೆರ್ಡಿನ್ ಬಿಟ್ಟು ಬೇರೆ ಯಾರಾದರೂ ಅಧ್ಯಕ್ಷರಿಗೂ ಡೂಮಾದ ಬಹುಮತದ ಸದಸ್ಯರಿಗೂ ಸಮಾನವಾಗಿ ವಿಶ್ವಾಸಮತ ವ್ಯಕ್ತಿಯೊಬ್ಬರನ್ನು ಪ್ರಧಾನಿಯಾಗಿ ನೇಮಿಸಬೇಕು. ಅಧ್ಯಕ್ಷರ ಹಲವಾರು ಅಧಿಕಾರಗಳನ್ನು ಪ್ರಧಾನಿಗೆ ವರ್ಗಾಯಿಸಬೇಕು. ಈ ಬಗ್ಗೆ ಯೆಲ್ಸಿನ್ ಒಪ್ಪಿದರೆ ಮಾತ್ರ ರಶ್ಯಾದ ರಾಜಕೀಯ ಬಿಕ್ಕಟ್ಟು ಪರಿಹಾರವಾಗಬಹುದು. ಇಷ್ಟರವರೆಗೆ ಇಂತಹ ಒಪ್ಪಂದಕ್ಕೆ ಯೆಲ್ಸಿನ್ ತಲೆಬಾಗುವ ಲಕ್ಷಣಗಳಿಲ್ಲ.

ಹನ್‌ಸೆನ್ ಮೇಲೆ ದಾಳಿ ಆಸಿಯನ್ ಬೆಂಬಲ

ಕಂಬೋಡಿಯಾ ಪ್ರಧಾನಿ ಹನ್‌ಸೆನ್‌ರ ಸರಕಾರ ನಡೆಸಿದ ಚುನಾವಣೆ ಮತ್ತು ನಂತರದ ಚುನಾವಣೆ ಫಲಿತಾಂಶಗಳನ್ನು ದಕ್ಷಿಣಪೂರ್ವ ಏಶ್ಯಾ ಏಳು ದೇಶಗಳ ಒಕ್ಕೂಟ ಆಸಿಯನ್ (ASEAN) ಸ್ವಾಗತಿಸಿದೆ. ಕಾಂಬೋಡಿಯಾ ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾವಣೆ ನಡೆಸಿರುವುದರಿಂದ ಆಸಿಯನ್ ಸದಸ್ಯತ್ವಕ್ಕೆ ಅರ್ಹ ಎಂದು ಸಾರಿದೆ. ಆದರೆ ಕಂಬೋಡಿಯಾದ ಒಳಗೆ ಚುನಾವಣೆಯಲ್ಲಿ ಸೋತ ರಾಜಕುಮಾರ ರಣರಿಧ್ ಹಾಗೂ ಇತರರು ಈ ಚುನಾವಣೆಯನ್ನು ಅನ್ಯಾಯಯುತ ಎಂದು ಕರೆದಿದ್ದಾರೆ. ಪಾರ್ಲಿಮೆಂಟು ಬಹಿಷ್ಕಾರ ಹಾಕುತ್ತಾ ಕಂಬೋಡಿಯಾದ ಹೊಸ ಪ್ರಜಾಪ್ರಭುತ್ವ ಕೆಲಸ ಮಾಡದಂತೆ ತಡೆಹಿಡಿದಿದ್ದಾರೆ. ಈ ನಡುವೆ ಹನ್‌ಸೆನ್ ಮನೆಯ ಮೇಲೆ ಬಾಂಬ್‌ದಾಳಿ ನಡೆದಿದ್ದು, ಹನ್‌ಸೆನ್ ಈ ಭಯೋತ್ಪಾದನ ಮಾಡಿದವರನ್ನು ಎಚ್ಚರಿಸಿದ್ದಾರೆ.

ಇಂಡೋನೇಶ್ಯಾದಲ್ಲಿ ಪಾರ್ಲಿಮೆಂಟ್ ಬಳಿ ಮತ್ತೆ ವಿದ್ಯಾರ್ಥಿ ಗಲಭೆ

ಇಂಡೋನೇಶ್ಯಾದಲ್ಲಿ ಮತ್ತೆ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ಪಾರ್ಲಿಮೆಂಟ್ ಬಳಿ ಅಧ್ಯಕ್ಷರ ರಾಜೀನಾಮೆಗೆ ಒತ್ತಾಯಿಸಿ ಭಾರೀ ಪ್ರದರ್ಶನ ನಡೆಸಿದ್ದಾರೆ. ದೇಶದ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ಏನೂ ಮಾಡಿಲ್ಲ. ಮಾಜಿ ಅಧ್ಯಕ್ಷ ಸುಹಾರ್ತೋ ಹಾಗೂ ಅವರ ಕುಟುಂಬ ಸದಸ್ಯರ ಭಾರಿ ಭ್ರಷ್ಟಾಚಾರ ಹಗರಣಗಳನ್ನು ಮುಚ್ಚಿಹಾಕುವ ಪ್ರಯತ್ನವನ್ನು ಅಧ್ಯಕ್ಷರು ನಡೆಸಿದ್ದಾರೆಂದು ವಿದ್ಯಾರ್ಥಿಗಳ ಆಪಾದನೆ.

ಗೇಟ್ ಹಾರಿ ಪಾರ್ಲಿಮೆಂಟ್ ಕಾಂಪೌಂಡಿಗೆ ನುಗ್ಗಲು ಪ್ರಯತ್ನಿಸಿದ ವಿದ್ಯಾರ್ಥಿಗಳನ್ನು ಪೋಲೀಸರು ತಡೆದಿದ್ದಾರೆ. ಭಾರಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ಆಹಾರ ವಸ್ತುಗಳ ಬೆಲೆಗಳನ್ನು ಇಳಿಸುವಂತೆ ಒತ್ತಾಯಿಸಿದ್ದಾರೆ.

ತಿರುಗುಬಾಣವಾಯಿತು ಬೆಂಬಲ....

ಪುಟ 5 ರಿಂದ

ಅಮೆರಿಕದವರು ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿ ಜತೆ ಚರ್ಚೆ ನಡೆಸಿದರು. ಪಾಕಿಸ್ತಾನ ಸಿಟಿಬಿಟಿಗೆ ಸಹಿ ಹಾಕುತ್ತದೆ, ಅದಕ್ಕೆ ಪ್ರತಿಯಾಗಿ ನಿರ್ಬಂಧಗಳನ್ನು ತೆಗೆದುಹಾಕಿ ಅಗತ್ಯವಾಗಿ ಬೇಕಾದ ಐಎಂಎಫ್ ನೆರವನ್ನು ಪಾಕ್‌ಗೆ ನೀಡಲಾಗುತ್ತದೆ ಎಂಬ ಒಪ್ಪಂದವೊಂದಕ್ಕೆ ಬರಲಾಯಿತು ಎಂದು ಹೇಳಲಾಗಿದೆ. ಪಾಕಿಸ್ತಾನ ಸಿಟಿಬಿಟಿಗೆ ಸಹಿ ಹಾಕಿದಾಗ ಅಮೇರಿಕ ಖಂಡಿತವಾಗಿಯೂ ಪಾಕ್‌ಮಿಲಿಟರಿ ವ್ಯವಸ್ಥೆಯನ್ನು ಪೋಷಿಸುತ್ತದೆ. ಹಾಗೂ ಆ ದೇಶದೊಂದಿಗೆ ನಿಕಟ ಸಂಬಂಧವನ್ನು ಬೆಳೆಸುತ್ತದೆ.

ಕೋಮುವಾದದ ಒಂದು ವಿಸ್ತರಣೆ

ಅಮೇರಿಕದ ಒಪ್ಪಿಗೆ ಬಯಸುವ ಈ ಉಪೇಕ್ಷಿತ ನೀತಿ ಬಿಜೆಪಿ ಆರೆಸ್ಸೆಸ್ ಕೂಟ ದೇಶೀಯವಾಗಿ ಅನುಸರಿಸುವ ಕೋಮುವಾದ ಆಧಾರದ ಧೋರಣೆಯ ವಿಸ್ತರಣೆಯಾಗಿದೆ. ಪಾಕಿಸ್ತಾನ ಮತ್ತು ಮುಸ್ಲಿಂ ಜಗತ್ತಿನ ವಿರುದ್ಧ ಅದು ಒಂದು ಸಾಮರಿಕ ಮಿತ್ರನೊಬ್ಬನ ಹುಡುಕಾಟದಲ್ಲಿದೆ.

ಅಮೇರಿಕ ತನಗೆ ಅನುಕೂಲವಾದಾಗ ಇಸ್ಲಾಂ ಮೂಲಭೂತವಾದವನ್ನು ಬಳಸಿಕೊಳ್ಳುತ್ತದೆ ಹಾಗೂ ತನ್ನ (ಅಮೆರಿಕದ) ಜಾಗತಿಕ ತಂತ್ರಗಾರಿಕೆಯಲ್ಲಿ ಕಿರಿಯ ಪಾಲುದಾರನಾಗಲು ಭಾರತ ಸಿದ್ಧವಾಗದೆ ಇದು ಪಾಕಿಸ್ತಾನದೊಂದಿಗಿನ ಸಾಮರಿಕ ಸಂಬಂಧಗಳನ್ನು ಯಾವತ್ತೂ ಕಡಿದುಕೊಳ್ಳುವುದಿಲ್ಲ ಎಂದು ಭಾವಿಸಲು ಅಸಾಧ್ಯವೇ?

ಪೊಖ್ರಾನ್ ಪರೀಕ್ಷೆ ನಂತರದ ಅವಧಿಯಲ್ಲಿ ಭಾರತ ಅಂತರ್‌ರಾಷ್ಟ್ರೀಯ ಕ್ಷೇತ್ರದಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದರಿಂದಾಗಿ ಅಮೆರಿಕದೊಂದಿಗೆ ರಾಜಿಮಾಡಿಕೊಳ್ಳುವ ಹತಾಶ ಸನ್ನಿವೇಶ ಸೃಷ್ಟಿಯಾಗಿದೆ. ಅಮೇರಿಕವನ್ನು ಸಂತೃಪ್ತಿಗೊಳಿಸುವ ಹಾದಿಯಲ್ಲಿ ವಾಜಪೇಯಿ ಸರಕಾರ ನಡೆದಿದೆ. ಕ್ಷಿಪಣಿ ದಾಳಿಗಳಿಗೆ ಸಮ್ಮತಿ ಸೂಚಿಸಿದ್ದರಿಂದ ದಕ್ಷಿಣ ಆಫ್ರಿಕಾದಲ್ಲಿ ನಡೆದ ಅಲಿಪ್ತ ಶೃಂಗ ಸಭೆಯಲ್ಲಿ ಭಾರತದ ನಿಲುವನ್ನು ರಾಜಿಮಾಡಿಕೊಂಡಂತಾಗಿದೆ. ಅಮೆರಿಕ ಸಾಮ್ರಾಜ್ಯಶಾಹಿಯ ಸಮರ್ಥಕ ಹಾಗೂ ಅದರ ಹೇಯ ಆಕ್ರಮಣದ ಬೆಂಬಲಿಗ ಎಂಬ ನಾಚಿಕೆಗೇಡಿನ ಮುಖದೊಂದಿಗೆ ಅಲಿಪ್ತ ಶೃಂಗ ಸಭೆಯಲ್ಲಿ ಭಾಗವಹಿಸಿದ ಸರಕಾರ ಎಂಬ ಕುಖ್ಯಾತಿಗೆ ವಾಜಪೇಯಿ ಸರಕಾರ ಒಳಗಾಯಿತು. ○

"ಮೂವರ ಮಹಿಳೆಯರಿಗೆ ನ್ಯಾಯ ಕೊಡಿ"

ಪುಟ 5 ರಿಂದ

ಜಗತರನ್ ದೇವಿ :

ಈಕೆಗೆ 50 ವರ್ಷ. ಆದರೆ ತೀರಾ ವಯಸ್ಸಾದ ಮುದುಕಿಯಂತಾಗಿದ್ದಾಳೆ. ಕೃಷಿಕೂಲಿಗಾರಳಾಗಿದ್ದಳು. ಆದರೆ ಕಾಯಿಲೆಯಿಂದಾಗಿ ಅದನ್ನು ಮುಂದುವರೆಸಲಾಗಲಿಲ್ಲ. ಗಂಡ ಕುರುಡ. ಗದ್ದೆಗೆ ಹೋಗಲಾಗದ್ದರಿಂದ ಮಾರ್ಕೆಟ್‌ಗಳಿಗೆ ಆತನನ್ನು ಸಂಗಡ ಒಯ್ದು ಭಿಕ್ಷೆ ಬೇಡಿ ಜೀವನ ಸಾಗಿಸಬೇಕಾಗಿತ್ತು. ಈಕೆಯ ಕಾಲಿಗೂ ಗುಂಡು ತಾಗಿತು. ಗೋಳಿಬಾರಿನ ನಂತರ ಪೋಲೀಸರು ಬಂಧಿಸಿದ 41 ಮಂದಿಯಲ್ಲಿ ಈಕೆಯೂ ಒಬ್ಬಳು. ಆಕೆಯ ಪುಟ್ಟ ಮಗಳು ಸೀತಾ ಎಐಡಿಡಬ್ಲ್ಯುಎ ತಂಡ ಅವರ ಊರಿಗೆ ಭೇಟಿ ನೀಡಿದಾಗ ತಾಯಿಯನ್ನು ಇಟ್ಟ ಜೈಲಿಗೆ ಕರೆದುಕೊಂಡು ಹೋಗುವಂತೆ ಹೇಳಿದಳು. 25. ಕಿ.ಮಿ. ದೂರದಲ್ಲಿದ್ದ ಜೈಲಿನಲ್ಲಿ ತಂಡ ಜಗತರನ್‌ಳನ್ನು ಭೇಟಿಯಾಯಿತು. ಈಕೆ ಧರಣಿಯಿಂದ ಏಳುವ ವೇಳೆಗೆ ಕಾಲಿಗೆ ಗುಂಡು ಹೊಡೆಯಲಾಯಿತು ಎಂದಳು. ಆ ಸ್ಥಿತಿಯಲ್ಲೇ ಆಕೆಯನ್ನು ಬಂಧಿಸ ಲಾಯಿತು. ಕಾಲಿನಲ್ಲಿದ್ದ ಗುಂಡು ತೆಗೆದರೂ ನೋವು ಇನ್ನೂ ಹಾಗೆಯೇ ಇತ್ತು. ಆದರೆ ಆಕೆಗೆ ಜೈಲಿನಲ್ಲಿ ನೆಲ ಒರೆಸುವ ಕೆಲಸ ಕೊಡಲಾಗಿತ್ತು. ಈ ಅಮಾನವೀಯ ವರ್ತನೆಯ ಬಗ್ಗೆ ಜೈಲರನ್ನು ಕೇಳಿದಾಗ ತನಗೇನೂ ಗೊತ್ತಿಲ್ಲ, ಇನ್ನು ಮುಂದೆ ಈ ಕೆಲಸ ಕೊಡುವುದಿಲ್ಲ ಎಂದನಾತ. ಜಗತರನ್ ಮಗಳನ್ನು ನೋಡಿದಾಗ ಇಬ್ಬರೂ ಬಿಗಿದಪ್ಪಿ ಅತ್ತರು. ಮಗಳು ಹೊರಟಾಗ ತನ್ನ ಹರಿದ ಸೀರೆಯ ಮಡಿಕೆ ಯಿಂದ 5 ರೂಪಾಯಿ ನೋಟನ್ನು ತೆಗೆದು ಕೊಡುತ್ತಾ "ನಂಗೊತ್ತು ನೀನು ಹಸಿದಿರ ಬೇಕು. ಈ ಹಣ ಉಳಿಸಿದ್ದೆ. ತಗೊ" ಎಂದಳು.

ತನ್ನ ಕಾಯಿಲೆಯಿಂದಾಗಿ ನೆಟ್ಟಗೆ ನಿಲ್ಲಲೂ ಆಗದ ಜಗತರನ್ ಶಸ್ತ್ರ ಹೊಂದಿದ್ದಳು, ಶಸ್ತ್ರ ಬಳಸಿದ್ದಳು, ಕೊಲೆ ಪ್ರಯತ್ನ ನಡೆಸಿದಳು, ಗಲಭೆ, ಆಸ್ತಿನಾಶ ನಡೆಸಿದಳು ಎಂದೆಲ್ಲಾ ಆಡಳಿತ ಆಪಾದನೆ ಹಾಕಿರುವುದು ಆಘಾತವುಂಟು ಮಾಡುವಂತದ್ದು ಎಂದು ಎಐಡಿಡಬ್ಲ್ಯುಎ ಮಾನವ ಹಕ್ಕು ಆಯೋಗಕ್ಕೆ ಬರೆದ ಪತ್ರದಲ್ಲಿ ಹೇಳಿದೆ. ಈ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ರನ್ನು ಕೇಳಿದಾಗ ತನಗೇನೂ ಗೊತ್ತಿಲ್ಲದಂತೆ ನಟಿಸಿದರು, ಬಂಧಿತರ ಪಟ್ಟಿಯಿಂದ ಆಕೆಯ ಹೆಸರನ್ನು ತೆಗೆಯುವುದಾಗಿ ತಿಳಿಸಿದರು. ಆದರೆ ಒಂದು ವಾರದ ನಂತರವೂ ಆಕೆಯ ಮೇಲಿನ ಕೇಸುಗಳನ್ನು ಹಿಂತೆಗೆದುಕೊಂಡಿಲ್ಲ ಎಂದು ಎಐಡಿಡಬ್ಲ್ಯುಎ ಪತ್ರ ಹೇಳಿದೆ.

ಎಐಡಿಡಬ್ಲ್ಯುಎ ಬಿಹಾರ ಆಡಳಿತದ ಮುಂದೆ ಈ ನಾಲ್ಕು ಆಗ್ರಹಗಳನ್ನಿಟ್ಟಿದೆ.

1. *ಜನಜಂಗುಳಿಯ ಮೇಲೆ ಗೋಳೀಬಾರು ಮಾಡಿದ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪೋಲೀಸ್ ಸಿಬ್ಬಂದಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು.*
2. *ರಾಂಪರಿದೇವಿಯ ಕುಟುಂಬಕ್ಕೆ ಪರಿಹಾರ*
3. *ಮಂಜುದೇವಿಗೆ ತಕ್ಷಣ ಹಣಕಾಸಿನ ಪರಿಹಾರ ಹಾಗೂ ಆಕೆಗೆ ಒಂದು ಸರಕಾರಿ ಕೆಲಸ.*
4. *ಜಗತರನ್ ದೇವಿಯ ಮೇಲಿನ ಎಲ್ಲಾ ಕೇಸುಗಳನ್ನು ಹಿಂತೆಗೆದುಕೊಂಡು, ಆಕೆಯನ್ನು ತಕ್ಷಣ ಬಿಡುಗಡೆ ಮಾಡಬೇಕು. ಸುಳ್ಳು ಕಾರಣಗಳಿಗೆ ಆಕೆಯನ್ನು ಜೈಲಿಗೆ ಹಾಕಿದ್ದಕ್ಕೆ ಪರಿಹಾರ ಹಾಗೂ ಆಕೆಯ ದೃಷ್ಟಿಹೀನ ಗಂಡನಿಗೆ ಪೆನ್ಷನ್.*

"ಬಿಹಾರ ಸರಕಾರದಿಂದ ನಾವು ನ್ಯಾಯ ನಿರೀಕ್ಷಿಸುವಂತಿಲ್ಲ. ಪ್ರಕೃತಿಯ ವಿಕೋಪ ಮಾತ್ರವಲ್ಲ, ಆಡಳಿತದ ನಿರ್ಲಕ್ಷ್ಯಕ್ಕೆ ಬಲಿಯಾದ ಈ ಬಡಪಾಯಿ ಜಿಲ್ಲೆಯ ಜನಗಳ ಮಾನವ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯ ಆಧಾರದಲ್ಲಿ ನಾವು ಕನಿಷ್ಠ ಈ ಮೂವರು ಮಹಿಳೆಯರಿಗೆ ಮತ್ತು ಅವರ ಕುಟುಂಬಗಳಿಗೆ ನ್ಯಾಯ ಸಿಗುವಂತೆ ನೀವು ಮಧ್ಯ ಪ್ರವೇಶ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ" ಎಂದು ಎಐಡಿಡಬ್ಲ್ಯುಎ ರಾಷ್ಟ್ರೀಯ ಮಾನವಹಕ್ಕು ಆಯೋಗಕ್ಕೆ ಬರೆದ ಪತ್ರದಲ್ಲಿ ಕೇಳಿಕೊಂಡಿದೆ. ○

"ಸಿಟಿಬಿಟಿಗೆ ಸಹಿ ಹಾಕುವ ವಿಚಾರ ಮಾಡಬೇಡಿ"

ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ

ಅಮೇರಿಕದ ನಿರಂತರ ಒತ್ತಡಕ್ಕೊಳಗಾಗಿರುವ ವಾಜಪೇಯಿ ಸರಕಾರ ಗುಟ್ಟಿನಲ್ಲಿ ಸಿ.ಟಿ.ಬಿ.ಟಿ.(ಸಮಗ್ರ ಪರೀಕ್ಷಾ ನಿಷೇಧ ಸಂಧಿ)ಗೆ ಸಹಿ ಮಾಡುವ ದಿಕ್ಕಿನಲ್ಲಿ ಹೋಗುತ್ತಿದೆ ಎಂದು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಸಂದೇಹ ವ್ಯಕ್ತಪಡಿಸಿದೆ. ಸ್ಟ್ರೋಬ್ ಟಾಲ್ಬೋಟ್ ಮತ್ತು ಜಸ್ವಂತ್‌ಸಿಂಗ್ ನಡುವೆ ನಾಲ್ಕು ಸುತ್ತುಗಳ ಮಾತುಕತೆಗಳು ನಡೆದಿರುವ ರೀತಿಯಿಂದಲೇ ಇದು ವೇದ್ಯವಾಗುತ್ತದೆ. ಈ ಬಗ್ಗೆ ತೀರಾ ಇತ್ತೀಚಿನ ವರದಿಯೆಂದರೆ ನ್ಯೂಯಾರ್ಕ್ ವಿಮಾನ ನಿಲ್ದಾಣದಲ್ಲಿ ಈ ಇಬ್ಬರ ಭೇಟಿ ನಡೆಯಿತು. ಇದು ಪೂರ್ವ ನಿರ್ಧಾರಿತವಾಗಿರಲಿಲ್ಲ ಎಂದು ಇವೆಲ್ಲಾ ವಾಜಪೇಯಿ ಸರಕಾರ ಸಿ.ಟಿ.ಬಿ.ಟಿ.ಗೆ ಭಾರತದ ಸುವಿದಿತ ನಿಲುವನ್ನು ದೇಶವನ್ನು ವಿಶ್ವಾಸಕ್ಕೆ ತಗೊಳ್ಳದೆಯೇ ಬದಲಿಸ ಹೊರಟಿದೆ ಎಂಬುದರ ಸಂಕೇತಗಳು ಎಂದು ಸಿ.ಪಿ.ಐ.(ಎಂ) ಅಭಿಪ್ರಾಯ ಪಟ್ಟಿದೆ.

ಪೋಖ್ರಾನ್ ಪರೀಕ್ಷಣೆಗಳ ನಂತರ ಇಂತಹ ಮೊಣಕಾಲೂರುವ ದಾರಿ ಹಿಡಿಯುವಂತಹ ಪರಿಸ್ಥಿತಿ ಅನಿವಾರ್ಯವಾಗಿಯೇ ಉಂಟುಮಾಡಿದೆ. ಸರಕಾರದ ಈ ನೀತಿ ಭಾರತ ಅಂತರ್‍ರಾಷ್ಟ್ರೀಯ ಒತ್ತಡಗಳಿಗೆ ಒಳಗಾಗುವಂತೆ ಮಾಡಿದೆ ಎಂದು ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಅಮೇರಿಕಾ ಸಂಯುಕ್ತ ಸಂಸ್ಥಾನಗಳೊಂದಿಗೆ ವಾಜಪೇಯಿ ಸರಕಾರ ಯಾವ ಶರತ್ತು-ನಿಬಂಧನೆಗಳ ಬಗ್ಗೆ ಚರ್ಚಿಸುತ್ತಿದೆ ಎಂದು ತಿಳಿಯುವ ಹಕ್ಕು ದೇಶಕ್ಕಿದೆ. ಅಧ್ಯಕ್ಷ ಕ್ಲಿಂಟನ್‌ರ ಭಾರತ ಭೇಟಿ ಬಗ್ಗೆ ಸರಕಾರ ತೋರಿಸುತ್ತಿರುವ ಆತುರವನ್ನು ನೋಡಿದರೆ ಈ ಮಾತುಕತೆ ಯಲ್ಲಿ ಅಸಮಾನ ಶರತ್ತುಗಳಿರಬೇಕೆಂದು ಸಂದೇಹ ಬರುತ್ತದೆ ಎಂದಿರುವ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ವಾಜಪೇಯಿ ಸರಕಾರದ ಶಸ್ತ್ರೀಕರಣ, ಅಮೆರಿಕಾದೊಂದಿಗೆ ರಾಜಿ ಮಾಡಿಕೊಳ್ಳುವ ಪ್ರಯತ್ನಗಳನ್ನು ಸಿ.ಪಿ.ಐ. (ಎಂ) ಒಪ್ಪುವುದಿಲ್ಲ ಎಂದು ಮತ್ತೆ ಸ್ಪಷ್ಟಪಡಿಸಿದೆ.

ವಾಜಪೇಯಿ ಸರಕಾರ ಈಗ ಅಮೇರಿಕಾ ಮತ್ತು ಅದರ ಮಿತ್ರರ ಕೃಪೆಗೆ ಮತ್ತೆ ಪಾತ್ರವಾಗಲು ಸಿ.ಟಿ.ಬಿ.ಟಿ.ಗೆ ಸಹಿ ಹಾಕುವಲ್ಲಿ ಪಾಕಿಸ್ತಾನದೊಂದಿಗೆ ಸ್ಪರ್ಧೆಗೆ ಇಳಿಯುವ ಮಟ್ಟಕ್ಕಿಳಿದಿದೆ. ಇಷ್ಟೆಲ್ಲಾ ಮಾಡಿದ ನಂತರ ಎಲ್ಲಾ ಪಕ್ಷಗಳೊಡನೆ ಚರ್ಚಿಸಿ ಒಮ್ಮತಕ್ಕೆ ಬರಲಾಗುವುದು ಎಂಬ ಮಾತು ಅರ್ಥಹೀನ ಎಂದು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಅಮೇರಿಕಾದೊಂದಿಗೆ ಇದುವರೆಗೆ ನಡೆಸಿದ ಮಾತುಕತೆಗಳ ಬಗ್ಗೆ ಒಂದು ಪೂರ್ಣ ಹೇಳಿಕೆಯನ್ನು ಪ್ರಕಟಿಸಬೇಕು ಎಂದು ಅದು ವಾಜಪೇಯಿ ಸರಕಾರವನ್ನು ಆಗ್ರಹಿಸಿದೆ.

"ಅಡ್ವಾಣಿ ಹಿಂದೂ ಧರ್ಮದ ಮೇಲೊಂದು ಅತ್ಯಂತ ದೊಡ್ಡ ಕಳಂಕ"

ಹೀಗೆಂದವರು ಮತ್ತ್ಯಾರೂ ಅಲ್ಲ, ಪುರಿಯ ಶಂಕರಾಚಾರ್ಯರು

ವಿ.ಹೆಚ್.ಪಿ.ಯ ಪ್ರಧಾನ ಕಾರ್ಯದರ್ಶಿ ಅಶೋಕ್ ಸಿಂಘಾಲ್‌ಗೆ ಧರ್ಮದ ಅರ್ಥವೂ ತಿಳಿದಿಲ್ಲ ಎನ್ನುತ್ತಾರೆ ಅವರು. ಮುಂಬೈಯಲ್ಲಿ ಆಗಸ್ಟ್ 29ರಂದು ಒಂದು ಪತ್ರಿಕಾ ಸಮ್ಮೇಳನದಲ್ಲಿ ಅವರು "ಧರ್ಮವನ್ನು ಕೆಲವು ರಾಜಕಾರಣಿಗಳು ಸ್ವಾರ್ಥ ಸಾಧನೆಗೆ ಕಿತ್ತುಕೊಂಡಿದ್ದಾರೆ ಎಂದರು.

ಅವರ ಕೆಲವು ಟಿಪ್ಪಣಿಗಳನ್ನು ನೋಡಿ -

➢ *ಈ (ಕೇಂದ್ರದಲ್ಲಿನ ಬಿ.ಜೆ.ಪಿ.) ಸರಕಾರ ಒಂದು ನೌಟಂಕಿ(ಪ್ರಹಸನ)ಯಾಗಿ ಬಿಟ್ಟಿದೆ. ಅಡ್ವಾಣಿ ಒಬ್ಬ ಮುಖಂಡರಲ್ಲ, ಕೇವಲ ನಾಚ್‌ಗಾನೇವಾಲಾ (ಹಾಡುವ- ಕುಣಿಯುವ ಮನುಷ್ಯ). ಇಂತವರಿಗೆ ಅವರದ್ದೇ ಮನರಂಜನೆಯ ರಂಗವನ್ನು ಕೊಡಬೇಕು- ಅಧಿಕಾರದ ಸ್ಥಾನಗಳಲ್ಲಿ ಕೂರಲು ಬಿಡಬಾರದು.*

➢ *ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್.ಎಸ್.ಎಸ್.) ಎಂದೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸ ಲಿಲ್ಲ. ಅದು ಹುಡುಗರನ್ನು ಖಾಕಿ ಚಡ್ಡಿಗಳೊಳಗೆ ತುರುಕಿತು. ಆದರೆ ಅವರು ದೇಶಕ್ಕಾಗಿ ಹೋರಾಡದಂತೆ ತಡೆಯಿತು. ಹಿಂದೆ ಯಾವಾಗಲೂ ಇದ್ದಂತೆ ಈಗಲೂ ಅದು ರಾಷ್ಟ್ರ-ವಿರೋಧಿ.*

➢ *ವಿ.ಹೆಚ್.ಪಿ. ದೇವಸ್ಥಾನದ ಹೆಸರಲ್ಲಿ ಜನಗಳ ಧಾರ್ಮಿಕ ಭಾವನೆಗಳನ್ನು ದುರುಪಯೋಗ ಪಡಿಸಿಕೊಂಡು ಸಂಗ್ರಹಿಸಿದ ಬಹುಶಃ ಕೋಟಿಗಟ್ಟಲೆಯಷ್ಟು ಹಣದ ಸಾರ್ವಜನಿಕ ಲೆಕ್ಕಪತ್ರವನ್ನು ಪ್ರಕಟಿಸಬೇಕು. ಈ ಹಣವನ್ನು ಅದು ತನ್ನ ರಾಜಕೀಯ ಅಜೆಂಡಾಕ್ಕೆ ದುರುಪಯೋಗ ಪಡಿಸಿಕೊಳ್ಳುತ್ತಿದೆ.*

➢ *ಬಿ.ಜೆ.ಪಿ.ಯೊಂದಿಗೆ ಕೈಮಿಲಾಯಿಸಿ ಸಂಸತ್ತಿನಲ್ಲಿ ಕೂತಿರುವ ಸಾಧುಗಳು ಒಂದೋ ತಾವು ರಾಜಕಾರಣಿಗಳೆಂದು ಘೋಷಿಸಿಕೊಳ್ಳಬೇಕು, ಇಲ್ಲವೇ ಧರ್ಮದಿಂದ ದೂರವಾಗಬೇಕು. ಅವರು ಎರಡೂ ಆಗಲು ಸಾಧ್ಯವಿಲ್ಲ. ಉದ್ದನೆಯ ಗಡ್ಡ ಬಿಟ್ಟ ಮಾತ್ರಕ್ಕೆ ಯಾರೂ ಧಾರ್ಮಿಕ ವ್ಯಕ್ತಿಯಾಗುವುದಿಲ್ಲ.*

(ಕೃಪೆ-ಇಂಡಿಯನ್ ಎಕ್ಸ್‌ಪ್ರೆಸ್)
31-8-98

ಡಿಸೆಂಬರ್ 11 ರಂದು ಅಖಿಲ ಭಾರತ ವಿದ್ಯಾರ್ಥಿ ಮುಷ್ಕರ : ಎಸ್.ಎಫ್.ಐ. ಕರೆ

ದೇಶದ ವಿದ್ಯಾರ್ಥಿ ಸಮುದಾಯದ ಬಗ್ಗೆ ಬಿಜೆಪಿ, ಸರಕಾರದ ನಿರ್ಲಕ್ಷ್ಯದ ಧೋರಣೆಯ ವಿರುದ್ಧ ಡಿಸೆಂಬರ್ 11 ರಂದು ಒಂದು ಅಖಿಲ ಭಾರತ ಮುಷ್ಕರ ನಡೆಸಲು ಭಾರತ ವಿದ್ಯಾರ್ಥಿ ಫೆಡರೇಷನ್ ಕರೆ ನೀಡಿದೆ. ಆಗಸ್ಟ್ 20 ರಿಂದ 22 ರವರೆಗೆ ಜೋಧಪುರದಲ್ಲಿ ನಡೆದ ಎಸ್.ಎಫ್.ಐ. ಕೇಂದ್ರಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಬಿಜೆಪಿ ವಾರ್ಷಿಕ ಒಂದು ಕೋಟಿ ಉದ್ಯೋಗವಕಾಶದ ಭರವಸೆ ನೀಡಿತ್ತು. ಆದರೆ ಮೊದಲ ಐದು ತಿಂಗಳುಗಳಲ್ಲಿ ಒಂದು ಯೋಜನೆಯನ್ನೂ ಕೂಡಾ ರೂಪಿಸುವುದು ಅದಕ್ಕಾಗಿಲ್ಲ. ಬಜೆಟ್ಟಿನಲ್ಲಿ ಈ ಬಗ್ಗೆ ಯಾವುದೇ ವ್ಯವಸ್ಥೆಯಿಲ್ಲ ಎಂದು ಎಸ್.ಎಫ್.ಐ. ಕಾರ್ಯಕಾರಿ ಸಮಿತಿ ಟೀಕಿಸಿದೆ.

ಮಾನವ ಸಂಪನ್ಮೂಲ ಮಂತ್ರಿಗಳು 'ಉನ್ನತ ಶಿಕ್ಷಣ ವಲಯದಲ್ಲಿ ಸರಕಾರದ ಜವಾಬ್ದಾರಿಯೇನೂ ಇಲ್ಲ. ಶಿಕ್ಷಕರ ಸಂಬಳವನ್ನು ಶುಲ್ಕಗಳ ಮೂಲಕ ವಿದ್ಯಾರ್ಥಿಗಳು ತರಬೇಕು" ಎಂದಿರುವುದು ವಿದ್ಯಾರ್ಥಿ -ವಿರೋಧಿಯಾದ ಹೇಳಿಕೆ ಎಂದು ಸಭೆ ಖಂಡಿಸಿದೆ. ಪದವಿ ಮಟ್ಟದವರೆಗೆ ಹುಡುಗಿಯರಿಗೆ ಪುಕ್ಕಟೆ ಶಿಕ್ಷಣದ ಭರವಸೆಯೂ ಕೇವಲ ವಂಚನೆ ಎಂದು ಅದು ಹೇಳಿದೆ.


ಡಿಸೆಂಬರ್ 11 ರ ಅಖಿಲ ಭಾರತ ಮುಷ್ಕರದ ಮೊದಲು ಮೂರು ಹಂತಗಳ ಚಳುವಳಿ ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿ ಪ್ರಕಟಿಸಿದೆ. ಸಪ್ಟೆಂಬರ್ 5 ರಿಂದ 22 ರವರೆಗಿನ ಮೊದಲ ಘಟ್ಟದಲ್ಲಿ ವಿಚಾರ ಸಂಕಿರಣಗಳು, ಪ್ರಚಾರ ಹೋರಾಟಗಳು, ರ‍್ಯಾಲಿಗಳು, ಧರಣೆಗಳು, ಪ್ರತಿಭಟನಾ ಮತಪ್ರದರ್ಶನಗಳು ಇತ್ಯಾದಿಗಳನ್ನು ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲೂ ಸಂಘಟಿಸುವುದು, ಎರಡನೇ ಘಟ್ಟದಲ್ಲಿ ನವಂಬರ್ 4 ರಂದು ನವದೆಹಲಿಯಲ್ಲಿ ಒಂದು ರಾಷ್ಟ್ರೀಯ ವಿದ್ಯಾರ್ಥಿ ಸಮಾವೇಶ ನಡೆಯುತ್ತದೆ. ಇದರಲ್ಲಿ ವಿದ್ಯಾರ್ಥಿಗಳ ಬೇಡಿಕೆಗಳ ಪಟ್ಟಿ ತಯಾರಿಸಲಾಗುವುದು. ಮೂರನೇ ಹಂತದಲ್ಲಿ ಡಿಸೆಂಬರ್ 11 ರ ಮುಷ್ಕರಕ್ಕೆ ದೇಶಾದ್ಯಂತ ಬೃಹತ್ ಪ್ರಚಾರಾಂದೋಲನ.

ಎಸ್.ಎಫ್.ಐ. ಅಧ್ಯಕ್ಷ ಕೆ.ಎನ್.ಬಾಲಗೋಪಾಲ ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಬ್ರತಿನ್ ಸೆನ್‌ಗುಪ್ತ ವರದಿ ಮಂಡಿಸಿದರು. ಅಖಿಲ ಭಾರತ ವಿ.ವಿ. ಮತ್ತು ಕಾಲೇಜು ಅಧ್ಯಾಪಕರ ಮುಷ್ಕರಕ್ಕೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಲಾಯಿತು.

ಅಸ್ಸಾಂ, ಬಿಹಾರ್‌ಗಳಲ್ಲಿನ ಗಂಭೀರ ಪ್ರವಾಹ ಪರಿಸ್ಥಿತಿಯ ಬಗ್ಗೆ ಸಭೆ ತನ್ನ ತೀವ್ರ ಆತಂಕ ವ್ಯಕ್ತಪಡಿಸಿತು. ಕೇಂದ್ರ ಸರಕಾರ ತಕ್ಷಣ ಪರಿಹಾರ ಒದಗಿಸಬೇಕು ಎಂದು ಎಸ್.ಎಫ್.ಐ. ಕಾರ್ಯಕಾರಿ ಸಮಿತಿ ಕರೆ ನೀಡಿದೆ.

ವಾರದ ವ್ಯಂಗ್ಯ ಚಿತ್ರ

'ದಿ ಹಿಂದು'ನಲ್ಲಿ ಸುರೇಂದ್ರನ್



ಅವರೂ ಹೇಳುತ್ತಾರೆ ....

"ಮಂಡೇಲಾರೇ ನಮ್ಮೊಂದಿಗೆ ಇಲ್ಲವೆಂದರೆ...."

ಭಾರತವು ತೀರ ಇತ್ತೀಚಿನವರೆಗೂ ತನ್ನದೇ ಆದ ಒಂದು ನೀತಿಯನ್ನು ಹೊಂದಿದ್ದಿತು. ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿ ಸರಕಾರದ ಸೂತ್ರ ವಹಿಸಿಕೊಂಡ ಮೇಲೆ ಭಾರತಕ್ಕೆ ಒಂದು ವಿದೇಶಿ ನೀತಿಯೇ ಇಲ್ಲವೇನೋ ಎಂಬ ಭಾವನೆ, ದೇಶದ ಒಳಗೆ ಹಾಗೂ ಹೊರಗೆ ಇರುವ ಜನರಿಗೆ ಉಂಟಾಗಿದೆ. ಕೇಂದ್ರದಲ್ಲಿ ಭಾಜಪ ಸರಕಾರ ಅಧಿಕಾರಕ್ಕೆ ಬಂದೊಡನೆಯೇ ಪೋಖ್ರಾನದಲ್ಲಿ ಪರಮಾಣು ಬಾಂಬನ್ನು ಆಸ್ಫೋಟನೆ ಮಾಡಿ ಅಟಲರು ಜಗತ್ತಿನಲ್ಲಿ ಬಾಂಬ್ ಇದ್ದವರನ್ನೂ ಇಲ್ಲದಿದ್ದವರನ್ನೂ ಭಾರತದ ವಿರುದ್ಧ ಎದ್ದು ನಿಲ್ಲುವಂತೆ ಮಾಡಿದರು. ಬಾಂಬ್ ಇಲ್ಲದ ದೇಶಗಳು ಭಾರತವು, ಪರಮಾಣು ಬಾಂಬು ಆಸ್ಫೋಟನೆಗೊಳ್ಳುವವರೆಗೂ ಬುದ್ಧ ಗಾಂಧಿಯವರ ಶಾಂತಿಪ್ರಿಯ ದೇಶವೆನ್ನುವ ಹುಲುಸರಿವೆಯನ್ನು ತನ್ನ ತಲೆಗೆ ಕಟ್ಟಿಕೊಂಡಿದ್ದಿತು. ಈಗ ಭಾರತಕ್ಕೆ ಹೇಳಿಕೊಳ್ಳಲು ಆ ಮಹಾತ್ಮ ಕೂಡ ಉಳಿಯಲಿಲ್ಲ.

ತಪ್ಪು ಮಾಡಿದ ಶಾಲಾ ವಿದ್ಯಾರ್ಥಿ, ತನ್ನ ತಪ್ಪಿನ ಬಗೆಗೆ ವಿವರಣೆ ನೀಡಿ, ಹೆಡ್ ಮಾಸ್ತರರಿಗೆ ಪತ್ರ ಬರೆದು ಹೇಳುವಂತೆ ಪ್ರಧಾನ ಮಂತ್ರಿಯವರು ಅಮೇರಿಕೆಯ ಅಧ್ಯಕ್ಷ ಬಿಲ್‌ಕ್ಲಿಂಟನ್‌ರಿಗೆ ಕಾಗದ ಬರೆದು ಪರಮಾಣು ಬಾಂಬನ್ನು ಸ್ಫೋಟಿಸಬೇಕಾದ ಅವಶ್ಯಕತೆಯ ಹಿನ್ನೆಲೆಯನ್ನು ಅವರಿಗೆ ತಿಳಿಸಿದರು. ಅವರು ಇಷ್ಟು ಮಾತ್ರವೇ ಮಾಡಲಿಲ್ಲ. ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಕ್ಲಿಂಟನ್‌ರಿಗೆ ಬರೆದ ಕಾಗದದಲ್ಲಿ, ಭಾರತವು ಪರಮಾಣು ಬಾಂಬ್ ಆಸ್ಫೋಟಿಸುವುದಕ್ಕೆ ಚೀನಾ ಕಾರಣವೆಂದು ಹೇಳಿ, ಚೀನಾವನ್ನು ಅಪರಾಧೀ ಸ್ಥಾನದಲ್ಲಿ ನಿಲ್ಲಿಸಿದರು.

ವಾಜಪೇಯಿಯವರು ಅಮೇರಿಕೆಯ ಅಧ್ಯಕ್ಷರಿಗೆ ಬರೆದ ಪತ್ರವು ಭಾರತದ ವಿದೇಶ ನೀತಿಯ ದಿವಾಳಿತನವನ್ನು ತೋರಿಸಿ ಕೊಡುತ್ತದೆ. ಪ್ರಬುದ್ಧತೆ ಇರುವ ಯಾವ ಪ್ರಧಾನಮಂತ್ರಿಯೂ ಇಂಥ ರಾಜತಾಂತ್ರಿಕ ಅನೌಚಿತ್ಯ ಎಸಗುವುದು ಸಾಧ್ಯವಿರಲಿಲ್ಲ. ವಾಜಪೇಯಿಯವರಿಂದ ಬಾಲಿಶ ತಪ್ಪು ಘಟಿಸಿತು. ಆ ಪತ್ರವು ಬಹಿರಂಗಕ್ಕೆ ಬಂದು, ಅದರಿಂದ ಭಾರತಕ್ಕೆ ಬಹಳಷ್ಟು ಅನರ್ಥ ಸಂಭವಿಸಿದೆ.

ಭಾರತವು ಅಟಂ ಬಾಂಬ್ ಆಸ್ಫೋಟಿಸಿ, ತನ್ನನ್ನು ಪಾಕಿಸ್ತಾನದ ಮಟ್ಟಕ್ಕೆ ಇಳಿಸಿಕೊಂಡಿತು. ಅದಕ್ಕೂ ಪರಮಾಣು ಬಾಂಬ್ ಆಸ್ಫೋಟಿಸಲು ಭಾರತ ಪ್ರಚೋದನೆ ಒದಗಿಸಿಕೊಟ್ಟಿತು. ಈಗ ಆಡಿಕೊಳ್ಳುವವರು, ಭಾರತವನ್ನು ಪಾಕಿಸ್ತಾನದ ಜತೆ ಸೇರಿಸಿ ಆಡಿ ಕೊಳ್ಳುತ್ತಾರೆ. ರಾಷ್ಟ್ರಗಳ ಮಾಲಿಕೆಯಲ್ಲಿದ್ದ ಹೆಚ್ಚುಗಾರಿಕೆಯನ್ನು ಭಾರತ ಕಳೆದುಕೊಂಡಿತು. ಭಾರತವು ಈಗ ತನ್ನ ನೀತಿ ಮತ್ತೆ ಹೇಳಿಕೊಂಡರೆ, ಅದು ಯಾರೂ ನಂಬದ ಅರ್ಥವಿಲ್ಲದ ಬಡಾಯಿ ಎನಿಸುತ್ತದೆ.

ಪ್ರಧಾನ ಮಂತ್ರಿ ಶ್ರೀ ಅಟಲಬಿಹಾರಿ ವಾಜಪೇಯಿಯವರಿಂದ, ಕಾಶ್ಮೀರ ಪ್ರಶ್ನೆಯ ಸಂಬಂಧವಾಗಿ ದಕ್ಷಿಣ ಆಫ್ರಿಕೆಯ ಅಧ್ಯಕ್ಷ, ನೆಲ್ಸನ್ ಮಂಡೇಲಾರನ್ನು ತಮ್ಮ ಕಡೆಗೆ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಅದರಲ್ಲಿ ಅವರು ಸಂಪೂರ್ಣ ಸೋತಿದ್ದಾರೆ. ಭಾರತದ ಸ್ನೇಹಿತರೆನ್ನುವವರು ಜಗತ್ತಿನಲ್ಲಿ ಎಷ್ಟು ಜನ ಇದ್ದಾರೆ? ಅವರು ಎಲ್ಲಿ ಇದ್ದಾರೆ? ಮಂಡೇಲಾರೇ ನಮ್ಮೊಂದಿಗೆ ಇಲ್ಲವೆಂದರೆ ಬೇರೆ ಯಾರು ಇದ್ದಾರೆ?

- 'ಪ್ರಪಂಚ' ವಾರಪತ್ರಿಕೆಯ ಸಂಪಾದಕೀಯದಿಂದ
ಸೆಪ್ಟೆಂಬರ್ 13,1998

ರೋಗಗ್ರಸ್ತ ಸಾರ್ವಜನಿಕ ಉದ್ದಿಮೆಗಳ ನೌಕರರಿಗೆ ಮಧ್ಯಂತರ ಪರಿಹಾರ ನಿರಾಕರಣೆ

ಸಿಐಟಿಯು ಖಂಡನೆ

ಭಾರತ ಸರಕಾರದ ಸಾರ್ವಜನಿಕ ಉದ್ದಿಮೆಗಳ ಇಲಾಖೆ ಆಗಸ್ಟ್ 19 ರಂದು ಹೊರಡಿಸಿದ ಸುತ್ತೋಲೆ ಐ.ಡಿ.ಎ. ವಿಧಾನದಲ್ಲಿ ತುಟ್ಟಿಭತ್ಯೆ ನೀಡುವ ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳ ನೌಕರರಿಗೆ ಮೂಲ ವೇತನದ 10% ರಷ್ಟು (ಕನಿಷ್ಠ ರೂ. 280/-) ಮಧ್ಯಂತರ ಪರಿಹಾರ ನೀಡಬೇಕೆಂಬ ಸಲಹೆ ಮಾಡಿದೆ. ಆದರೆ 1.1.92 ರಿಂದ ತಮ್ಮ ವೇತನಗಳನ್ನು ಪರಿಷ್ಕರಿಸದ ರೋಗಗ್ರಸ್ತ ಹಾಗೂ ಇತರ ನಷ್ಟ ಮಾಡುತ್ತಿರುವ ಘಟಕಗಳಲ್ಲಿ ಮಧ್ಯಂತರ ಪರಿಹಾರ ನೀಡಬಾರದು ಎಂದು ಅದು ಹೇಳಿದೆ. ಇದನ್ನು ಸಿಐಟಿಯು ಕಾರ್ಯದರ್ಶಿ ಮಂಡಳಿ ಖಂಡಿಸಿದೆ.

ಈ ಘಟಕಗಳ ನೌಕರರನ್ನು ಈಗಾಗಲೇ 1.1.92 ರಿಂದ ವೇತನ ಪರಿಷ್ಕರಣದಿಂದ ವಂಚಿಸಲಾಗಿದೆ. ಪರಿಷ್ಕೃತ ತುಟ್ಟಿಭತ್ಯೆಗಳನ್ನು ನೀಡಿಲ್ಲ. ಈ ಬಗ್ಗೆ ಭಾರತ ಸರಕಾರ ಮತ್ತು ಕೇಂದ್ರೀಯ ಕಾರ್ಮಿಕ ಸಂಘಗಳ ನಡುವೆ ಒಪ್ಪಂದವಾಗಿದ್ದರೂ ಅದನ್ನು ಉಲ್ಲಂಘಿಸಲಾಗಿದೆ. ಈ ಘಟಕಗಳು ರೋಗಗ್ರಸ್ತವಾಗಿದ್ದು ಸರಕಾರದ ತಪ್ಪು ನೀತಿಗಳಿಂದಾಗಿ. ಆದ್ದರಿಂದ ಇದಕ್ಕೆ ನೌಕರರನ್ನು ಈ ರೀತಿ ಶಿಕ್ಷಿಸುವುದು, ವಂಚಿತರಾಗಿಸುವುದು ಸರಿಯಲ್ಲ ಎಂದು ಸಿಐಟಿಯು ಹೇಳಿದೆ.

ರೋಗಗ್ರಸ್ತ ಉದ್ದಿಮೆಗಳ ನೌಕರರಿಗೆ ಮಧ್ಯಂತರ ಪರಿಹಾರದ ಮೇಲಿನ ಈ ನಿರ್ಬಂಧವನ್ನು ಹಿಂತೆಗೆದುಕೊಳ್ಳಬೇಕು, ಈ ಘಟಕಗಳ ಪುನಶ್ಚೇತನಕ್ಕೆ ಶೀಘ್ರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಐಟಿಯು ಆಗ್ರಹ ಪಡಿಸಿದೆ. ಐಕ್ಯ ಹೋರಾಟದ ಮೂಲಕ ಸರಕಾರದ ಈ ನೌಕರ-ವಿರೋಧಿ, ಸಾರ್ವಜನಿಕ ವಲಯ-ವಿರೋಧಿ ನೀತಿಯನ್ನು ವಿರೋಧಿಸಬೇಕು ಎಂದೂ ಅದು ಕಾರ್ಮಿಕ ವರ್ಗ ಮತ್ತು ಕಾರ್ಮಿಕ ಆಂದೋಲನಕ್ಕೆ ಕರೆ ನೀಡಿದೆ.

ಈ ಮೊದಲು ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳಲ್ಲಿ ಸೂಪರ್‌ವೈಸರ್‌ಗಳು ಮತ್ತು ಅಧಿಕಾರಿಗಳಿಗೆ ವೇತನ ಪರಿಷ್ಕರಣದ ಬಗ್ಗೆ ಪರಿಶೀಲಿಸಲು ನೇಮಕವಾಗಿರುವ ನ್ಯಾಯಮೂರ್ತಿ ಮೋಹನ್ ಆಯೋಗದ ಎದುರು ಕೂಡಾ ಸಿಐಟಿಯು ತನ್ನ ವಾದ ಮಂಡಿಸುತ್ತಾ, ರೋಗಗ್ರಸ್ತ ಘಟಕಗಳ ನೌಕರರಿಗೆ ಈ ರೀತಿ ಅನ್ಯಾಯ ಮಾಡುವುದು ಸರಿಯಲ್ಲ ಎಂದು ವಾದಿಸಿತ್ತು. ಅಧಿಕಾರಿಗಳಿಗೆ ವೇತನ ಪರಿಷ್ಕರಣೆ ಮಾಡುವಾಗ ಐದನೇ ವೇತನ ಆಯೋಗ ಸರ್ಕಾರಿ ಅಧಿಕಾರಿಗಳಿಗೆ ನೀಡಿದ್ದನ್ನು ಗಮನದಲ್ಲಿಟ್ಟುಕೊಳ್ಳಬೇಕಾದ, ಸರಕಾರದ ಸಾರ್ವಜನಿಕ ವಲಯ-ವಿರೋಧಿ ನಿಲುವುಗಳಿಂದ ಪ್ರಭಾವಿತರಾಗಬಾರದೆಂದು ಸಿಐಟಿಯು ಆಗ್ರಹಪಡಿಸಿದೆ.

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by P. Ramachandra Rao for Communist Party of India(Marxist), Karnataka State Committee, EDITOR: P.RAMACHANDRA RAO